UAHSBL007

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ
ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ
ವಿಸ್ತರಣಾ ನಿರ್ದೇಶನಾಲಯ, ಶಿವಮೊಗ್ಗ

# ಯಶಸ್ವಿ ರೈತ ಸಾಧಕರು

## "ಚಿಕ್ಕಮಗಳೂರು ಜಿಲ್ಲೆಯ ಪ್ರಗತಿಪರ ರೈತರ ಜೊತೆ ಒಂದು ಪಯಣ"

ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆ
ಚಿಕ್ಕಮಗಳೂರು ಜಿಲ್ಲೆ

**ಯಶಸ್ವಿ ರೈತ ಸಾಧಕರು**
**"ಚಿಕ್ಕಮಗಳೂರು ಜಿಲ್ಲೆಯ ಪ್ರಗತಿಪರ ರೈತರ ಜೊತೆ ಒಂದು ಪಯಣ"**


**ಸಂಪಾದಕರು:**

**ಡಾ. ಎಸ್.ಪಿ. ನಟರಾಜು**
ವಿಸ್ತರಣಾ ನಿರ್ದೇಶಕರು
ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ
ಶಿವಮೊಗ್ಗ

**ಡಾ. ಭರತ್ ಕುಮಾರ್ ಟಿ.ಪಿ**
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ

**ಡಾ. ಗಿರೀಶ್ ಆರ್.**
ವಿಜ್ಞಾನಿ (ಸಸ್ಯ ಸಂರಕ್ಷಣೆ)
ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ

**ಡಾ. ಶಿವಕುಮಾರ್ ಎಲ್.**
ವಿಜ್ಞಾನಿ (ಮಣ್ಣು ವಿಜ್ಞಾನ)
ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ

**ಪುಟ ವಿನ್ಯಾಸ ಮತ್ತು ಬೆರಳಚ್ಚು:**

**ಶ್ರೀಮತಿ ಫಾತಿಮ ಜಹಾರ**
ಕಾರ್ಯಕ್ರಮ ಸಹಾಯಕರು (ಗಣಕಯಂತ್ರ)
ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ



**ಪುಟಗಳ ಸಂಖ್ಯೆ: 48**
**ಪ್ರಕಟಣೆ : ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆ**
**ವರ್ಷ: 2019**
**ಪ್ರತಿ : 250**

# ಮುನ್ನುಡಿ

ಪ್ರತಿಯೊಬ್ಬ ರೈತರು ಸಮಗ್ರ ಕೃಷಿ ಪದ್ಧತಿ ನೀತಿಯನ್ನು ಅನುಸರಿಸಿದರೆ, ಆರ್ಥಿಕವಾಗಿ ಸಬಲರಾಗಬಲ್ಲರು. ರೈತನ ಆದಾಯವನ್ನು ಹೆಚ್ಚಿಸುವ ಪ್ರಮುಖ ಮಾರ್ಗವೆಂದರೆ ಸಮಗ್ರ ಕೃಷಿ ಪದ್ಧತಿಯ ಅನುಸರಣೆಯಿಂದ ದುಡಿಮೆಯ ವಿವಿಧ ಮಾರ್ಗಗಳನ್ನು ರೂಢಿಸಿಕೊಳ್ಳುವುದು. ಸಮಗ್ರ ಕೃಷಿ ಪದ್ಧತಿಯು ರೈತನಿಗೆ ಅನೇಕ ವಿಧಗಳಲ್ಲಿ ಲಾಭದಾಯಕ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಇದು ಇಡೀ ಕುಟುಂಬವೇ ಭಾಗವಹಿಸಿ ಮಾಡಬೇಕಾದ ಒಂದು ಕಾರ್ಯ. ಕೃಷಿಯಲ್ಲಿ ಅನೇಕ ಬೆಳೆಗಳನ್ನು ಬೆಳೆಯುವುದರ ಜೊತೆಗೆ ಹೈನುಗಾರಿಕೆ, ಕುರಿ, ಕೋಳಿ, ಹಂದಿ ಸಾಕಣೆ, ರೇಷ್ಮೆ ಕೃಷಿ, ಜೇನು ಕೃಷಿ ಮತ್ತು ಅಣಬೆ ಕೃಷಿ ಉಪಕಸುಬುಗಳನ್ನು ಕೈಗೊಂಡು ಸಮಗ್ರ ಕೃಷಿಯನ್ನು ಕೈಗೊಂಡಾಗ ಅಧಿಕ ವಾರ್ಷಿಕ ಆದಾಯವನ್ನು ಪಡೆಯಬಹುದು. ರೈತನ ಆದಾಯವನ್ನು ಹೆಚ್ಚು ಮಾಡುವುದರಲ್ಲಿ ಸಮಗ್ರ ಕೃಷಿ ಪದ್ಧತಿ ಒಂದು ಪ್ರಮುಖ ಹೆಜ್ಜೆ. ಕೃಷಿ ವಿಜ್ಞಾನ ಕೇಂದ್ರವು ಚಿಕ್ಕಮಗಳೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿರುವಂತಹ ಉತ್ತಮ ಪ್ರಗತಿಪರ ರೈತ/ರೈತ ಮಹಿಳೆಯರ ಸಾಧನೆಗಳ ಸಂಕ್ಷಿಪ್ತ ಮಾಹಿತಿಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ, ರೈತ ಸಮುದಾಯಕ್ಕೆ ತಲುಪಿಸುವ ಪ್ರಯತ್ನ ಮಾಡುತ್ತಿದೆ. ಈ ಪುಸ್ತಕವು ರೈತ ಸಮುದಾಯದಲ್ಲಿ ಮತ್ತಷ್ಟು ಹುರುಪು, ಹುಮ್ಮಸ್ಸು ನೀಡಲೆಂದು ಆಶಿಸುತ್ತೇನೆ.

ಕೃಷಿ ಕ್ಷೇತ್ರದಲ್ಲಿ ಹೆಚ್ಚು ಸಾಧನೆಗೈದು ದೇಶದ ಆರ್ಥಿಕ ಸುಧಾರಣೆಯಲ್ಲಿ ನಾವೆಲ್ಲರೂ ಭಾಗಿಯಾಗೋಣ ಎಂದು ತಿಳಿಸುತ್ತಾ ಈ ಒಂದು ಸುಂದರ ಹೊತ್ತಿಗೆಯನ್ನು ಹೊರ ತರುತ್ತಿರುವ ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆಯ ವಿಜ್ಞಾನಿಗಳು ಮತ್ತು ಸಿಬ್ಬಂದಿ ವರ್ಗಕ್ಕೆ ಶುಭ ಹಾರೈಸುತ್ತೇನೆ.

**ಡಾ. ಎಸ್.ಪಿ. ನಟರಾಜು**
**ವಿಸ್ತರಣಾ ನಿರ್ದೇಶಕರು**



**ಶ್ರೀಯುತ ಅಮರ್ ಡಿಸೋಜ**

**ವಿಳಾಸ: ಬಿನ್ ಹೆನ್ರಿ ಡಿಸೋಜ**
**ಮಡೇನೆರಲು, ಕೆಳಗೂರು, ಆಲ್ದೂರು (ಹೋ)**
**ಚಿಕ್ಕಮಗಳೂರು (ತಾ)–577 111**
**ಮೊಬೈಲ್ ಸಂ: 9900431066/08262–254029**

ಚಿಕ್ಕಮಗಳೂರು ತಾಲ್ಲೂಕು ಮಡೇನೆರಲು ಗ್ರಾಮದ ಶ್ರೀಯುತ ಅಮರ್ ಡಿಸೋಜರವರು 2004ನೇ ಇಸವಿಯಲ್ಲಿ ಕೃಷಿ ಲಾಭದಾಯಕವಲ್ಲವೆಂದು ಕೃಷಿ ವಿಜ್ಞಾನ ಕೇಂದ್ರ ಮೂಡಿಗೆರೆಗೆ ಭೇಟಿ ನೀಡಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ನಂತರ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಒಂದೇ ಬೆಳೆ ಅವಲಂಬಿಸಿದಾಗ ರೈತರಿಗೆ ನಷ್ಟವುಂಟಾಗುತ್ತದೆ. ಈ ನಿಟ್ಟಿನಲ್ಲಿ ಕೃಷಿಯೊಂದಿಗೆ ಉಪಕಸುಬಿಗಾಗಿ ಹಂದಿ, ಕುರಿ, ಮೀನು ಸಾಕಾಣಿಕೆ ಮಾಡಿ ಸಮಗ್ರ ಕೃಷಿ ಮಾಡಬೇಕು ಎಂದು ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ ಶ್ರೀಯುತರಿಗೆ ಉತ್ತೇಜನ ನೀಡಲು ಹಾಗೂ ಮನಸ್ಥಿತಿ ಬದಲಾಯಿಸಲು 2005 ರಲ್ಲಿ ಸಮಗ್ರ ಬೇಸಾಯಕ್ಕೆ ಸುಸ್ಥಿರ ಕೃಷಿ ಯೋಜನೆಯಿಂದ 2 ಹಂದಿ ಮರಿ ಹಾಗೂ ಮೀನು ಕೃಷಿ ಮಾಡಲು ವಿಸ್ತರಣಾ ಘಟಕದಿಂದ ಸಹಕರಿಸಿರುತ್ತಾರೆ. ಆ ಉಪಕಸುಬು 2 ಹಂದಿ ಮರಿಯಿಂದ ಪ್ರಾರಂಭವಾದ ಹಂದಿ ಸಾಕಾಣಿಕೆ ಘಟಕ ಈಗ 800 ಹಂದಿಗಳ ಸಾಕುವ ಮಟಕ್ಕೆ ಬೆಳೆದು ಪ್ರತಿ ವರ್ಷ ಸುಮಾರು ರೂ. 1 ಕೋಟಿಗೂ ಹೆಚ್ಚು ವಹಿವಾಟು ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಅದೇ ರೀತಿ ಮೀನು ಸಾಕಾಣಿಕೆಯಿಂದ ಪ್ರತೀ ವರ್ಷ ಸುಮಾರು 1 ಟನ್ ಮೀನು ಮಾರಾಟ ಮಾಡುವ ಸಾಮರ್ಥ್ಯ ಹೊಂದಿರುತ್ತಾರೆ. ಈ ಬದಲಾವಣೆಯಿಂದ ಕೃಷಿ ಲಾಭವಲ್ಲವೆಂದು ಜಿಗುಪ್ಸೆಯಾದ ರೈತ ಇವತ್ತು ತಮ್ಮ 21 ಎಕರೆ ಜಮೀನಿನಲ್ಲಿ ಕಾಫಿ, ಕಾಳುಮೆಣಸು, ಅಡಿಕೆ, ಅಂಟುವಾಳ, ಭತ್ತ, ಸಿಲ್ವರ್, ನೇರಳೆ ಬೆಳೆಗಳನ್ನು ಬೆಳೆದಿರುತ್ತಾರೆ. ಸುಸ್ಥಿರ ಕೃಷಿಗಾಗಿ ಕೃಷಿ ಜೊತೆಯಲ್ಲಿ ಹಂದಿ ಸಾಕಾಣಿಕೆ, ಮೀನು ಸಾಕಾಣಿಕೆ, ಕೋಳಿ ಸಾಕಾಣಿಕೆ, ಹೈನುಗಾರಿಕೆ, ನಾಯಿ ಸಾಕಾಣಿಕೆಯನ್ನು ಮಾಡುತ್ತಿದ್ದಾರೆ. ಪ್ರಸ್ತುತ 24 ಹಸು ಕರುಗಳನ್ನು ಸಾಕಲಾಗುತ್ತಿದೆ ಹಾಗೂ ವಿದೇಶಿ ತಳಿಯ ಮೂರು ಜಾತಿಯ ನಾಯಿಗಳ ತಳಿಯನ್ನು ಸಂವರ್ಧನೆ ಮಾಡಿ ಮಾರಾಟ ಮಾಡಲಾಗುತ್ತಿದೆ. ಶ್ರೀಯುತರು ಕಾಫಿ ಹಾಗೂ ಮೆಣಸಿನ ನರ್ಸರಿಯನ್ನು ಮಾಡಿ ತಮ್ಮ ಸ್ವಂತ ಬಳಕೆಯ ನಂತರ ಇತರೆ ರೈತರಿಗೆ ಮಾರಾಟ ಮಾಡುತ್ತಿದ್ದಾರೆ. ಶ್ರೀಯುತರು ಸಾವಯವ ಕೃಷಿಯನ್ನು ಮಾಡುತ್ತಿದ್ದು ಹಸು ಸಾಕಾಣಿಕಾ ಘಟಕ, ಹಂದಿ ಸಾಕಾಣಿಕಾ ಘಟಕದಿಂದ ಬರುವ ಸಗಣಿ ಮತ್ತು ತ್ಯಾಜ್ಯ ಹಾಗೂ ಕಾಫಿ ಪಲ್ಪಿಂಗ್ ಸಿಪ್ಪೆಯನ್ನು ಬೆರೆಸಿ ಗುಣಮಟ್ಟದ ಕಾಂಪೋಸ್ಟ್ ಮಾಡುತ್ತಿದ್ದಾರೆ.

ಶ್ರೀಯುತರು ಕೃಷಿ ವಿಜ್ಞಾನ ಕೇಂದ್ರ, ಪಶು ವಿಜ್ಞಾನ ವಿಶ್ವವಿದ್ಯಾಲಯ, ರೈತ ಸಂಪರ್ಕ ಕೇಂದ್ರ, ಕೃಷಿ, ತೋಟಗಾರಿಕಾ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯ ಮತ್ತು ಪಶು ಸಂಗೋಪನಾ ಇಲಾಖೆಗಳೊಂದಿಗೆ ನಿರಂತರ ಸಂಪರ್ಕ ಹೊಂದಿ, ಸಲಹೆ ಮತ್ತು ಮಾರ್ಗದರ್ಶನ ಪಡೆದು ನೂತನ ತಂತ್ರಜ್ಞಾನವನ್ನು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಂಡಿದ್ದಾರೆ. ಶ್ರೀ ಅಮರ್ ಡಿಸೋಜರವರು ವಿವಿಧ ಸಂಘ ಸಂಸ್ಥೆಗಳಿಂದ ಸನ್ಮಾನ ಹಾಗೂ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಶ್ರೀಯುತರು ಕೃಷಿಯಲ್ಲಿ ಬಹು ಮುಖ್ಯವಾಗಿ ಎದುರಿಸುತ್ತಿರುವ ಕೂಲಿಕಾರರ ಸಮಸ್ಯೆಯನ್ನು ನಿರ್ವಹಿಸಲು ಕೃಷಿ ಯಂತ್ರೋಪಕರಣಗಳನ್ನು ಬಳಸುವ ಮೂಲಕ ಸಮಸ್ಯೆಯನ್ನು ನಿರ್ವಹಣೆ ಮಾಡಿಕೊಂಡಿರುತ್ತಾರೆ. ಶ್ರೀಯುತರು ಮೌಲ್ಯವರ್ಧನೆಯಲ್ಲಿ ಹಾಗೂ ಸಂಸ್ಕರಣೆಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿದ್ದು, ತಮ್ಮ ಸ್ವಂತ ಮನೆಯಲ್ಲಿ ಹಂದಿಗಳಿಂದ ನಾಲ್ಕು ವಿಭಿನ್ನ ಮಾಂಸವಾಗಿ ವಿಂಗಡಿಸಿ ಸಂಸ್ಕರಣಾ ಘಟಕದಿಂದ ಸಂಸ್ಕರಣೆ ಮಾಡಿ ಹೆಚ್ಚು ಲಾಭವನ್ನು ಪಡೆಯುತ್ತಿದ್ದಾರೆ. ಕಾಳು ಮೆಣಸನ್ನು ಬಿಳಿ ಮೆಣಸನ್ನಾಗಿ ಮಾಡಿ ಮಾರಾಟ ಮಾಡುತ್ತಿದ್ದಾರೆ ಹಾಗೂ ಕಾಫಿಯನ್ನು ಪಲ್ಪಿಂಗ್ ಮಾಡಿ ಬೀಜವನ್ನು ಮಾಡಿ ಹೆಚ್ಚು ಲಾಭವನ್ನು ಪಡೆಯುತ್ತಿದ್ದಾರೆ.



**ಶ್ರೀಯುತ ಹೆಚ್.ಆರ್. ಚಂದ್ರೇಗೌಡ**

**ವಿಳಾಸ: ಬಿನ್ ರುದ್ರೇಗೌಡ**
**ರುದ್ರ ಫಾರಂ, ಲಕ್ಷ್ಮೀಪುರ**
**ಲಕ್ಯಾ (ಪೋ)**
**ಚಿಕ್ಕಮಗಳೂರು–577 160**
**ಮೊಬೈಲ್ ಸಂ: 9448665589**

ಚಿಕ್ಕಮಗಳೂರು ತಾಲ್ಲೂಕು ಲಕ್ಷ್ಮೀಪುರ ಗ್ರಾಮದ ಶ್ರೀಯುತ ಹೆಚ್.ಆರ್. ಚಂದ್ರೇಗೌಡರವರು ತಮ್ಮ 9 ಎಕರೆ ಜಮೀನಿನಲ್ಲಿ ದಾಳಿಂಬೆ, ಅಡಿಕೆ, ಕಾಫಿ, ಟೊಮ್ಯಾಟೋ, ಎಲೆಕೋಸು, ತೆಂಗು, ಕಾಳುಮೆಣಸು, ಸಪೋಟ ಮತ್ತು ಮಾವು ಬೆಳೆಗಳನ್ನು ಬೆಳೆದಿರುತ್ತಾರೆ. ಶ್ರೀಯುತರು ಹನಿ ನೀರಾವರಿಯ ಮೂಲಕ ನೀರು ನಿರ್ವಹಣೆ ಮಾಡುತ್ತಿದ್ದಾರೆ ಜೊತೆಗೆ ಲಘು ಪೋಷಕಾಂಶಗಳನ್ನು ಕೂಡ ನೀಡಿ ಸಮಗ್ರ ಪೋಷಕಾಂಶಗಳ ನಿರ್ವಹಣೆಯನ್ನು ಮಾಡುತ್ತಿರುತ್ತಾರೆ. ಶ್ರೀ ಚಂದ್ರೇಗೌಡರವರು ಸಾವಯವ ಕೃಷಿಯನ್ನು ಮಾಡುತ್ತಿದ್ದು ದನ, ಕುರಿ ಮತ್ತು ಕೋಳಿ ಗೊಬ್ಬರವನ್ನು ಟ್ರೈಕೋಡರ್ಮಾ ಹಾಗೂ ಅಝುಟೋಬ್ಯಾಕ್ಟರ್, ಪಿಎಸ್‌ಬಿ ಗಳಂತಹ ಸೂಕ್ಷ್ಮಾಣು ಜೀವಿಗಳನ್ನು ಬಳಸಿ ಬೆಲ್ಲದ ನೀರು ಹಾಗೂ ಹುಳಿ ಮಜ್ಜಿಗೆ ಸೇರಿಸಿ ಉತ್ತಮ ಗುಣಮಟ್ಟದ ಕಾಂಪೋಸ್ಟನ್ನು ತಯಾರಿಸಿಕೊಂಡು ತಮ್ಮ ಬೆಳೆಗಳಿಗೆ ಪೋಷಕಾಂಶವಾಗಿ ನೀಡುತ್ತಿರುತ್ತಾರೆ. ಶ್ರೀಯುತರು ಹೈನುಗಾರಿಕೆಯಲ್ಲೂ ತೊಡಗಿದ್ದು ಹಾಲು ಉತ್ಪಾದಿಸಿ ಹೆಚ್ಚಿನ ಆದಾಯವನ್ನು ಪಡೆಯುತ್ತಿದ್ದಾರೆ. ಶ್ರೀಯುತರು ಮಾರುಕಟ್ಟೆ ಅನುಸಾರವಾಗಿ ಬೆಳೆಗಳನ್ನು ಆಯ್ಕೆ ಮಾಡಿ ಮಾರುಕಟ್ಟೆ ಮಾಹಿತಿಯನ್ನು ಪಡೆದು ಉತ್ತಮ ಬೆಲೆಗೆ ತಮ್ಮ ಬೆಳೆಗಳನ್ನು ಮಾರಾಟ ಮಾಡುತ್ತಿದ್ದು, ಮಧ್ಯವರ್ತಿಗಳನ್ನು ದೂರವಿಡುವುದರ ಜೊತೆಗೆ ನೇರವಾಗಿ ಮಾರುಕಟ್ಟೆಗೆ ಸರಕನ್ನು ತಲುಪಿಸುವ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಶ್ರೀಯುತರು ತಮ್ಮ ತೋಟದಲ್ಲಿ ಅಳವಡಿಸಿಕೊಂಡಿರುವ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸಿಕೊಡುವ ನಿಟ್ಟಿನಲ್ಲಿ ದೃಶ್ಯಮಾಧ್ಯಮ ಮತ್ತು ಆಕಾಶವಾಣಿಯಲ್ಲಿ ಮಾಹಿತಿಯನ್ನು ನೀಡಿರುತ್ತಾರೆ. ಶ್ರೀಯುತರು ರೈತ ಸಂಪರ್ಕ ಕೇಂದ್ರ, ಕೃಷಿ, ತೋಟಗಾರಿಕಾ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯ ಮತ್ತು ಪಶು ಸಂಗೋಪನಾ ಇಲಾಖೆಗಳೊಂದಿಗೆ ನಿರಂತರ ಸಂಪರ್ಕ ಹೊಂದಿ ಸಲಹೆ ಮತ್ತು ಮಾರ್ಗದರ್ಶನ ಪಡೆದು ನೂತನ ತಂತ್ರಜ್ಞಾನವನ್ನು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಂಡಿದ್ದಾರೆ. ಶ್ರೀ ಚಂದ್ರೇಗೌಡರವರು ವಿವಿಧ ಸಂಘ ಸಂಸ್ಥೆಗಳಿಂದ ಸನ್ಮಾನ ಹಾಗೂ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಶ್ರೀಯುತರು ವಿವಿಧ ಸಂಘ ಸಂಸ್ಥೆಗಳ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುತ್ತಿದ್ದು ಹಾಗೂ ತಮ್ಮ ತೋಟಗಳಿಗೆ ಬರುವ ರೈತರಿಗೆ ಮಾಹಿತಿಯನ್ನು ನೀಡುತ್ತಿದ್ದು ಮಾದರಿ ಕೃಷಿಕರಾಗಿ, ಕೃಷಿಯನ್ನು ಬೆಳೆಸಿ ಉಳಿಸುವ ಕಡೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ.

**ಶ್ರೀ. ಎರೆಹುಳು ಈಶ್ವರಪ್ಪ**
**ವಿಳಾಸ: ಜಿ. ಎಂ. ಈಶ್ವರಪ್ಪ**
**ಬಿನ್ ಮರುಳಪ್ಪ**
**ಗರ್ಜೆ ಗ್ರಾಮ**
**ಕಡೂರು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ ಸಂಖ್ಯೆ: 9449412962**



ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಯಗಟಿ ಹೋಬಳಿ, ಗರ್ಜೆ ಗ್ರಾಮದ ಪ್ರಗತಿಪರ ಕೃಷಿಕರು ಶ್ರೀ. ಜಿ. ಎಂ. ಈಶ್ವರಪ್ಪ ಬಿನ್ ಮರುಳಪ್ಪ ಜಿಲ್ಲೆಯಾದ್ಯಾಂತ ಎರೆಹುಳು ಈಶ್ವರಪ್ಪ ಎಂದೇ ಪ್ರಖ್ಯಾತಿ ಹೊಂದಿರುತ್ತಾರೆ. ಗರ್ಜೆ ಗ್ರಾಮದಲ್ಲಿ 5.20 ಗುಂಟೆ ಹಿಡುವಳಿ ಹೊಂದಿದ್ದು ಪ್ರಸ್ತುತ ತೆಂಗು ಬೆಳೆ ಇರುತ್ತದೆ ಹಾಗೂ ಹಂಗಾಮಿಗೆ ಅನುಗುಣವಾಗಿ ಅಂತರ ಬೆಳೆಯಾಗಿ ರಾಗಿ, ತೊಗರಿ, ಅವರೆ, ಜೋಳ ಇತ್ಯಾದಿಗಳನ್ನು ಬೆಳೆಯುತ್ತಿರುತ್ತಾರೆ. ಇವರು 5 ದೇಸಿ ಹಸು ಮತ್ತು ಎರಡು ಎತ್ತುಗಳನ್ನು ಹೊಂದಿದ್ದು, ಪ್ರತಿ ದಿನ ಹಸುಗಳಿಂದ 8 ರಿಂದ 10 ಲೀಟರ್ ಹಾಲನ್ನು ಉತ್ಪಾದಿಸಿ ಅದರಿಂದ ಬೆಣ್ಣೆಯನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಹೈನುಗಾರಿಕೆಯಿಂದ ಬರುವ ಸಗಣಿ/ಗೊಬ್ಬರವನ್ನು ಎರೆಹುಳು ಘಟಕಕ್ಕೆ ಉಪಯೋಗಿಸಿ ಅದರೊಂದಿಗೆ ಗೊಬ್ಬರ್ ಅನಿಲ ಇಂಧನವಾಗಿಯೂ ಬಳಸುತ್ತಾರೆ.

ತೆಂಗು ಪ್ರಮುಖ ಬಹುವಾರ್ಷಿಕ ಬೆಳಯಾಗಿದ್ದು ವಾರ್ಷಿಕ 25000 ಕೊಬ್ಬರಿಯನ್ನು ಉತ್ಪಾದಿಸಿ ಮಾರಾಟ ಮಾಡುತ್ತಾರೆ. ಇವರು ಕೃಷಿ ಕಾರ್ಯಕ್ಕಾಗಿ ಒಂದು ಮಿನಿ ಟ್ರ್ಯಾಕ್ಟರ್, ಟ್ರ್ಯಾಕ್ಟರ್‌ಗೆ ಸಂಬಂಧಿಸಿದ ಉಪಕರಣಗಳು, ಚಾಫ್ ಕಟ್ಟರ್, ಸ್ಪ್ರೇಯರ್‌ಗಳನ್ನು ಬಳಸುತ್ತಾರೆ.

ಇವರು ಕೃಷಿಯೊಂದಿಗೆ ಉಪಕಸುಬಾಗಿ ಎರೆಹುಳು ಸಾಕಾಣಿಕೆ ಹಾಗೂ ಗೊಬ್ಬರ ಮಾರಾಟ ಮಾಡುತ್ತಾರೆ. ಇವರು 9 ಎರೆ ಹುಳು ಘಟಕಗಳನ್ನು (20*4*2 ಅಡಿ) ಹೊಂದಿದ್ದು, ಒಂದು ಘಟಕವನ್ನು ಮರಿಹುಳು ಉತ್ಪಾದನೆಗಾಗಿ ಮೀಸಲಿಟ್ಟಿರುತ್ತಾರೆ. ಉಳಿದ 8 ಘಟಕಗಳನ್ನು ಎರೆಹುಳು ಗೊಬ್ಬರ ಉತ್ಪಾದನೆಗೆ ಮೀಸಲಿಟ್ಟಿರುತ್ತಾರೆ. ಕೃಷಿಕರ ಮಾಹಿತಿ ಮೇರೆಗೆ 3 ತಿಂಗಳ ಅವಧಿಯಲ್ಲಿ ಸುಮಾರು 12 ರಿಂದ 15 ಟನ್ ಎರೆಹುಳು ಗೊಬ್ಬರ ಉತ್ಪಾದನೆ ಮಾಡುತ್ತಾರೆ. ಉತ್ಪಾದನೆಯಾದ ಗೊಬ್ಬರವನ್ನು ತಮ್ಮ ಸ್ವಂತ ಜಮೀನಿನಲ್ಲಿ ಬಳಸುವುದರ ಜೊತೆಗೆ ಪ್ರತಿ ಕೆ.ಜಿ.ಗೆ 8 ರೂಪಾಯಿಗಳಂತೆ ರೈತರಿಗೆ, ಸರ್ಕಾರೇತರ ಸಂಸ್ಥೆಗಳಿಗೆ ಹಾಗೂ ಸ್ವಸಹಾಯ ಸಂಘಗಳಿಗೆ ಮಾರಾಟ ಮಾಡುತ್ತಾರೆ. ಮುಂದುವರೆದು ಸುಮಾರು 1 ಕ್ವಿಂಟಾಲ್‌ನಷ್ಟು ಮರಿಹುಳು ಉತ್ಪಾದನೆಯನ್ನು ಪ್ರತಿ 3 ತಿಂಗಳಲ್ಲಿ ಪ್ರತಿ ಕೆ.ಜಿ. ಹುಳುವಿಗೆ ರೂ. 300ರಂತೆ ಮಾರಾಟ ಮಾಡುತ್ತಾರೆ. ಇದರಿಂದ ವಾರ್ಷಿಕವಾಗಿ ಸುಮಾರು ರೂ. 4,80,000 ಗಳನ್ನು ಎರೆಹುಳು ಗೊಬ್ಬರದಿಂದ ಹಾಗೂ ಮರಿಹುಳುವಿನ ಮಾರಾಟದಿಂದ ರೂ.1,20,000 ರಂತೆ ಒಟ್ಟು ವಾರ್ಷಿಕವಾಗಿ ರೂ. 6,00,000 ಆದಾಯವನ್ನು ಪಡೆಯುತ್ತಾರೆ. ಈ ಕಾರ್ಯದಿಂದಾಗಿ ಶ್ರೀಯುತರನ್ನು ಎರೆಹುಳು ಈಶ್ವರಪ್ಪ ಎಂದೆ ಕರೆಯುತ್ತಾರೆ.

ಇವರು ತಮ್ಮ ಕೃಷಿ ಕಾರ್ಯದ ಜೊತೆಗೆ ಆಕಾಶವಾಣಿ ಭದ್ರಾವತಿ, ಸರ್ಕಾರೇತರ ಸಂಸ್ಥೆಗಳ ಹಮ್ಮಿಕೊಳ್ಳುವ ತರಬೇತಿಗಳಲ್ಲಿ ಭಾಗವಹಿಸಿ ಎರೆಹುಳು ಗೊಬ್ಬರ ಉತ್ಪಾದಿಸುವ ಬಗ್ಗೆ ಹಾಗೂ ಸಾವಯವ ಕೃಷಿಯ ಬಗ್ಗೆ ಮಾಹಿತಿಗಳನ್ನು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಪ್ರಚಾರದಲ್ಲಿ ತೊಡಗಿಸಿಕೊಂಡಿರುತ್ತಾರೆ.

ಇವರು ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಹಾಗೂ ಇತರೆ ಸಂಸ್ಥೆಗಳಿಂದ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.



**ಶ್ರೀ ಅರವಿಂದ್ ಬಿ.ಸಿ.**
**ವಿಳಾಸ: ಭೂತನಕಾಡು ಎಸ್ಟೇಟ್**
**ಹಾಂದಿ**
**ಮೂಡಿಗೆರೆ**
**ದೂ: 9448320473**

ಶ್ರೀಯುತ ಅರವಿಂದ್ ರವರು ಉತ್ತಮ ಅರ್ಹತೆಯನ್ನು ಹೊಂದಿದ್ದರೂ ಸಹ, ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ಬಾಳೆ ಬೆಳೆಯನ್ನು ಮಲೆನಾಡು ಪ್ರದೇಶಕ್ಕೆ ಪರಿಚಯಿಸಲು ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟ ಮೊದಲ ವ್ಯಕ್ತಿ. ಇವರು ಕೃಷಿ ವಿಜ್ಞಾನ ಕೇಂದ್ರದೊಂದಿಗೆ ಬಹಳ ನಿಕಟ ಸಂಪರ್ಕ ಹೊಂದಿದ್ದರಿಂದ ತರಬೇತಿಗಳಲ್ಲಿ ಹಲವಾರು ಬಾರಿ ಭಾಗವಹಿಸಿ ಅದನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದುಕೊಂಡಿದ್ದಾರೆ. ಅವರು ಒಟ್ಟು 165 ಎಕರೆ ಜಮೀನು ಹೋಂದಿದು, ಕಾಫಿ, ಕಾಳು ಮೆಣಸು, ಅಡಿಕೆ, ಬಾಳೆ, ಏಲಕ್ಕಿ ಮತ್ತು ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಶ್ರೀಯುವ ಅರವಿಂದ್ ರವರು ಎರೆಹುಳುಗೊಬ್ಬರ ತಯಾರಿಕೆ ಹಾಗೂ ಕಾಂಪೋಸ್ಟಿಂಗ್ ತರಬೇತಿಗಳನ್ನು ಪಡೆದುಕೊಂಡು ಉತ್ಪಾದನಾ ಘಟಕವನ್ನು ಪ್ರಾರಂಭಿಸಿದ್ದಾರೆ. ಇವರು ನೆರಳು ನಿರ್ವಹಣೆ ಸೌಲಭ್ಯದೊಂದಿಗೆ ಅಝೋಲ್ಲಾ ಉತ್ಪಾದನಾ ಘಟಕವನ್ನು ಪ್ರಾರಂಭಿಸಿ 30–40 ಕೆ.ಜಿ. ಇಳುವರಿಯನ್ನು 15 ದಿನಗಳಿಗೊಮ್ಮೆ ಕೊಯ್ಲು ಮಾಡುತ್ತಿದ್ದಾರೆ. ಜೈವಿಕ ಶಿಲೀಂಧ್ರಗಳಾದ ಟ್ರೈಕೋಡರ್ಮಾ ಮತ್ತು ಸುಡೋಮಾನಸ್ ಅನ್ನು ಕಾಂಪೋಸ್ಟ್ ಗೊಬ್ಬರಕ್ಕೆ ಮಿಶ್ರಣಮಾಡಿ ತಮ್ಮ ತೋಟಕ್ಕೆ ಬಳಸುತ್ತಿದ್ದು, ರೋಗ ನಿರ್ವಹಣೆಯಲ್ಲಿ ಯಶಸ್ಸು ಕಂಡಿದ್ದಾರೆ. ವರ್ಷಕ್ಕೆ 20 ಟನ್ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಿ ಹಸಿರು ಅರ್ಗಾನಿಕ್ಸ್ ಎಂಬ ಬ್ರ್ಯಾಂಡ್ ಹೆಸರಿನೊಂದಿಗೆ ಮಾರಾಟ ಮಾಡುತ್ತಿದ್ದಾರೆ. ಇವರು ಕಾಂಪೋಸ್ಟ್ ಹಾಗೂ ಜೈವಿಕ ಗೊಬ್ಬರಗಳನ್ನು ಈ–ಮಾರ್ಕೇಟಿಂಗ್ ಮುಖಾಂತರ ಮಾರಾಟ ನಡೆಸುತ್ತಿದ್ದಾರೆ. ಇವರ ಜಮೀನಿಗೆ ಸುಮಾರು 20000ಕ್ಕು ಹೆಚ್ಚು ರೈತರು ಭೇಟಿ ನೀಡಿ ಜೈವಿಕ ಗೊಬ್ಬರ ಮತ್ತು ಕಾಂಪೋಸ್ಟಿಂಗ್ ಬಗ್ಗೆ ಮಾಹಿತಿಯನ್ನು ಪಡೆದಿರುತ್ತಾರೆ.

ಶ್ರೀಯುತರು ಇವರ ಅನುಭವವನ್ನು ರೈತರಿಗೆ ತಲುಪಿಸುವ ಸಲುವಾಗಿ ಬ್ಲಾಕ್ ಗೋಲ್ಡ್ ಲೀಗ್ ಎಂಬ ರೈತ ತರಬೇತಿ ಶಿಬಿರವನ್ನು ಪ್ರಾರಂಭಿಸಿರುತ್ತಾರೆ ಹಾಗೂ ಕೃಷಿ ಸಂಬಂದಿತ ಪತ್ರಿಕೆಗಳಾದ ಸ್ಪೈಸ್ ಇಂಡಿಯಾ ಹಾಗೂ ಕೃಷಿಕ ಪತ್ರಿಕೆಗಳಿಗೆ ಸದಸ್ಯರಾಗಿರುತ್ತಾರೆ. ಇವರು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನ ಆಡಳಿತ ಮಂಡಳಿ ಸದಸ್ಯರಾಗಿರುತ್ತಾರೆ.




**ಫಿರ್ದೋಸ್ ಫಾತಿಮ**
**W/o ಮಹಮದ್ ನಯೀಮ್**
**ಪೋಸ್ಟ್ ಬಾಕ್ಸ್ ನಂ. #4**
**ಪ್ಯಾರಡೈಸ್ ಎಸ್ಟೇಟ್**
**ಆಲ್ದೂರು**
**ಚಿಕ್ಕಮಗಳೂರು**
**ದೂರವಾಣಿ ಸಂಖ್ಯೆ: 9448278078**

ಹುಟ್ಟಿದ್ದು ಉದ್ಯಾನ ನಗರಿ ಬೆಂಗಳೂರಿನಲ್ಲಿ, ಓದಿದ್ದು ಬಿ. ಕಾಂ, ತ್ಯಜಿಸಿದ್ದು ಬ್ಯಾಂಕ್ ಕೆಲಸ, ಆಗಿರುವುದು ಮಾದರಿ ರೈತ ಮಹಿಳೆ – ಇವರೇ ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ತಾಲ್ಲೂಕಿನ ಫಿರ್ದೋಸ್ ಫಾತಿಮ. ಬಣ್ಣದ ಲೋಕಕ್ಕೆ ಮಾರು ಹೋಗದೆ ಪತಿಯ ಹೆಜ್ಜೆಗೆ ಪತಿಯ ಕೆಲಸಕ್ಕೆ ಕೈಜೋಡಿಸಿ ಕೃಷಿ ತೋ ನಾಸ್ತಿ ದುರ್ಭಿಕ್ಷಂ ಎಂಬ ನಾಣ್ಣುಡಿಯಂತೆ ಕೃಷಿಯನ್ನು ನಂಬಿ ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಿ ಪ್ರಗತಿಪರ ಯಶಸ್ವಿ ಕೃಷಿ ಮಹಿಳೆಯಾಗಿ ಹೊರಹೊಮ್ಮಿದ್ದಾರೆ. ಶ್ರೀಮತಿ ಫಿರ್ದೋಸ್ ಫಾತಿಮರವರಿಗೆ ಬಾಲ್ಯದಿಂದ ಕೃಷಿ ಹೆಚ್ಚು ಪರಿಚಯವಿಲ್ಲದಿದ್ದರೂ ಮದುವೆಯಾದ ನಂತರ ಕೃಷಿಯ ಕಡೆಗೆ ಹೆಚ್ಚು ಆಸಕ್ತಿಯನ್ನು ಹೊಂದಿ ಜಮೀನಿನ ಎಲ್ಲಾ ಉಸ್ತುವಾರಿಯನ್ನು ವಹಿಸಿ ಕೃಷಿಯನ್ನು ಲಾಭದಾಯಕವಾಗಿ ಕಂಡಿರುತ್ತಾರೆ.  ಶ್ರೀಮತಿಯವರು ತಮ್ಮ 9 ಎಕರೆ ಜಮೀನಿನಲ್ಲಿ ಕಾಫಿ ಹಾಗೂ ಕಾಳುಮೆಣಸನ್ನು ಅಂತರ್ ಬೆಳೆಯಾಗಿ ಬೆಳೆಯುತ್ತಿದ್ದು ಉತ್ಪಾದಕತೆ ಹೆಚ್ಚಿಸುವುದರಲ್ಲಿ ಯಶಸ್ಸನ್ನು ಕಂಡಿರುತ್ತಾರೆ. ವರ್ಷಕ್ಕೊಮ್ಮೆ ಫಸಲು ಕೊಡುವ, ವರ್ಷಕ್ಕೊಮ್ಮೆ ಆದಾಯ ಕೊಡುವ ಬೆಳೆಗಳನ್ನು ನೆಚ್ಚಿಕೊಳ್ಳದೆ ಆದಾಯೋತ್ಪನ್ನ ಚಟುವಟಿಕೆಗಳಾಗಿ ಅಲಂಕಾರಿಕ ಮೀನುಗಾರಿಕೆ, ತೋಟಗಾರಿಕಾ ಬೆಳೆಗಳ ನರ್ಸರಿ, ಕೋಳಿ ಸಾಕಾಣಿಕೆ, ಜೇನು ಕೃಷಿ ಹಾಗೂ ಹೈನುಗಾರಿಕೆಯನ್ನು ಉದ್ಯಮಗಳನ್ನು ಅಳವಡಿಸಿಕೊಂಡು ದಿನ ನಿತ್ಯದ ಲಾಭವನ್ನು ಪಡೆಯುತ್ತಿದ್ದಾರೆ. ಅಲಂಕಾರಿಕ ಮೀನುಗಾರಿಕೆಯಲ್ಲಿ ವಿವಧ ಜಾತಿಯ ಬಣ್ಣದ ಮೀನುಗಳ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿ ಬಣ್ಣದ ಮೀನುಗಳ ಮರಿಗಳನ್ನು ಉತ್ಪಾದಿಸಿ ಮಾರಾಟ ಮಾಡಿ ಆದಾಯವನ್ನು ಗಳಿಸುತ್ತಿದ್ದಾರೆ. ಬೆಲೆಬಾಳುವ ಅಲಂಕಾರಿಕ ಹೂ ಗಿಡಗಳನ್ನು ಅಭಿವೃದ್ಧಿಪಡಿಸಿ ವೈಜ್ಞಾನಿಕವಾಗಿ ನರ್ಸರಿಯನ್ನು ಮಾಡಿ ಅಧಿಕ ಲಾಭವನ್ನು ಪಡೆಯುತ್ತಿದ್ದಾರೆ. ವಿವಿಧ ಜಾತಿಯ ಕೋಳಿ ಸಾಕಾಣಿಕೆಯನ್ನು ಮಾಡುತ್ತಿದ್ದು ಮಾಂಸ ಹಾಗೂ ಮೊಟ್ಟೆಯನ್ನು ಮಾರಾಟ ಮಾಡುತ್ತಿರುತ್ತಾರೆ. ಸಾವಯವ ಕೃಷಿಗೆ ಹೆಚ್ಚು ಒತ್ತನ್ನು ನೀಡಿದ್ದು ಎರೆಹುಳು ಘಟಕ, ಬಯೋಡೈಜೆಸ್ಟರ್, ಕೋಳಿಗೊಬ್ಬರ ಹಾಗೂ ಕೊಟ್ಟಿಗೆ ಗೊಬ್ಬರವನ್ನು ಅಳವಡಿಸಿಕೊಂಡಿರುತ್ತಾರೆ. ಇವರಿಗೆ ವಿವಿಧ ಜಾತಿಯ ಪ್ರಾಣಿಗಳನ್ನು ಸಾಕಾಣಿಕೆ ಮಾಡುವುದರಲ್ಲಿ ಆಸಕ್ತಿ ಇದ್ದು ಮೊಲ ಸಾಕಾಣಿಕೆ, ಹಸು ಸಾಕಾಣಿಕೆ, ಕುರಿ ಸಾಕಾಣಿಕೆ ಹಾಗೂ ಕುದುರೆ ಸಾಕಾಣಿಕೆಯನ್ನು ಮಾಡಿರುತ್ತಾರೆ. ತಮ್ಮ ಕೃಷಿ ಕ್ಷೇತ್ರದಲ್ಲಿ ಆಧುನಿಕ ವಿಧಾನಗಳನ್ನು ವೈಜ್ಞಾನಿಕವಾಗಿ ಅನುಸರಿಸಲು ಕೃಷಿ ವಿಶ್ವವಿದ್ಯಾಲಯಗಳು ನೆರವು ನೀಡಿರುವುದನ್ನು ಮರೆಯದೇ ನೆನಪಿಸಿಕೊಳ್ಳುತ್ತಾರೆ. ಬೆಳೆದ ತಮ್ಮ ಜಮೀನಿನಲ್ಲಿ ಕೃಷಿ ಹಾಗೂ ಕೃಷಿಯೇತರ ಉತ್ಪನ್ನಗಳನ್ನು ಮಾರಾಟ ಮಾಡಲು ಇವರದೇ ಆದ ಒಂದು ಮಾರಾಟ ಮಳಿಗೆಯನ್ನು ಹೊಂದಿದ್ದು ನೇರ ಮಾರುಕಟ್ಟೆಯನ್ನು ಮಾಡಿಕೊಂಡಿರುತ್ತಾರೆ. ಇಂತಹ ಅಪುರೂಪದ ಸಾಧನೆಗೈದ ಮಲೆನಾಡಿನ ಮಹಿಳೆಯ ಮನೆಗೆ ಒಮ್ಮೆ ಭೇಟಿಕೊಟ್ಟರೆ ಸಮಗ್ರ ಕೃಷಿ ಪದ್ಧತಿಯ ಸಂಪೂರ್ಣ ಸೊಗಡನ್ನು ಪರಿಚಯಿಸುತ್ತಾರೆ.

**ಎ. ಎಮ್. ಲೋಕೇಶಪ್ಪ**
**s/o ಸಿ. ಮರಿಯಪ್ಪ**
**ಹಿರಿಯಂಗಳ ತೋಟದಮನೆ**
**ಬೀರೂರು ಹೋಬಳಿ**
**ಕಡೂರು ತಾಲ್ಲೂಕು**
**ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ ಸಂಖ್ಯೆ: 9611797613**



ವಿದ್ಯಾವಂತ ಗ್ರಾಮೀಣ ಯುವಕರು ಉದ್ಯೋಗವನ್ನರಸಿ ನಗರಗಳತ್ತ ಮುಖ ಮಾಡುತ್ತಿರುವ ಸಂದರ್ಭಗಳಲ್ಲಿ ಇಲ್ಲೊಬ್ಬ ಕೃಷಿಕ ಕೃಷಿಯೇ ನನ್ನ ಜೀವ, ಕೃಷಿಯಿಂದಲೇ ಬದುಕು ಕಟ್ಟಿಕೊಳ್ಳುವ ಕನಸನ್ನು ಹೊಂದಿ ಯಶಸ್ಸನ್ನು ಕಂಡಿರುತ್ತಾರೆ. ಸಮಗ್ರ ಕೃಷಿ ಪದ್ಧತಿ ಅನುಸರಿಸಿ ಅತ್ಯಂತ ಕಡಿಮೆ ಮಳೆಯಾಗುವ ಪ್ರದೇಶದಲ್ಲೂ ಹೆಚ್ಚು ಆದಾಯ ಪಡೆಯುವ ಮೂಲಕ ಎಲ್ಲರ ಗಮನ ಸೆಳೆದಿರುವುದು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಬೀರೂರು ಹೋಬಳಿಯ ಹಿರಿಯಂಗಳ ಗ್ರಾಮದ ರೈತ ಎ. ಎಮ್. ಲೋಕೇಶಪ್ಪನವರು. ತಮ್ಮ 9 ಎಕರೆ ಜಮೀನಿನಲ್ಲಿ ತೋಟಗಾರಿಕಾ ಬೆಳೆಗಳಾದ ಅಡಿಕೆ, ಶುಂಠಿ, ತೆಂಗು, ಕಿತ್ತಳೆ, ಕಾಳುಮೆಣಸು, ಬಾಳೆ, ಹಿರಳಿಕಾಯಿ, ಜಾಯಿಕಾಯಿ ಹಾಗೂ ಇತರೆ ಹಣ್ಣಿನ ಗಿಡಗಳನ್ನು ಬೆಳೆದು ಹೆಚ್ಚು ಆದಾಯವನ್ನು ಪಡೆದಿರುತ್ತಾರೆ. ಶ್ರೀಯುತರು ಸುಮಾರು 1000 ಸರ್ವೆ ಮರ, 800 ಕೋಕೋ ಗಿಡ, 100ಕ್ಕು ಹೆಚ್ಚು ರಕ್ತಚಂದನ, 500 ಮಹಾಗನಿ ಗಿಡಗಳನ್ನು ತಮ್ಮ ಜಮೀನಿನಲ್ಲಿ ಬೆಳೆಸಿದ್ದು ಕೃಷಿ ಅರಣ್ಯ ಪದ್ಧತಿಯನ್ನು ಅಳವಡಿಸಿಕೊಂಡು ಆರ್ಥಿಕವಾಗಿ ಹೆಚ್ಚು ಸದೃಢರಾಗಿದ್ದಾರೆ. 18 ವರ್ಷಗಳ ಹಿಂದೆ ಒಂದು ನಾಟಿ ತಳಿ ಮಲ್ನಾಡ್ ಗಿಡ್ಡ ಹಸುವನ್ನು ಸಾಕಾಣಿಕೆ ಮಾಡಿ ದಿನಕ್ಕೆ 1ಲೀಟರ್ ಹಾಲನ್ನು ಕರೆದು ಜೀವನ ನಡೆಸುತ್ತಿದ್ದರು. ತದನಂತರ ನಾಟಿ ತಳಿ ಮಲ್ನಾಡ್ ಗಿಡ್ಡ ಹಸುವಿಗೆ ಹೆಚ್. ಎಫ್. ಸೆಮೆನ್ ಕೊಡಿಸಿ ಒಂದು ಕರುವನ್ನು ಪಡೆದು ಅದರಿಂದ ಹೈನುಗಾರಿಕೆಯನ್ನು ಪ್ರಾರಂಭಿಸುತ್ತಾರೆ. ಈಗ ಅದೇ ಕರುವಿನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಎಲ್ಲಾ ಸೇರಿ 24 ರಾಸುಗಳು ಇದ್ದು ದಿನಕ್ಕೆ ಸೂಮಾರು 120 ರಿಂದ 125 ಲೀಟರ್ ಹಾಲನ್ನು ಕರೆದು ಮಾರಾಟ ಮಾಡಿ ಆದಾಯವನ್ನು ಗಳಿಸುತ್ತಿದ್ದಾರೆ. ಹೀಗೆ ಹೈನುಗಾರಿಕೆಯನ್ನು ಲಾಭದಾಯಕ ಉದ್ಯಮವಾಗಿ ನಡೆಸುತ್ತಿದ್ದಾರೆ. ಶ್ರೀಯುತರು ಕೋಳಿ ಸಾಕಾಣಿಕೆಯನ್ನು ಮಾಡಿದ್ದು ಮಾಂಸ ಹಾಗೂ ಮೊಟ್ಟೆಯನ್ನು ಮಾರಿ ಆದಾಯವನ್ನು ಗಳಿಸುತ್ತಿದ್ದಾರೆ. ಇವರ ತೋಟದಲ್ಲಿ ಮಣ್ಣು ಹಾಗೂ ನೀರು ನಿರ್ವಹಣೆಗೆ ಸಾಕಷ್ಟು ಒತ್ತು ನೀಡಿರುತ್ತಾರೆ. ಅಡಿಕೆ ಸಿಪ್ಪೆಯನ್ನು ಗಿಡಗಳ ಸುತ್ತ ಹಾಕುವುದರ ಮೂಲಕ ಮಣ್ಣಿನಿಂದ ತೇವಾಂಶ ಹೊರ ಹೋಗದಂತೆ ನೋಡಿಕೊಂಡಿರುತ್ತಾರೆ. ಸಾವಯವ ಕೃಷಿಗೆ ಹೆಚ್ಚು ಒತ್ತನ್ನು ನೀಡಿದ್ದು ಎರೆಗೊಬ್ಬರ, ಹಸಿರೆಲೆ ಗೊಬ್ಬರ ಹಾಗೂ ಜೈವಿಕ ಗೊಬ್ಬರಗಳನ್ನು ಬಳಸುತ್ತಾ ರಾಸಾಯನಿಕ ಗೊಬ್ಬರಗಳನ್ನು ಮಿತವಾಗಿ ಬಳಸಿ ಬೇಸಾಯದ ಖರ್ಚನ್ನು ಕಡಿಮೆ ಮಾಡಿಕೊಂಡಿರುವುದು ಇವರ ವಿಶೇಷತೆಯಾಗಿದೆ. ಲೋಕೇಶಪ್ಪನವರು ವಿಜ್ಞಾನಿಗಳೊಂದಿಗೆ ಮಾಹಿತಿ ಪಡೆದುಕೊಳ್ಳುವುದರ ಜೊತೆಗೆ ಇತರ ರೈತರಿಗೂ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತ ಇತರೆ ರೈತರಿಗೂ ನೆರವಾಗಿದ್ದಾರೆ. ಸಮಗ್ರ ಕೃಷಿ ಪದ್ಧತಿಯಿಂದ ಬರಪೀಡಿತ ಪ್ರದೇಶದಲ್ಲಿ ಭರವಸೆಯುಳ್ಳ ಭವಿಷ್ಯದ ಬದುಕನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.



**ಶ್ರೀ ಬಿ. ಎಂ. ಮುತ್ತುಗೌಡ**

**ವಿಳಾಸ: ಬೆಟ್ಟಗೆರೆ ಗ್ರಾಮ**
**ಮೂಡಿಗೆರೆ**
**ಚಿಕ್ಕಮಗಳೂರು**
**ದೂ: 9886577176**

ಸಾವಯವ ಕೃಷಿ ಪ್ರೇರಕ ಶ್ರೀಯುತ ಮುತ್ತುಗೌಡ ಬಿ.ಎಂ. ರವರು 5.6 ಎಕರೆ ಭೂಮಿಯನ್ನು ಹೊಂದಿರುವ ಸಣ್ಣ ರೈತ. ಕಾಫಿಯನ್ನು ಸಾಂಪ್ರದಾಯಿಕ ಬೆಳೆಯಾಗಿ ಬೆಳೆಯುತ್ತಿದ್ದು, ಇತರೆ ರೈತರಂತೆ ಕೆಲವು ಜಾಗದಲ್ಲಿ ಏಲಕ್ಕಿ ಮತ್ತು 1 ಎಕರೆ ಸ್ಥಳೀಯ ಭತ್ತ ಬೆಳೆದು ವಾರ್ಷಿಕ ರೂ. 3.0 ಲಕ್ಷ ಆದಾಯ ನಿರೀಕ್ಷಿಸುತ್ತಿದ್ದರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಇವರ ಪರಿಚಯ ಇರುವ ಜಮೀನಿನಲ್ಲಿ ಸಮಗ್ರ ಕೃಷಿ ಪದ್ಧತಿ ಮಾದರಿಯನ್ನು ಅನುಸರಿಸಲು ಪ್ರೇರೇಪಿಸಿದರು. ಇವರು ವಿಜ್ಞಾನಿಗಳ ಸೂಚನೆಯಂತೆ ಅವರ ಜಮೀನಿನ ಅನುಗುಣವಾಗಿ ಒಂದು ಎಕರೆ ಭತ್ತ, ಒಂದು ಎಕರೆ ಬಾಳೆ ಹಾಗೂ ಅಂತರ ಬೆಳೆಯಾಗಿ ಬೀನ್ಸ್ ಮತ್ತು ಹಸಿರು ಮೆಣಸಿನಕಾಯಿ, ಡೈರಿ, ಹಿತ್ತಲಿನಲ್ಲಿ ಕೋಳಿ ಸಾಕಾಣಿಕೆ ಮತ್ತು ಅಡಿಕೆಯಲ್ಲಿ ಬಹು ಬೆಳೆ ಪದ್ಧತಿಯಾಗಿ ಕಾಳು ಮೆಣಸು, ಕಾಫಿ, ಏಲಕ್ಕಿಯನ್ನು ಬೆಳೆಯಲಾಯಿತು. ಭತ್ತದಲ್ಲಿ ಬೀಜೋತ್ಪಾದನಾ ಚಟುವಟಿಕೆ ಬಗ್ಗೆ ತಿಳಿದು ಸುಧಾರಿತ ಭತ್ತದ ತಳಿ ತುಂಗಾ ಬೀಜೋತ್ಪಾದನೆ ಮಾಡಿ ಎಕರೆಗೆ 24 ಕ್ವಿಂಟಾಲ್ ಹೆಚ್ಚು ಇಳುವರಿಯನ್ನು ಪಡೆದುಕೊಂಡಿರುತ್ತಾರೆ.

ಎರಡು ಎರೆಹುಳು ಗೊಬ್ಬರ ಘಟಕಗಳನ್ನು ಸ್ಥಾಪಿಸಿ ತೋಟದಲ್ಲಿ ದೊರೆಯುವ ಹಸಿರೆಲೆ ತ್ಯಾಜ್ಯವನ್ನು ಮತ್ತು ಡೈರಿ ಸಗಣಿಯನ್ನು ಬಳಸಿಕೊಂಡು ವರ್ಷಕ್ಕೆ ಸುಮಾರು 6 ಟನ್ ಕಾಂಪೋಸ್ಟ್ ಅನ್ನು ಉತ್ಪಾದಿಸುತ್ತಿರುತ್ತಾರೆ. ಈ ಗೊಬ್ಬರವನ್ನು ಬ್ರ್ಯಾಂಡ್ ಮಾಡಿ ಮಾರುಕಟ್ಟೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದಾರೆ.

ಶ್ರೀಯುತರು ಗಿರಿರಾಜ ಮತ್ತು ಸ್ವರ್ಣಧಾರ ಎಂಬ 50 ಕೋಳಿಗಳನ್ನು ಹಿತ್ತಲಿನಲ್ಲಿ ಸಾಕಿ ಮೊಟ್ಟೆಯನ್ನು ಉತ್ಪಾದನೆ ಮಾಡಿ ರೂ.6/– ರಂತೆ ಸ್ಥಳೀಯರಿಗೆ ಮಾರಾಟ ಮಾಡುತ್ತಿರುತ್ತಾರೆ. ಕೃಷಿ ಹೊಂಡದಲ್ಲಿ ಮೀನುಗಳನ್ನು ಸಾಕುತ್ತಿದ್ದಾರೆ, ಈಗ ಸಾವಯವ ಕೃಷಿ ತರಬೇತಿ ಮತ್ತು ಸಮಗ್ರ ಕೃಷಿ ಪದ್ಧತಿಯಲ್ಲಿ ಪರಿಣಿತರಾಗಿ (ಮಾಸ್ಟರ್ ಟ್ರೈನರ್) ಇತರರಿಗೆ ತರಬೇತಿಯನ್ನು ನೀಡುತ್ತಾರೆ. 500ಕ್ಕೂ ಹೆಚ್ಚು ರೈತರು ಇವರ ಕ್ಷೇತ್ರಕ್ಕೆ ಭೇಟಿ ನೀಡಿ ಅಳವಡಿಸಿಕೊಂಡಿರುವ ತಂತ್ರಜ್ಞಾನಗಳ ಬಗ್ಗೆ ಪ್ರಭಾವಿತರಾಗಿದ್ದಾರೆ. ಇವರು ಎಸ್.ಕೆ.ಆರ್.ಡಿ.ಪಿ ಸದಸ್ಯರಾಗಿ 1000 ಕ್ಕೂ ಹೆಚ್ಚು ರೈತರಿಗೆ ಮಾಹಿತಿ ಹಂಚಿರುತ್ತಾರೆ. ಅವರ ಕೃಷಿ ಕ್ಷೇತ್ರದ ಕೊಡುಗೆಗಾಗಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಅತ್ಯುತ್ತಮ ರೈತ ಪ್ರಶಸ್ತಿ, ಎಸ್.ಕೆ.ಆರ್.ಡಿ.ಪಿ ಸಾವಯವ ರೈತ ಹಾಗೂ ರಾಜ್ಯ ತೋಟಗಾರಿಕಾ ಇಲಾಖೆಯು ಅತ್ಯುತ್ತಮ ರೈತ ಪ್ರಶಸ್ತಿಯನ್ನು ನೀಡಿ ಗೌರವಿಸಿವೆ.

**ಶ್ರೀಮತಿ ವಾಣಿ ವಿ.ಕೆ.**



**ವಿಳಾಸ: ಕೋಂ ನರೇಂದ್ರ ಡಿ.**
**ಕರಗುಂದ**
**ನ.ರಾ. ಪುರ ತಾ**
**ಚಿಕ್ಕಮಗಳೂರು**
**ದೂ: 9535322189**

ಮಹಿಳಾ ಸಬಲೀಕರಣವು ಭಾರತದಲ್ಲಿ ಸಮುದಾಯಗಳಿಗೆ ಪ್ರವೇಶವನ್ನು ಒದಗಿಸುವ ದೃಷ್ಟಿಯಿಂದ ಮಾತ್ರವಲ್ಲದೆ ಅನೇಕ ವಿಧಗಳಲ್ಲಿ ಕೃಷಿಯಲ್ಲಿ ಹೆಚ್ಚಿನ ಸುಸ್ಥಿರತೆಗೆ ಸಹಕಾರಿಯಾಗಿದೆ. ಶ್ರೀಮತಿ ವಾಣಿಯವರು ನಾಲ್ಕು ಎಕರೆ ಭೂಮಿಯನ್ನು ಹೊಂದಿ ವಾರ್ಷಿಕ ರೂ. 2.0 ಲಕ್ಷ ಆದಾಯದೊಂದಿಗೆ ಕಾಫಿ ಮತ್ತು ಭತ್ತವನ್ನು ಕೃಷಿ ಮಾಡುತ್ತಿದ್ದ ಸಣ್ಣ ರೈತ ಮಹಿಳೆ. ಇವರು ಕೃಷಿ ವಿಜ್ಞಾನ ಕೇಂದ್ರದ ಪರಿಚಯದೊಂದಿಗೆ 2017–18ರಲ್ಲಿ ಸಮಗ್ರ ಕೃಷಿ ಪದ್ಧತಿ ತರಬೇತಿ ಪಡೆದು ಕೃಷಿಯಲ್ಲಿ ಉಪಕಸುಬುಗಳನ್ನು ಮಾಡಲು ಪ್ರೇರೇಪಿತರಾದರು. ಈ ನಿಟ್ಟಿನಲ್ಲಿ ನರ್ಸರಿ, ಹಿತ್ತಲಿನಲ್ಲಿ ಕೋಳಿ ಸಾಕಾಣಿಕೆ ಮತ್ತು ಬಹು ಬೆಳೆ ಪದ್ಧತಿಯನ್ನು ಅಳವಡಿಸಿಕೊಂಡರು. ಅಡಿಕೆಯಲ್ಲಿ ಅಂತರ ಬೆಳೆಯಾಗಿ ಏಲಕ್ಕಿ, ಕಾಫಿ ಮತ್ತು ಕಾಳು ಮೆಣಸು ಅಳವಡಿಸಿಕೊಂಡು ಹೆಚ್ಚು ಆದಾಯ ಪಡೆಯುತ್ತಿದ್ದಾರೆ. ನರ್ಸರಿಯಲ್ಲಿ ಅಡಿಕೆ, ಕಾಳು ಮೆಣಸು, ಕಾಫಿ ಮತ್ತು ಸಿಲ್ವರ್ ಸಸಿಗಳನ್ನು ಉತ್ಪಾದಿಸಿ ಸ್ಥಳೀಯ ರೈತರಿಗೆ ಮಾರಾಟ ಮಾಡಿ ಆದಾಯಗಳಿಸುತ್ತಿದ್ದಾರೆ. ಕೃಷಿ ತ್ಯಾಜ್ಯವನ್ನು ಸುಮಾರು 1 ಟನ್ ಷ್ಟು ಬಳಸಿಕೊಂಡು ಎರೆಗೊಬ್ಬರ ಉತ್ಪಾದನೆ ಮಾಡಿ ತಮ್ಮ ಸ್ವಂತ ತೋಟಕ್ಕೆ ಬಳಕೆ ಮಾಡುತ್ತಿದ್ದಾರೆ. ಕೃಷಿ ವಿಜ್ಞಾನ ಕೇಂದ್ರದ ಸಹಾಯದೊಂದಿಗೆ ಮೊಲ ಸಾಕಾಣಿಕೆ ಮತ್ತು ಹಿತ್ತಲಿನ ಕೋಳಿ ಸಾಕಾಣಿಕೆ ಪ್ರಾರಂಭಿಸಿ ವರ್ಷಕ್ಕೆ ರೂ. 2.0 ಲಕ್ಷ ಆದಾಯವನ್ನು ಗಳಿಸುತ್ತಿದ್ದಾರೆ. ಈ ಎಲ್ಲಾ ಅಲ್ಪಾವಧಿ ಮತ್ತು ಬಹು ವಾರ್ಷಿಕ ಬೆಳೆಗಳನ್ನು ಬೆಳೆದು ವಾರ್ಷಿಕ ಆದಾಯ ರೂ. 7.0 ಲಕ್ಷಕ್ಕೆ ದಾಟುವ ಮೂಲಕ ಗಮನಾರ್ಹ ಬೆಳವಣಿಗೆಯನ್ನು ಸಾಧಿಸಿದ್ದಾರೆ. ಇವರು ಸ್ವ ಸಹಾಯ ಸಂಘದಲ್ಲಿ ಸದಸ್ಯರಾಗಿದ್ದಾರೆ, ಜೊತೆಗೆ ಅವರು ಸಮಗ್ರ ಕೃಷಿ ಪದ್ಧತಿ ಕುರಿತು ತಮ್ಮ ಜಮೀನಿಗೆ ಭೇಟಿ ನೀಡುವ ರೈತರಿಗೆ ಮಾಹಿತಿಯನ್ನು ಒದಗಿಸುತ್ತಿದ್ದಾರೆ. ನರ್ಸರಿ ನಿರ್ವಹಣೆ, ಗಿಡಗಳ ಪೂರೈಕೆ, ಮೊಲ ಸಾಕಾಣಿಕೆ, ಕೋಳಿ ಸಾಕಾಣಿಕೆ, ಭತ್ತದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳನ್ನೊಳಗೊಂಡ ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆ ಮತ್ತು ಸಲಹೆಗಳು ಇತರೆ ರೈತರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ.





**ರೈತರ ಹೆಸರು: ಸಚಿನ್ ಪಿ. ಆಡ್ವಾಣಿ**

**ವಿಳಾಸ: ಬಿನ್ ಕೆ.ಕೆ. ಗೋಪಾಲ್**
**ಫಲ್ಗುಣಿ ಅಂಚೆ**
**ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9739031147**

ಇವರು ಎಸ್.ಎಸ್.ಎಲ್.ಸಿ ಓದಿದ ನಂತರ ತಮ್ಮನ್ನು ತಾವು ಸಂಪೂರ್ಣ ಕೃಷಿಯಲ್ಲಿ ತೊಡಗಿಸಿಕೊಂಡು ತಮ್ಮ ಬಳಿ ಇರುವ 7.3 ಎಕರೆ ಜಮೀನಿನಲ್ಲಿ ಕಾಫಿ, ಏಲಕ್ಕಿ, ಮೆಣಸು, ಅಡಿಕೆ, ಬಾಳೆ, ಭತ್ತ ಇತರ ಬೆಳೆಗಳನ್ನು ಬೆಳೆದು ಸುತ್ತಮುತ್ತಲ ಗ್ರಾಮದ ನಿರುದ್ಯೋಗಿ ಯುವಕರಿಗೆ ಮಾರ್ಗದರ್ಶಕರಾಗಿದ್ದಾರೆ. ಇವರು ತಮ್ಮ ಮನೆ ಮುಂದೆ ಎರೆಹುಳು ಘಟಕವನ್ನು ಇಟ್ಟುಕೊಂಡಿದ್ದು, ತಮ್ಮ ಬಳಿ ಇರುವ ಎರಡು ನಾಟಿ ಹಸುವಿನಿಂದ ದೊರೆಯುವ ಸಗಣಿಯಿಂದ ತೊಟ್ಟಿ ಗೊಬ್ಬರವನ್ನು ಮಾಡುತ್ತಿರುತ್ತಾರೆ. ಇದರ ಜೊತೆಗೆ ಜೀವಾಮೃತವನ್ನು ತಯಾರಿಸಿ ತಮ್ಮ ಬೆಳೆಗಳಲ್ಲಿ ಉಪಯೋಗಿಸುತ್ತಿದ್ದಾರೆ. ಹತ್ತು ಕೆ.ಜಿ. ಹಸುವಿನ ಸಗಣಿ+ಎರಡು ಕೆ.ಜಿ. ಬೆಲ್ಲ+10 ಲೀಟರ್ ಹಸುವಿನ ಗಂಜಲ +2 ಕೆ.ಜಿ. ಕಡಲೆ ಹಿಟ್ಟು +1 ಕೆ.ಜಿ. ಕಾಡು ಮಣ್ಣನ್ನು 8 ದಿನಗಳವರೆಗೆ ಚೆನ್ನಾಗಿ ಕೊಳೆಸಿ ಅದನ್ನು 1:8 ರ ನೀರಿನ ಜೊತೆ ಬೆರೆಸಿ ಕಾಳು ಮೆಣಸು, ಏಲಕ್ಕಿ ಗಿಡಗಳಿಗೆ ಸಿಂಪಡಿಸಿ ಅಧಿಕ ಲಾಭವನ್ನು ಪಡೆಯುತ್ತಿರುತ್ತಾರೆ. ಹಾಗೆಯೇ ಒಂದು ಮರಳು ತೊಟ್ಟಿಗೆ ಪ್ರತಿದಿನ 3–4 ಲೀಟರ್‌ನಷ್ಟು ಹಸುವಿನ ಗಂಜಲವನ್ನು ಒಂದು ತಿಂಗಳ ತನಕ ಹಾಕುತ್ತಾ ಬಂದು, ನಂತರ ಅದನ್ನು ಒಂದು ಕಾಳು ಮೆಣಸಿನ ಗಿಡಕ್ಕೆ 1–3 ಕೆ.ಜಿ. ಯಂತೆ ಹಾಕಿ ಸುಮಾರು ಒಂದು ಎಕರೆ ಪ್ರದೇಶದಲ್ಲಿ, ಸಾವಯವದಲ್ಲಿ ಕಾಳು ಮೆಣಸನ್ನು ಬೆಳೆದು, ತಮ್ಮ ಗ್ರಾಮದಲ್ಲೇ ಇರುವ ಸಾವಯವ ವಸ್ತುಗಳ ಮಾರಾಟ ಸಂಸ್ಥೆಗೆ ಕಾಳು ಮೆಣಸನ್ನು ಮಾರಾಟ ಮಾಡಿ ಸಾವಯವ ಕೃಷಿಕರು ಎನಿಸಿಕೊಂಡಿದ್ದಾರೆ.

ಇವರು ಕಳೆದ ಬಾರಿ ಒಂದು ಎಕರೆ ಜಮೀನಿನಲ್ಲಿ ಶೀಘ್ರ ಸೊರಗು ರೋಗದ ಹಾವಳಿಗೆ ತುತ್ತಾಗಿದ್ದ ಕಾಳು ಮೆಣಸಿನ ತೋಟಕ್ಕೆ ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆಯವರ ಮಾರ್ಗದರ್ಶನದಂತೆ ವೈಜ್ಞಾನಿಕವಾಗಿ ತಯಾರಿಸ್ಪಟ್ಟ ಶೇಕಡಾ 1ರ ಬೋರ್ಡೋ ದ್ರಾವಣವನ್ನು ಮೇ ಕೊನೆಯ ವಾರ ಹಾಗೂ ಸೆಪ್ಟೆಂಬರ್ ಎರಡನೆ ವಾರದಲ್ಲಿ ಸಿಂಪರಣೆ ಮಾಡಿರುತ್ತಾರೆ. ತದನಂತರ ಜುಲೈ ಸಮಯದಲ್ಲಿ ಸಂಯುಕ್ತ ಶಿಲೀಂಧ್ರನಾಶಕವಾದ ಸಾಫ್‌ನ್ನು ಸಹ ಸಿಂಪರಣೆ ಮಾಡಿರುತ್ತಾರೆ. ಪ್ರತಿ ಗಿಡಕ್ಕೆ ಒಂದು ಕೆ.ಜಿ. ಬೇವಿನ ಹಿಂಡಿಯ ಜೊತೆಗೆ 50 ಗ್ರಾಂ ಟ್ರೈಕೋಡರ್ಮಾ ಮಿಶ್ರಮಾಡಿ ಗಿಡದ ಸುತ್ತಲು ಹಾಕುತ್ತಾ ಬಂದಿರುತ್ತಾರೆ. ಇದರಿಂದ ಅವರು ಸುಮಾರು 4 ಲಕ್ಷ ಲಾಭವನ್ನು ಪಡೆದಿರುತ್ತಾರೆ. ರೋಬಸ್ಟಾ ಬಾಳೆಯಲ್ಲಿ ಅಧಿಕವಾಗಿ ಕಾಣಿಸಿಕೊಂಡ ಸಿಗಟೋಕ ಎಲೆ ಚುಕ್ಕೆ ರೋಗ ನಿಯಂತ್ರಣಕ್ಕೆ ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆಯವರ ಮಾಹಿತಿಯಂತೆ ರೋಗ ಬಂದ ಎಲೆಗಳನ್ನು ಕತ್ತರಿಸಿ ತೆಗೆದು, ನಂತರ ಹೆಕ್ಸಾಕೋನಜೋಲ್ 1 ಮಿ.ಲೀ. ಪ್ರತಿ ಲೀಟರ್‌ಗೆ ಮಿಶ್ರಮಾಡಿ ಅದನ್ನು 5, 7 ಮತ್ತು 9 ನೇ ತಿಂಗಳಿನ ನಂತರ ಸಿಂಪರಣೆ ಮಾಡಿ ಬಾಳೆಯಲ್ಲಿ ಸುಮಾರು 50 ಸಾವಿರ ಲಾಭವನ್ನು ಪಡೆದಿರುತ್ತಾರೆ. ಇದಲ್ಲದೆ, ಬಾಳೆಯಲ್ಲಿ ಇತರ ತಳಿಗಳಾದ ಪುಟ್ಟಬಾಳೆ, ಕರಿಬಾಳೆ, ರಸಬಾಳೆ, ಅಡಿಗೆ ಬಾಳೆ, ಚಂದ್ರಬಾಳೆಯನ್ನು ಬೆಳೆಸಿದ್ದು ಸುತ್ತಮುತ್ತಲಿನ ಅನೇಕ ಪ್ರವಾಸಿಗರು ಇದನ್ನು ನೋಡಲು ಅವರ ಜಮೀನಿಗೆ ಆಗಮಿಸುತ್ತಿರುತ್ತಾರೆ. ಇವರು ಕಾಂಗೋಸಿಗ್ನಲ್, ಸಿ.ಓ–3, ಸಿ.ಓ–4 ಮತ್ತು ನೇಪಿಯರ್ ಹುಲ್ಲನ್ನು ತಮ್ಮ ಜಮೀನಿನಲ್ಲಿ ಬೆಳೆದು, ಹಸುಗಳಿಗೆ ಮೇವಾಗಿ ಉಪಯೋಗಿಸುತ್ತಿರುತ್ತಾರೆ.


**ರೈತರ ಹೆಸರು: ಶ್ರೀಮತಿ ಟಿ.ಎಂ. ಸವಿತ**



**ವಿಳಾಸ: ಕೋಂ ಪುಟ್ಟೇಗೌಡ ಎಂ.ಎಂ.**
**ಜಿ.ಹೊರಟ್ಟಿ, ಗೋಣಿಬೀಡು ಅಂಚೆ**
**ಮೂಡಿಗೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9481393929**

ಶ್ರೀಮತಿ ಟಿ.ಎಂ. ಸವಿತರವರು ಸಮಗ್ರ ಬೇಸಾಯ ಪದ್ಧತಿ ಮತ್ತು ಸಾವಯವ ಪದ್ಧತಿ ಎರಡನ್ನೂ ಅನುಸರಿಸಿ ಭತ್ತದ ಬೇಸಾಯ ಮಾಡುತ್ತಿದ್ದಾರೆ. ಸುಧಾರಿತ ಭತ್ತದ ತಳಿ ತುಂಗಾ (ಐ.ಇ.ಟಿ–13901) ಬೆಳೆದು ಪ್ರತಿ ಎಕರೆಗೆ 20 ರಿಂದ 22 ಕ್ವಿಂಟಾಲ್ ಇಳುವರಿ ಪಡೆದಿರುತ್ತಾರೆ. ಇದಲ್ಲದೇ ಕೈತೋಟದಲ್ಲಿ ತರಕಾರಿಗಳಾದ ಮೂಲಂಗಿ, ಬೀನ್ಸ್, ಬೆಂಡೆಕಾಯಿ, ಟೊಮ್ಯಾಟೊ ಹಾಗೂ ಸೊಪ್ಪು ತರಕಾರಿಗಳನ್ನು ಬೆಳೆದು ಸ್ವತ: ಬಳಕೆಯಲ್ಲದೆ ಸ್ಥಳೀಯ ಗ್ರಾಮಸ್ಥರಿಗೂ ಒದಗಿಸುತ್ತಿದ್ದಾರೆ.

ಔಷಧೀಯ ಸಸ್ಯಗಳಾದ ತುಳಸಿ, ಲೋಳೆಸರ, ಮೆಹಂದಿ ಸೊಪ್ಪು, ಮೆಂತ್ಯ, ಕಹಿಬೇವು ಮತ್ತು ನಿಂಬೆ ಬೆಳೆದು ಗಿಡಮೂಲಿಕೆಯ ಸೋಪು ತಯಾರಿಸಿ ಮಾರಾಟ ಮಾಡುತ್ತಾರೆ ಮತ್ತು ಅವರು ಮನೆ ಬಳಕೆಗೆ ಉಪಯೋಗಿಸುತ್ತಿದ್ದಾರೆ.



ಜೊತೆಗೆ ಪಶುಸಂಗೋಪನೆ (ಹಸು ಮತ್ತು ಕೋಳಿ ಸಾಕಾಣಿಕೆ)–ಎರೆಗೊಬ್ಬರ ಉತ್ಪಾದನೆ ಮತ್ತು ಜೀವಾಮೃತ ತಯಾರಿಕಾ ಘಟಕಗಳನ್ನು ಬೇಸಾಯದಲ್ಲಿ ಅಳವಡಿಸಿಕೊಂಡು ಆರೋಗ್ಯದಾಯಕ ಉತ್ಪನ್ನಗಳನ್ನು ಬೆಳೆಯುತ್ತಿದ್ದಾರೆ.

ಭತ್ತ ಬೇಸಾಯದಲ್ಲಿ ಯಾಂತ್ರೀಕೃತ ನಾಟಿ ಮತ್ತು ಕೊಯ್ಲಿಗೆ ಯಂತ್ರದ ಅಳವಡಿಕೆ ಮಾಡಿಕೊಳ್ಳುತ್ತಿದ್ದಾರೆ. ಅಂತರ ಬೇಸಾಯಕ್ಕೆ ಕೂಲಿಕಾರರ ನಿರ್ವಹಣೆಯನ್ನು ಉತ್ತಮವಾಗಿ ಮಾಡಿರುತ್ತಾರೆ. ಗ್ರಾಮ ಮಟ್ಟದಲ್ಲಿ "ಭಾವನಾ ಮಹಿಳಾ ಸ್ವಸಹಾಯ ಸಂಘ"ದ ಸದಸ್ಯರಾಗಿ ಇತರೆ ಸದಸ್ಯರೊಂದಿಗೆ ಒಡಗೂಡಿ "ಮುಯ್ಯಿ ಆಳು" ಪದ್ಧತಿ ಅನುಸರಿಸಿ ಬೇಸಾಯ ಕ್ರಮಗಳನ್ನು ಸಮಯೋಚಿತವಾಗಿ ನಿರ್ವಹಿಸುತ್ತಿದ್ದಾರೆ.

ಸಾವಯವ ಕೃಷಿ ಬಳಕೆಯಿಂದ ಕಾಫಿ, ಮೆಣಸು ಮತ್ತು ಅಡಿಕೆ ಬೆಳೆಗಳಿಗೆ ಉಪಯೋಗಿಸಿಕೊಂಡು, ರಸಗೊಬ್ಬರಗಳ ಬಳಕೆ ಕಡಿಮೆ ಮಾಡಿ, ಅಧಿಕ ಇಳುವರಿಯನ್ನು ಪಡೆಯುತ್ತಿದ್ದಾರೆ. ಕೃಷಿ ಹೊಂಡಗಳಲ್ಲಿ ಮೀನು ಕೃಷಿ ಮಾಡಿಕೊಂಡು ಅದರಲ್ಲಿ ಲಾಭವನ್ನು ಪಡೆಯುತ್ತಿದ್ದಾರೆ. ಇದಲ್ಲದೆ ತಮ್ಮ ಪತಿಯವರಿಗೆ ಆಧಾರವಾಗಿ ಕಾಫಿ, ಮೆಣಸು ಮತ್ತು ಅಡಿಕೆ ತೋಟದ ನಿರ್ವಹಣೆಗೆ ಅನುವು ಮಾಡಿ ನಿರಂತರ ಆದಾಯ ಗಳಿಸಲು ಸಹಕಾರಿಯಾಗಿರುತ್ತಾರೆ.



**ರೈತರ ಹೆಸರು: ಪ್ರಭುಕುಮಾರ್ ಹೆಚ್.ಆರ್.**

**ವಿಳಾಸ: ಬಿನ್ ಹೆಚ್.ಪಿ. ರೇಣುಕಯ್ಯ**
**# 206 ರಸ್ತೆ, ಹಳಿಯೂರ್ ಗೇಟ್**
**ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9972995528**

ಶ್ರೀ ಪ್ರಭುಕುಮಾರ್ ರವರು 10ನೇ ತರಗತಿಯ ನಂತರ ಹೈನುಗಾರಿಕೆಯಲ್ಲಿ ಡಿಪ್ಲೊಮೊ ಪದವಿಯನ್ನು ಪಡೆದು ತಮ್ಮನ್ನು ತಾವು ಸಮಗ್ರ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ಪ್ರಸ್ತುತ ಭತ್ತ, ತರಕಾರಿ ಬೆಳೆಗಳಾದ ಟೊಮ್ಯಾಟೊ, ಮೆಣಸಿನಕಾಯಿ, ಕುಂಬಳ ಕಾಯಿ, ಎಲೆಕೋಸು, ಸಾಂಬಾರ ಸೌತೆ ಇತ್ಯಾದಿ ಬೆಳೆಗಳನ್ನು ಬೆಳೆದು ಊರಿನಲ್ಲಿ ಪ್ರಗತಿಪರ ಕೃಷಿಕರು ಎನಿಸಿಕೊಂಡಿದ್ದಾರೆ. ಶ್ರೀಯುತರು ಐ.ಆರ್–64 ಭತ್ತವನ್ನು ಮುಕ್ಕಾಲು ಎಕರೆ ಪ್ರದೇಶದಲ್ಲಿ ಸಾವಯವ ಕೃಷಿಯಲ್ಲಿ ಬೆಳೆದು 22 ಚೀಲದಷ್ಟು ಇಳುವರಿಯನ್ನು ಪಡೆದಿರುತ್ತಾರೆ. ಇವರು ಹೈಬ್ರಿಡ್ ಕಲ್ಲಂಗಡಿಯ ಅಪೂರ್ವ, ಮಧುಬಾಲ ಮತ್ತು ಮಾಧುರಿ ಎಂಬ ತಳಿಗಳನ್ನು 2 ಎಕರೆ ಪ್ರದೇಶದಲ್ಲಿ ಬೆಳೆದು ಸುಮಾರು ರೂ. 50,000 ದಷ್ಟು ಲಾಭ ಗಳಿಸಿರುತ್ತಾರೆ. ಮುಕ್ಕಾಲು ಎಕರೆ ಪ್ರದೇಶದಲ್ಲಿ ಅಭಿನವ್ ಎಂಬ ಟೊಮ್ಯಾಟೊ ತಳಿಯನ್ನು ಬೆಳೆದು ಸುಮಾರು ರೂ. 1 ಲಕ್ಷದವರೆಗೆ ಲಾಭವನ್ನು ಪಡೆದಿರುತ್ತಾರೆ. ಮೆಣಸಿನಕಾಯಿ ತಳಿಗಳಾದ ಬ್ರಹ್ಮ ಮತ್ತು ಇಂದ್ರ ತಳಿಗಳನ್ನು ಅರ್ಧ ಎಕರೆ ಪ್ರದೇಶದಲ್ಲಿ ಬೆಳೆದು ಸುಮಾರು ರೂ. 40,000 ದಷ್ಟು ಲಾಭವನ್ನು ಪಡೆದಿರುತ್ತಾರೆ. ಶ್ರೀಯುತರು ಬೆಳೆ ಪರಿವರ್ತನೆ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ತರಕಾರಿ ಬೆಳೆಗಳ ನಂತರ ಜೋಳ, ರಾಗಿ ಹಾಗೂ ಅಲಸಂದೆಯನ್ನು ಬೆಳೆಯುತ್ತಾರೆ. ಇವರು ಸಾವಯವ ಗೊಬ್ಬರಕ್ಕೆ 3 ಹಸುಗಳು (ಹೆಚ್.ಎಫ್ ಮತ್ತು ಜರ್ಸಿ) ಸಾಕಿರುತ್ತಾರೆ ಮತ್ತು ಪ್ರತಿ ವರ್ಷ ಕುರಿ ಮಂದೆಯನ್ನು ತಮ್ಮ ಜಮೀನಿನಲ್ಲಿ ನಿಲ್ಲಿಸುತ್ತಾರೆ.

ಶ್ರೀಯುತರು ತರಕಾರಿ ಬೆಳೆಗಳಿಗೆ ಜೀವಾಮೃತವನ್ನು ತಾವೇ ತಯಾರು ಮಾಡಿ ಸಿಂಪಡಿಸಿ, ಒಳ್ಳೆಯ ಸಾವಯವ ಕೃಷಿಕರು ಎನಿಸಿಕೊಂಡಿದ್ದಾರೆ. ಹಾಗೆಯೇ ಹೈಬ್ರಿಡ್ ಹುಲ್ಲಿನ ತಳಿಗಳಾದ ಎನ್.ಬಿ.–21, ಕುದರೆ ಮಸಾಲಾ ಹಾಗೂ ಅಝೋಲಾವನ್ನು ಹಸುಗಳ ಆಹಾರದ ಜೊತೆಗೆ ನೀಡಿ ಅಧಿಕ ಹಾಲಿನ ಇಳುವರಿಯನ್ನು ಪಡೆಯುತ್ತಿರುತ್ತಾರೆ. ಇವರು ಅಮೃತೇಶ್ವರ ಸಾವಯವ ಕೃಷಿ ಪರಿವಾರ ಸದಸ್ಯರಾಗಿದ್ದು, ತಾಲ್ಲೂಕಿನ ಸುತ್ತಮುತ್ತಲ ಪ್ರದೇಶದಲ್ಲಿ ನಡೆಯುವ ತರಬೇತಿ ಕಾರ್ಯಕ್ರಮಗಳಲ್ಲಿ ಕಲ್ಲಂಗಡಿ ಹಾಗೂ ಇತರ ತರಕಾರಿ ಬೆಳೆಗಳ ಬಗ್ಗೆ ಮಾಹಿತಿ ನೀಡುತ್ತಿರುತ್ತಾರೆ. ಇದರ ಜೊತೆಗೆ ಇವರ ಜಮೀನಿನಲ್ಲಿ 40 ತೆಂಗಿನ ಗಿಡಗಳು, 650 ಅಡಿಕೆ ಮರಗಳು ಹಾಗೂ 50 ಸಾಗುವಾನಿ ಮರಗಳಿದ್ದು ಕೃಷಿಯ ಎಲ್ಲಾ ವಿಷಯದಲ್ಲೂ ಪರಿಣಿತಿಯನ್ನು ಪಡೆದು ಯುವ ಪ್ರಗತಿಪರ ಕೃಷಿಕರು ಎಂಬ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

**ಶ್ರೀ ಎಂ.ಎಂ. ಪುಟ್ಟೇಗೌಡ**



**ವಿಳಾಸ: ಬಿನ್ ಮುಳ್ಳೇಗೌಡ**
**ಜಿ.ಹೊರಟ್ಟಿ**
**ಗೋಣಿಬೀಡು ಅಂಚೆ**
**ಮೂಡಿಗೆರೆ ತಾ**
**ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9449996668**

ಶ್ರೀ ಎಂ.ಎಂ. ಪುಟ್ಟೇಗೌಡ ರವರು ಭತ್ತದ ಸಮಗ್ರ ಬೇಸಾಯ ಪದ್ಧತಿ, ಸಾವಯವ ಪದ್ಧತಿ ಮತ್ತು ಯಾಂತ್ರೀಕೃತ ಭತ್ತದ ಬೇಸಾಯ ಅಳವಡಿಸಿಕೊಂಡು ಸುಧಾರಿತ ಭತ್ತದ ತಳಿಯಾದ ತುಂಗಾ ತಳಿಯನ್ನು ಬೆಳೆದು ಪ್ರತಿ ಎಕರೆಗೆ 24 ಕ್ವಿಂಟಾಲ್ ಇಳುವರಿ ಪಡೆದಿರುತ್ತಾರೆ. ಇದಲ್ಲದೆ ಕಾಫಿಯಲ್ಲಿ ಮಿಶ್ರ ಬೆಳೆಗಳಾಗಿ ಮೆಣಸು, ಬಾಳೆ, ನಿಂಬೆ, ಕಿತ್ತಲೆ ಮತ್ತು ಅಡಿಕೆಯನ್ನು ಬೆಳೆಯುತ್ತಿದ್ದಾರೆ. ಇವರು ಜಮೀನಿನಲ್ಲಿ ರೋಬಸ್ಟಾ ಕಾಫಿಯನ್ನು ಬೆಳೆಯುತ್ತಿದ್ದು, ಪ್ರತಿ ಎಕರೆಗೆ 2000 ಕೆ.ಜಿಯಷ್ಟು ಇಳುವರಿಯನ್ನು ಪಡೆಯುತ್ತಿದ್ದಾರೆ. ಪಶು ಸಂಗೋಪನೆಯಲ್ಲಿ ಹಸು, ಮೀನು ಮತ್ತು ಕೋಳಿ ಸಾಕಾಣಿಕೆ ಮಾಡುತ್ತಿದ್ದಾರೆ, ದಿನಕ್ಕೆ 10–12 ಲೀಟರ್ ಹಾಲು ಪಡೆದು, ಸಗಣಿಯನ್ನು ಎರೆಹುಳು ತೊಟ್ಟಿಗೆ ಮತ್ತು ಮಲೆನಾಡು ಕಾಂಪೋಸ್ಟ್‌ಗೆ ಉಪಯೋಗಿಸಿಕೊಂಡು ತಮ್ಮ ಜಮೀನಿಗೆ ಬೇಕಾಗುವಷ್ಟು ಗೊಬ್ಬರವನ್ನು ತಯಾರಿಸಿ ಆರೋಗ್ಯದಾಯಕ ಉತ್ಪನ್ನಗಳನ್ನು ಬೆಳೆಯುತ್ತಿದ್ದಾರೆ. ಅಡಿಕೆ, ಕಾಫಿ ಮತ್ತು ಮೆಣಸು ಬೆಳೆಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿ ನೀರಿನ ವಿವೇಚನಾತ್ಮಕ ಬಳಕೆ ಮಾಡುತ್ತಿದ್ದಾರೆ. ಇವರು ತಮ್ಮ ಜಮೀನಿನಲ್ಲಿ ಮಳೆ ನೀರು ಕೊಯ್ಲು ಪದ್ಧತಿಯಲ್ಲಿ ಕೃಷಿ ಹೊಂಡ, ಇಂಗು ಗುಂಡಿ ಮತ್ತು ಚರಂಡಿ ನಿರ್ಮಾಣ ಮಾಡಿದ್ದು ನೀರನ್ನು ವೈಜ್ಞಾನಿಕವಾಗಿ ಬಳಸುತ್ತಿದ್ದಾರೆ.



ಇವರು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಹುಲ್ಲು ಬೆಳೆಸುವಿಕೆ, ಬದು ನಿರ್ಮಾಣ, ಹೆಚ್ಚಾಗಿ ಸಾವಯವ ವಸ್ತುಗಳನ್ನು ಬಳಸುವುದು, ಬೇವಿನ ಹಿಂಡಿಯ ಉಪಯೋಗ, ಬೋರ್ಡೋ ದ್ರಾವಣ, ಟ್ರೈಕೋಡರ್ಮಾ, ಅಜೋಸ್ಪೈರಿಲಂ ಜೀವಾಣುಗಳನ್ನು ಜೈವಿಕ ಗೊಬ್ಬರವಾಗಿ ಬಳಸುತ್ತಿದ್ದಾರೆ.

ಇವರು ಕಾಫಿ ಪಲ್ಪರ್ ಘಟಕವನ್ನು ಕಾಫಿ ಮಂಡಳಿ ಸಹಾಯದೊಂದಿಗೆ ನಿರ್ಮಿಸಿ ಕಾಫಿ ಫಸಲನ್ನು ಪಲ್ಪಿಂಗ್ ಮಾಡುತ್ತಾರೆ ಹಾಗೂ ಸುತ್ತಮುತ್ತಲಿನ ರೈತರಿಗೆ ಬಾಡಿಗೆ ಆಧಾರಿತ ಕಾಫಿ ಪಲ್ಪಿಂಗ್ ಉಪಯೋಗವನ್ನು ನೀಡುತ್ತಿದ್ದಾರೆ.

ಶ್ರೀಯುತರು ಸ್ಥಳೀಯ ಹೊಯ್ಸಳ ಸಾವಯವ ಕೃಷಿಕರ ಬಳಗ, ಸ್ಪಂದನ ಸಾವಯವ ಕೃಷಿಕರ ಬಳಗ, ಕೃಷಿ ವಿಜ್ಞಾನ ಕೇಂದ್ರದ ವೈಜ್ಞಾನಿಕ ಸಲಹಾ ಸಮಿತಿ, ಆತ್ಮ ಸಲಹಾ ಸಮಿತಿ ಮತ್ತು ಬಾಳೆ ಬೆಳೆಗಾರರ ಸಂಘಗಳಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ಕೃಷಿಕ ಪತ್ರಿಕೆಯ ಸದಸ್ಯತ್ವವನ್ನು ಹೊಂದಿರುತ್ತಾರೆ.




**ಶ್ರೀಮತಿ ಟಿ.ಕೆ. ಸಾವಿತ್ರಿ**

**ವಿಳಾಸ: ಕೋಂ ಜನಾರ್ಧನ್ ಟಿ.ಎಮ್.**
**ಕಲಾ ಫಾರಂ**
**ಪಿ.ಎಮ್.ಕೆ. ರಸ್ತೆ, ತರೀಕೆರೆ.**
**ಮೊಬೈಲ್ ಸಂಖ್ಯೆ: 9945463039/9972995451**

ಶ್ರೀಮತಿ ಟಿ.ಕೆ. ಸಾವಿತ್ರಿಯವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಗಿರವಿ ವ್ಯಾಪಾರಿಗಳಾದ ಶ್ರೀ ಜನಾರ್ಧನ್ ಟಿ.ಎಂ.ರವರ ಮನೆಯವರು. ಇವರ ಇಬ್ಬರು ಮಕ್ಕಳು ವಿದೇಶದಲ್ಲಿ ಮೈಕ್ರೋಸೇನ್ ಹುದ್ದೆಯಲ್ಲಿದ್ದು ಹೆಚ್ಚು ಆದಾಯವನ್ನು ಗಳಿಸುತ್ತಿದ್ದಾರೆ, ಪಾಶ್ಚಾತ್ಯ ದೇಶದ ವ್ಯಾಮೋಹಕ್ಕೆ ಒಳಗಾಗದೆ ಶ್ರೀಮತಿ ಸಾವಿತ್ರಿಯವರು ಕೃಷಿಯಲ್ಲಿ ಆಸಕ್ತಿಹೊಂದಿದ್ದು ಕೃಷಿಗೆ ಆದ್ಯತೆ ನೀಡಿ ತರೀಕೆರೆಯ ಬಳಿ 5 ಎಕರೆ ಭೂಮಿ ಖರೀದಿಸಿ ಕೃಷಿ ನಡೆಸುತ್ತಾ ಬಂದಿರುತ್ತಾರೆ. ಇವರ ಈ ನಿಲುವಿಗೆ ಸಾಕ್ಷಿಯಾಗಿ ಜೇನು ಸಾಕಾಣಿಕೆ, 20 ಕ್ಕೂ ಹೆಚ್ಚಿನ ವಿವಿಧ ಜಾತಿಯ ಕಿರು ಹಣ್ಣಿನ ಗಿಡಗಳು, ಉತ್ತಮವಾದ ಹಲಸಿನ ಮರಗಳು ಮತ್ತು ಅವರಿಗೆ ಅನುಕೂಲವಾಗುವಂತಹ ಕೆಲವೊಂದು ಕೃಷಿ ಉಪಕರಣಗಳನ್ನು ತಾವೇ ತಯಾರಿಸಿಕೊಂಡಿರುತ್ತಾರೆ. ಇವರ ಈ ಕೃಷಿ ಒಲವಿಗೆ ಸ್ಪಂದಿಸಿ ಪತಿಯಾದ ಶ್ರೀ ಜನಾರ್ಧನರವರು ವ್ಯಾಪಾರ ತ್ಯಜಿಸಿ ಸಂಪೂರ್ಣ ಕೃಷಿಗೆ ಸಹಕರಿಸಿರುತ್ತಾರೆ. ಕೂಲಿ ಕಾರ್ಮಿಕರ ತೊಂದರೆಯಿರುವುದರಿಂದ ಹಲವಾರು ಯಂತ್ರೋಪಕರಣಗಳನ್ನು ತಾವೇ ತಯಾರಿಸಿ ತೋಟದ ಕೆಲಸಗಳಿಗೆ ಬಳಸುತ್ತಿದ್ದಾರೆ. ಇವರು ಬಯೋಡೈಜೆಸ್ಟರ್, ಎರೆಹುಳು ತೊಟ್ಟಿ, ಎರೆಜಲ ಇವೆಲ್ಲವನ್ನೂ ಅವರ ತೋಟದಲ್ಲಿ ಅಳವಡಿಸಿಕೊಂಡಿರುತ್ತಾರೆ. ಇವರು ತಮ್ಮ ತೋಟದ ತ್ಯಾಜ್ಯದಿಂದ ಹಾಗೂ ತೋಟದ ಸುತ್ತ ಗ್ಲಿರಿಸೀಡಿಯಾ ಹಸಿರು ಎಲೆಯಿಂದ, ತೆಂಗು, ಅಡಿಕೆ ಗರಿಯಿಂದ ಮತ್ತು ತರಗೆಲೆಯನ್ನು ಬಳಸಿಕೊಂಡು ಗೊಬ್ಬರ (ಕಾಂಪೋಸ್ಟ್) ತಯಾರಿಸಿಕೊಂಡು ಸಾವಯವ ಕೃಷಿಯನ್ನು ಮಾಡುತ್ತಿದ್ದಾರೆ. ಇವರು ಸಮಗ್ರ ಕೃಷಿಯನ್ನು ಅಳವಡಿಸಿಕೊಂಡು ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ಜೊತೆಗೆ ಮೀನು ಹಾಗೂ ಜೇನು ಕೃಷಿಯನ್ನು ಮಾಡುತ್ತಿರುತ್ತಾರೆ. ನೀರಿನ ನಿರ್ವಹಣೆಗೆ ಮಳೆನೀರಿನ ಚೆಕ್ ಡ್ಯಾಮ್, ಕೃಷಿ ಹೊಂಡ ನಿರ್ಮಿಸಿಕೊಂಡು ಹನಿ ನೀರಾವರಿ ಮೂಲಕ ತೋಟದ ಬೆಳೆಗಳಿಗೆ ನೀರುಣಿಸುತ್ತಾ ಮಣ್ಣು ಮತ್ತು ನೀರಿನ ನಿರ್ವಹಣೆಯನ್ನು ಯಶಸ್ವಿಯಾಗಿ ಮಾಡುತ್ತಿರುತ್ತಾರೆ. ಇವರಲ್ಲಿ ಸುಮಾರು 150ಕ್ಕೂ ಹೆಚ್ಚು ವಿವಿಧ ಹಲಸಿನ ತಳಿಯ ಗಿಡಮರಗಳಿವೆ. ಅಡಿಕೆ, ತೆಂಗು, ಮಾವು, ಸಪೋಟಾ, ನೆಲ್ಲಿ ಮತ್ತು ಇನ್ನಿತರ ಹಣ್ಣಿನ ಗಿಡಗಳಾದ ಪುನರ್‌ಪುಳಿ, ಉಪ್ಪಾಗೆ ಹಣ್ಣು, ಸೇಬು ಮುಂತಾದ ಗಿಡಮರಗಳನ್ನು ಹೊಂದಿರುತ್ತಾರೆ. ಕೃಷಿ ವಿದ್ಯಾರ್ಥಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ ಸಂಘದ ರೈತ ಮಹಿಳೆಯರು ಹಾಗೂ ಅಕ್ಕಪಕ್ಕದ ಜಿಲ್ಲೆಯ ರೈತ ಬಾಂಧವರು ಇವರ ತೋಟಕ್ಕೆ ಭೇಟಿ ನೀಡಿ ಕೃಷಿ ಹಾಗೂ ಜೇನು ಸಾಕಾಣಿಕೆಯ ಬಗ್ಗೆ ಉತ್ತಮವಾದ ಮಾಹಿತಿಗಳನ್ನು ಪಡೆದಿರುತ್ತಾರೆ. ಇವರು ಆಸಕ್ತ ರೈತ ಮಹಿಳೆಯರಿಗೆ ಕಿರು ಹಣ್ಣುಗಳಿಂದ ಮಾಡಬಹುದಾದ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಕುರಿತು ತರಬೇತಿಯನ್ನು ನೀಡುತ್ತಾ ಬಂದಿರುತ್ತಾರೆ. ಇವರು ತಮ್ಮ ತೋಟದ ಉತ್ಪನ್ನಗಳನ್ನು ಉತ್ತಮ ತಂತ್ರಜ್ಞಾನದಿಂದ ಮಾರ್ಕೆಟಿಂಗ್ ಅರಿತು ದರ ನಿಗದಿಪಡಿಸಿ ಸ್ಥಳೀಯ ಮಾರುಕಟ್ಟೆ, ಹೊರ ರಾಜ್ಯಗಳಿಗೆ ಹಾಗೂ ಹೊರ ದೇಶಗಳಿಗೆ ಮಾರಾಟ ಮಾಡುತ್ತಿರುತ್ತಾರೆ. ಇವರು ತಮ್ಮ ಕೃಷಿ ಉತ್ಪನ್ನಗಳಾದ ಸ್ಕ್ವ್ಯಾಷ್, ಪುನರ್ ಪುಳಿ, ನೆಲ್ಲಿಕಾಯಿ, ಸಪೋಟ, ಹಲಸು, ಮಾವು ಪದಾರ್ಥಗಳನ್ನು ಸಂಸ್ಕರಿಸಿ ಮತ್ತು ಮೌಲ್ಯವರ್ಧನೆಯನ್ನು ಮಾಡಿ ತರಬೇತಿಯನ್ನು ನೀಡುವುದರ ಜೊತೆಗೆ ಮಾಹಿತಿಯನ್ನು ನೀಡುತ್ತಿದ್ದಾರೆ. ಇವರು ಕೃಷಿ ವಿಜ್ಞಾನ ಕೇಂದ್ರ ಹಾಗೂ ತೋಟಗಾರಿಕೆ ಇಲಾಖೆಯಲ್ಲಿ ಸಂಪರ್ಕ ಹೊಂದಿದ್ದು ಕೃಷಿಯಲ್ಲಿ ಅತೀ ಹೆಚ್ಚು ಪ್ರಗತಿ ಸಾಧಿಸಿರುತ್ತಾರೆ. ಈ ನಿಟ್ಟಿನಲ್ಲಿ ಶ್ರೀಮತಿ ಸಾವಿತ್ರಿಯವರು ತಮ್ಮ ಜೀವನವನ್ನು ಪಾಶ್ಚಾತ್ಯದ ಕಡೆಗೆ ಹೋಗದೆ ಕೃಷಿಗೆ ಮುಡಿಪಾಗಿರಿಸುವುದರ ಮೂಲಕ ಇತರ ರೈತ ಮಹಿಳೆಯರಿಗೆ ಮಾದರಿಯಾಗಿದ್ದಾರೆ.

**ಶ್ರೀ ರಾಜ್‌ಗೋಪಾಲ್**



**ವಿಳಾಸ: ಶ್ರೀ ಖಡ್ಗಮಹೇಶ್ವರಿ ಎಸ್ಟೇಟ್**
**ಗೋಣಿಬೀಡು**
**ಮೂಡಿಗೆರೆ**
**ದೂ: 9980707707**

ಮೂಡಿಗೆರೆ ತಾಲ್ಲೂಕಿನ ಗೋಣಿಬೀಡು ಹೋಬಳಿಯಲ್ಲಿರುವ ಶ್ರೀಯುತ ರಾಜ್‌ಗೋಪಾಲ್‌ರವರು ತಾಲ್ಲೂಕಿನಲ್ಲೇ ಅತೀ ಹೆಚ್ಚು ಭತ್ತ ಬೆಳೆಯುವ ಪ್ರಗತಿಪರ ರೈತರಲ್ಲಿ ಪ್ರಮುಖರು. ಭತ್ತ, ಕಾಫಿ, ಮೆಣಸು ಮತ್ತು ಅಡಿಕೆ ಬೆಳೆಗಳಲ್ಲಿ ಅತ್ಯುತ್ತಮ ಇಳುವರಿ ಪಡೆಯುತ್ತಿದ್ದು ಇತರರಿಗೆ ಮಾದರಿ ಕೃಷಿಕರಾಗಿದ್ದಾರೆ. ಸುಮಾರು 50 ಎಕರೆಯಲ್ಲಿ ಭತ್ತ ಬೆಳೆಯುವ ಇವರು ಎಕರೆಗೆ 25 ಕ್ವಿ. ಭತ್ತ ಬೆಳೆಯುತ್ತಿದ್ದು, ಇದೊಂದು ತಾಲ್ಲೂಕಿಗೆ ದಾಖಲೆಯಾಗಿದೆ.

50 ಎಕರೆ ಭತ್ತದ ಗದ್ದೆ ಮಾಡಲು ಕೂಲಿಕಾರ್ಮಿಕರ ಸಮಸ್ಯೆ ಎದುರಾದುದರಿಂದ ಈ ಸಮಸ್ಯೆಯನ್ನು ದೂರಮಾಡಲು ಭತ್ತದ ಕೃಷಿಯಲ್ಲಿ ಸಂಪೂರ್ಣ ಯಾಂತ್ರೀಕರಣವನ್ನು ಕೈಗೊಂಡಿದ್ದಾರೆ. ರಾಜಗೋಪಾಲ್‌ರವರ ಗದ್ದೆಯಲ್ಲಿ ನಡೆಯುವ ಎಲ್ಲಾ ಕೆಲಸಕಾರ್ಯಗಳು ಯಂತ್ರೋಪಕರಣಗಳಿಂದಲೇ, ನಾಟಿ ಮಾಡುವುದರಿಂದ ಹಿಡಿದು ಕಟಾವು ಮಾಡಿ ಭತ್ರ ಸಂಗ್ರಹಿಸಲು ಯಂತ್ರಗಳನ್ನು ಉಪಯೋಗಿಸುತ್ತಾರೆ. ಇದರಿಂದ ಕೂಲಿ ಕಾರ್ಮಿಕರ ಮೇಲೆ ಅವಲಂಬಿಸುವುದು ತಪ್ಪಿದೆ ಮತ್ತು ಯಂತ್ರಗಳ ಸಹಾಯದಿಂದ ಕಡಿಮೆ ಅವಧಿ, ಕಡಿಮೆ ಖರ್ಚಿನಲ್ಲಿ ತಮ್ಮ ಪೂರ್ಣ ಜಮೀನಿನ ಕೆಲಸವನ್ನು ಮಾಡಲು ಸಹಾಯವಾಗಿದೆ. ಅದಲ್ಲದೆ ಹೆಚ್ಚಿನ ಆದಾಯವನ್ನು ಗಳಿಸಲು ಸಹಾಯವಾಗಿದೆ.

ಭತ್ತದ ಉತ್ತಮ ಇಳುವರಿ ಪಡೆಯಲು ಸಲಹೆಗಳನ್ನು ನೀಡಿದ ರಾಜಗೋಪಲರವರು, ಮೊದಲು ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇರುವಂತಹ ತಳಿಯನ್ನು ಗಮನಿಸಿಕೊಂಡು, ನಂತರ ತಮ್ಮ ಭೂಮಿಯ ಫಲವತ್ತತೆಯನ್ನು ಅರಿತು ಯಾವ ಬೆಳೆ ಬೆಳೆಯಬೇಕು ಎಂಬುದನ್ನು ನಿರ್ಧರಿಸಬೇಕು. ಬೇಕಾದಂತಹ ರಸಗೊಬ್ಬರ, ನೀರಿನ ಸೌಲಭ್ಯ ಹಾಗೂ ಉತ್ತಮ ಗಾಳಿಯ ವಾತಾವರಣವನ್ನು ಒದಗಿಸಬೇಕು.

ರಾಜಗೋಪಾಲರವರು ನಿರ್ವಹಣೆಯಂತೆ ಅವರು ಶೇಕಡಾ 80ರಷ್ಟು ಸಾವಯವ ಗೊಬ್ಬರವನ್ನು ಮತ್ತು ಕೇವಲ 20 ರಷ್ಟು ರಾಸಾಯನಿಕ ಗೊಬ್ಬರವನ್ನು (ಅಗತ್ಯ ಬಿದ್ದರೆ ಮಾತ್ರ) ಬಳಸಿ ಭತ್ತವನ್ನು ಬೆಳೆಯುತ್ತಾರೆ. ಮಣ್ಣಿಗೆ ಸೇರಿಸಬೇಕಾದ ಸಾವಯವ ಗೊಬ್ಬರಗಳನ್ನು ಹಿಂದಿನ ವರ್ಷವೇ ಸಂಗ್ರಹಿಸಿ ಕಾಂಪೋಸ್ಟ್ ತಯಾರಿಸಿಕೊಳ್ಳುತ್ತಾರೆ.

ಕಾಂಪೋಸ್ಟ್ ವಿಧಾನ, ಮೇಕೆಗೊಬ್ಬರ+ಬೇವಿನ ಹಿಂಡಿ+ಹೊಂಗೆ ಹಿಂಡಿ+ಬೆಲ್ಲ ಎಲ್ಲವನ್ನು ಮಿಶ್ರಮಾಡಿ ತಮ್ಮ ಕಾಂಪೋಸ್ಟ್ ತಯಾರಿಸುವ ತೊಟ್ಟಿಯಲ್ಲಿ ಒಂದು ವರ್ಷದವರೆಗೆ ಸಂಗ್ರಹಿಸಿ ಇಡುತ್ತಾರೆ. ಈ ರೀತಿಯ ಸಾವಯವ ಗೊಬ್ಬರವನ್ನು 2 ವರ್ಷಕ್ಕೊಮ್ಮೆ ಜಮೀನಿಗೆ ಸೇರಿಸುತ್ತಾರೆ. ಇದರಿಂದ ರಾಸಾಯನಿಕ ಗೊಬ್ಬರ, ಕೀಟ ಮತ್ತು ಶೀಲೀಂದ್ರನಾಶಕಗಳ ಉಪಯೋಗವು ಕಡಿಮೆಯಾಗಿ ವೆಚ್ಚವನ್ನು ಸಹ ತಗ್ಗಿಸಬಹುದು.

1*2 ಅಡಿ ವಿಸ್ತೀರ್ಣದಲ್ಲಿ ಕೇಕ್ ಪದ್ಧತಿಯಲ್ಲಿ ಭತ್ತದ ಮೊಳಕೆ ಹಾಕಿ, ನಂತರದ 16–17 ದಿನಕ್ಕೆ ಫಲವತ್ತಾದ ಭೂಮಿಯಲ್ಲಿ ನಾಟಿ ಮಾಡುವುದು, ನಾಟಿ ಮಾಡಿದ 5 ದಿನದ ಒಳಗೆ ಸೂಕ್ತವಾದ ಕಳೆನಾಶಕವನ್ನು ಭೂಮಿಗೆ ಸೇರಿಸುವುದು, ನಂತರದ 30 ದಿನಗಳಲ್ಲಿ ಸಣ್ಣ ಪುಟ್ಟ ಕಳೆ ಬಂದಿದ್ದರೆ ಯಂತ್ರೋಪಕರಣಗಳ ಸಹಾಯದಿಂದ ಕಳೆ ತೆಗೆಯುವುದು, ರೋಗ ಬಂದಂತಹ ಭತ್ತದ ಸಸಿಯನ್ನು ಕೃಷಿ ವಿಜ್ಞಾನ ಕೇಂದ್ರಕ್ಕೆ ಕಳುಹಿಸಿ ಸಸಿ ರೋಗದ ಬಗ್ಗೆ ಪರೀಕ್ಷೆ

ಮಾಡಿಸುವುದು. ಮಲೆನಾಡಿನಲ್ಲಿ ಮಳೆ ನೀರು ಹೆಚ್ಚಿಗೆ ಬರುವುದರಿಂದ ನೀರಿನ ಅಭಾವವಿಲ್ಲದೇ ಇರುವುದು ಕೃಷಿಗೆ ಸಹಾಯವಾಗಿದೆ.

ಯಾಂತ್ರೀಕರಣವನ್ನೇ ಹೆಚ್ಚಿನದಾಗಿ ನೆಚ್ಚಿಕೊಂಡಿರುವ ಇವರು ಪ್ರತಿ ಕೆಲಸವನ್ನು ಯಂತ್ರದ ಸಹಾಯದಿಂದಲೇ ಮಾಡಿ ಸುಲಭ ಮಾರ್ಗದಲ್ಲಿ ಸಮಯದ ಉಳಿತಾಯದೊಂದಿಗೆ ಸಾಧನೆ ಮಾಡಿದ್ದಾರೆ. ಮೊದಲನೇ ದಿನದಿಂದಲೇ ಯಂತ್ರಗಳ ಸಹಾಯದಿಂದ 5 ಎಕರೆ ನಾಟಿ, 4 ಎಕರೆ ಕಳೆನಿರ್ವಹಣೆ, 5 ಎಕರೆ ಕಟಾವು ಮತ್ತು 30 ಎಕರೆಯಷ್ಟು ಔಷಧಿಯನ್ನು ಸಿಂಪಡಿಸುತ್ತಾರೆ. ದಿನಕ್ಕೆ ಒಬ್ಬ ಯಂತ್ರ ಚಲಿಸುವ ಚಾಲಕ ಮತ್ತು ಒಬ್ಬ ಸಹಾಯಕ ಇದ್ದರೆ ಸಾಕು ಮತ್ತು ಇಂಧನ ಬಳಕೆಯೂ ಕಡಿಮೆ, ಇದರಿಂದ ಹೆಚ್ಚಿನ ಉಳಿತಾಯವನ್ನು ಮಾಡಬಹುದು.

ಸಾಮಾನ್ಯ ಭತ್ತ ಬೆಳೆಯುವ ರೈತ ಒಂದು ಎಕರೆಗೆ ಕೂಲಿಕಾರ್ಮಿಕರ ನಿರ್ವಹಣೆಗೆ ರೂಪಾಯಿ 10000–00 ವೆಚ್ಚ ಮಾಡುತ್ತಾನೆ. ಬೀಜ ಮತ್ತು ರಾಸಾಯನಿಕಗೊಬ್ಬರ, ಕೀಟನಾಶಕ ಖರೀದಿಗೆ 15000–00 ರೂಪಾಯಿ ಒಟ್ಟು ವೆಚ್ಚ ರೂಪಾಯಿ 25000–00 ಗಳಾಗಿರುತ್ತದೆ. ಇಳುವರಿ 20 ಕ್ವಿ. ಪ್ರತಿ ಎಕರೆಗೆ ಎಂದು ತಿಳಿದು 1600 ರೂಪಾಯಿ ಪ್ರತಿ ಕ್ವಿ.ಗೆ ಮಾರಿದರೆ (20 ಕ್ವಿ. * 1600 ರೂಪಾಯಿ = 3200 ರೂಪಾಯಿಗಳಾಗುತ್ತದೆ ಇದರಲ್ಲಿ ಒಟ್ಟು ವೆಚ್ಚ (32000–25000=7000 ರೂಪಾಯಿಗಳಾಗುತ್ತದೆ.

ರಾಜಗೋಪಾಲರ ಪ್ರಕಾರ ಬೀಜ, ಸಾವಯವಗೊಬ್ಬರ ಮತ್ತು ಸ್ವಲ್ಪ ಪ್ರಮಾಣದ ರಾಸಾಯನಿಕ ಗೊಬ್ಬರಕ್ಕೆ ರೂ. 8000–00 ಮಾತ್ರ ಖರ್ಚಾಗುತ್ತದೆ. ಯಂತ್ರೋಪಕರಣಗಳಿಗೆ ಇಂಧನ ಮತ್ತು ಚಾಲಕರ ಖರ್ಚು 2000 ರೂಪಾಯಿ ಒಟ್ಟು (8000+2000=10000 ರೂಪಾಯಿಗಳಾಗಿರುತ್ತದೆ.) ಇಳುವರಿ 20 ಕ್ವಿ. ಆದರೆ 1600 ಪ್ರತಿ ಕ್ವಿ. (20*1600=32000 ರೂಪಾಯಿಗಳಾಗಿತ್ತದೆ.) ಇದರಲ್ಲಿ ಒಟ್ಟು ಖರ್ಚು 10000 ರೂಪಾಯಿ ಕಳೆದರೆ (32000–10000=22000 ರೂಪಾಯಿ) 22000ರೂಪಾಯಿಗಳಷ್ಟು ಲಾಭವನ್ನು ಪ್ರತಿ ಎಕರೆಗೆ ತೆಗೆಯುತ್ತಾರೆ. ಇವರು ಬೆಳೆದ ಭತ್ತ ಒಳ್ಳೆಯ ಗುಣಮಟ್ಟದಾಗಿದ್ದು ಬೀಜಕ್ಕೆ ಮಾರುತ್ತಾರೆ. ಇದರಿಂದ ಹೆಚ್ಚಿನ ಲಾಭವನ್ನು ಪಡೆಯಬಹುದು. ಒಟ್ಟು 50 ಎಕರೆ ಪ್ರದೇಶಕ್ಕೆ ಪ್ರತಿ ಆರು ತಿಂಗಳಿಗೆ ಒಟ್ಟು 5 ರಿಂದ 10 ಲಕ್ಷ ರೂಪಾಯಿ ಲಾಭವನ್ನು ಪಡೆಯುತ್ತಾರೆ.

**ಶ್ರೀ ಕುಮಾರಸ್ವಾಮಿ**

**ವಿಳಾಸ: ಹಾಲಾರಾಧ್ಯ, ಕುನ್ನಾಳು**
**ಲಕ್ಕಮ್ಮನಹಳ್ಳಿ ಪೋಸ್ಟ್**
**ಚಿಕ್ಕಮಗಳೂರು ತಾಲೂಕು ಮತ್ತು ಜಿಲ್ಲೆ**
**ಫೋನ್: 9449282548.**

ಭೂಮಿ ಮೇಲೆ ನಡೆಯುವ ಒಳ್ಳೆಯದೆಲ್ಲವನ್ನು ಅನುಸರಿಸಲು ಸಾಧ್ಯವೇ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಯೋಗ, ಯೋಗಾಸನ, ಧ್ಯಾನ, ಜಪ–ತಪ, ವ್ಯಾಯಾಮ ಎಲ್ಲವೂ ಒಳ್ಳೆಯದೇ! ಇವುಗಳ ಒಳ್ಳೆಯತನ ತಿಳಿಯಲು ಮತ್ತೆ ಪರೀಕ್ಷಿಸುವ ಅಗತ್ಯವೇನು ಕಾಣುತ್ತಿಲ್ಲ. ಎಷ್ಟು ಜನ "ಈ ಒಳ್ಳೆಯದನ್ನು ಅನುಸರಿಸುತ್ತಿದ್ದಾರೆ ಎಂದಾಗ ಉತ್ತರಿಸಲು ತಡವರಿಸಬೇಕಾಗುತ್ತದೆ." ಏಕೆ? ಅನುಸರಿಸಲು ಸಾಧ್ಯವಿಲ್ಲವೇ ? ಕಷ್ಟವೇ? ಮಾಹಿತಿ ಇಲ್ಲವೇ...? ಬೇರೆ ಬೇರೆ ಪರಿಸ್ಥಿತಿಯಲ್ಲಿ ಬೇರೆ–ಬೇರೆ ಉತ್ತರ ಸಿಗಬಹುದು. ಒಟ್ಟಾರೆ ಅನುಸರಿಸುತ್ತಿಲ್ಲ ಎಂಬುದೇ ವಾಸ್ತವ !

ಇದೇ ಪರಿಸ್ಥಿತಿ ನಮ್ಮ ಸಾವಯವ ಕೃಷಿಗೆ ಅನ್ವಯಿಸುತ್ತದೆ. ಸಾವಯವ ಕೃಷಿ ಒಳ್ಳೆಯದು ಎಂದು ಎಲ್ಲರೂ ನಂಬುತ್ತಾರೆ. ಪ್ರಸ್ತುತ ಪರಿಸ್ಥಿತಿಯಲ್ಲೂ ಅನುಸರಿಸಬಹುದು ಎನ್ನುವವರು ಬಹಳ ಮಂದಿ ಇದ್ದಾರೆ. ಆದರೂ ಅನುಸರಿಸುವವರು ವಿರಳ ಎನ್ನುವುದೇ ವಾಸ್ತವ. ಸಾವಯವ ಕೃಷಿ ಕಷ್ಟ ಎನ್ನುವುದು ಬಿಟ್ಟು ಪ್ರಯೋಗಶೀಲ ಕೃಷಿಕರಾಗಿ ಪರಿಸರದ ಬಗ್ಗೆ ಕಾಳಜಿಯನ್ನೂ ತೋರಿಸುತ್ತಾ ನಷ್ಟಮಾಡಿಕೊಳ್ಳದೇ ಕೃಷಿ ಮಾಡುವವರಂತೂ ವಿರಳ. ಈ ವರ್ಗಕ್ಕೆ ಸೇರುವ ಚಿಕ್ಕಮಗಳೂರು ತಾಲೂಕು ಕುನ್ನಾಳು ಗ್ರಾಮದ ಶ್ರೀ ಕುಮಾರಸ್ವಾಮಿಯವರ ಪ್ರಯತ್ನ–ಪ್ರಯೋಗಗಳನ್ನು ಅವಲೋಕಿಸೋಣ.

**ಜೀವ ವೈವಿಧ್ಯ ಮತ್ತು ಸಾವಯವ ಕ್ರಮಗಳು**

ಹತ್ತು ವರ್ಷದ ಹಿಂದೆ ಖಾಲಿ ಜಮೀನಿನಲ್ಲಿ ತೆಂಗಿನ ತೋಟದ ಪ್ರಾರಂಭ. ಎರಡು ವರ್ಷಗಳ ತರುವಾಯ ಅಡಿಕೆ ಮರಗಳನ್ನು ನೆಟ್ಟರು. ಇವುಗಳ ಜೊತೆಗೆ ಬೇಲಿಯಲ್ಲಿ ತೇಗ, ಸಿಲ್ವರ್, ಬೇವು, ಹೊಂಗೆ, ಗ್ಲಿರಿಸೀಡಿಯಾ, ಜತ್ರೋಪಾ ಬೆಳೆಯಲಾಗಿದೆ.

ತೋಟ ಪ್ರಾರಂಭ ಮಾಡಿದಾಗಿನಿಂದಲೂ ಸಾವಯವ ಕ್ರಮಗಳನ್ನೇ ಅನುಸರಿಸುತ್ತಿದ್ದಾರೆ. ಪ್ರತಿ ವರ್ಷವೂ ಉಳುಮೆ ಮಾಡುತ್ತಿದ್ದವರು ಈಗ ಎರಡು–ಮೂರು ವರ್ಷಗಳಿಗೊಮ್ಮೆ ಉಳುಮೆ ಮಾಡುತ್ತಿದ್ದಾರೆ. ತೆಂಗಿನ ತೋಟದಲ್ಲಿ ಬೆಳೆದ ಸೊಪ್ಪು ಜೀವಂತ ಮುಚ್ಚಿಗೆಯಾಗಿ ಕೆಲಸ ಮಾಡುತ್ತಿದೆ. ಪಪಾಯವನ್ನು ಅಡಿಕೆಯಲ್ಲಿ ಅಂತರಬೆಳೆಯಾಗಿ ಬೆಳೆದಿದ್ದಾರೆ.

**ಸಾವಯವ ಗೊಬ್ಬರಗಳ ತಯಾರಿಕೆ**

ಕುಮಾರಸ್ವಾಮಿ ಅವರು ಐದು ಮಿಶ್ರತಳಿ ಹಸುಗಳು ಮತ್ತು ಎರಡು ಎಮ್ಮೆಗಳನ್ನು ಸಾಕಿದ್ದಾರೆ. ಗೊಬ್ಬರ ಸಾಕಾಗದೆ, ಪ್ರತಿ ವರ್ಷ ಹೊರಗಡೆಯಿಂದ 25 ಟನ್ ಕೊಟ್ಟಿಗೆ ಗೊಬ್ಬರ ಕೊಂಡುಕೊಳ್ಳುತ್ತಾರೆ. ಅಡಿಕೆ ಸಿಪ್ಪೆ ಮತ್ತು ಇತರೆ ಕಸ–ಕಡ್ಡಿಯಿಂದ ಕಾಂಪೋಸ್ಟ್ ತಯಾರಿಸಲು ಪ್ರಾರಂಭಿಸಿದ್ದಾರೆ. "ಅಡಿಕೆ ಸಿಪ್ಪೆ–ಕಸಕಡ್ಡಿಗಳನ್ನು ಮಿಶ್ರ ಮಾಡಿ

ಆಳೆತ್ತರ ಗುಡ್ಡೆ ಹಾಕಿ ಮಣ್ಣಿನಿಂದ ಮುಚ್ಚಿ, ಒಂದು ವರ್ಷದಲ್ಲಿ ಕಾಂಪೋಸ್ಟ್ ಸಿದ್ದ ಎನ್ನುತ್ತಾರೆ. ಕಾಂಪೋಸ್ಟ್ ತಯಾರಿಕೆ ಹೆಚ್ಚು ಮಾಡಿ ಹೊರಗಡೆಯಿಂದ ಕೊಂಡುಕೊಳ್ಳುವ ಪ್ರಮಾಣವನ್ನು ಕಡಿಮೆ ಮಾಡಬೇಕೆಂದು ಯೋಚಿಸಿದ್ದಾರೆ.

**ಪ್ರಯೋಗಶೀಲ ಮನಸ್ಸು**

ಕುಮಾರಸ್ವಾಮಿಯವರಿಗೆ ಎರಡು ಕಡೆ ಜಮೀನಿದೆ. ಒಂದು ಕಡೆ ಸಾವಯವ ಕ್ರಮಗಳನ್ನು ಅನುಸರಿಸಿದರೆ ಮತ್ತೊಂದು ಕಡೆ ಸಾಂಪ್ರದಾಯಿಕವಾಗಿ ರಸಗೊಬ್ಬರ, ರಾಸಾಯನಿಕಗಳನ್ನು ಬಳಸಿ ಮಾಡುತ್ತಿದ್ದಾರೆ. "ಸಾವಯವದಲ್ಲಿ ಇಳುವರಿ ಕಡಿಮೆ (ಶೇಕಡ 30). ಆದರೆ ಶ್ರಮ ಓಡಾಟ ಮತ್ತು ಖರ್ಚು ಕಡಿಮೆ ಹಾಗೂ ಪ್ರಾರಂಭದಲ್ಲಿ ಇಳುವರಿ ಕಡಿಮೆಯಿದ್ದು ಕ್ರಮೇಣ ಹೆಚ್ಚಾಗುತ್ತದೆ". ಕುಮಾರಸ್ವಾಮಿಯವರ ಪ್ರಕಾರ ಸಾವಯವ ಕೃಷಿಯಲ್ಲಿ "ನೆಮ್ಮದಿ ಇದೆ, ಒಂದುವೇಳೆ ಮಾರುಕಟ್ಟೆ ಬೆಲೆ ಕುಸಿದರೂ ಕಂಗಾಲಾಗುವ ಸಂಭವ ಕಡಿಮೆ. ಕಾರಣ–ಹಾಕಿದ ಬಂಡವಾಳ ಕಡಿಮೆ ಇರುತ್ತದೆ". ಟ್ರೈಕೋಡರ್ಮಾ ಮತ್ತು ವೇಸ್ಟ್ ಡೀಕಾಂಪೋಸರ್ ಬಳಕೆಯಿಂದ ಕಸಕಡ್ಡಿ ತೋಟದಲ್ಲಿ ಮತ್ತು ತಿಪ್ಪೆ ರಾಶಿಯಲ್ಲಿ ಬೇಗ ಕರಗುತ್ತದೆಂದು ಅವರಿಗೆ ಅನುಭವವಾಗಿದೆ. ಇಡೀ ತೋಟಕ್ಕೆ ಡ್ರಿಪ್ ಅಳವಡಿಸಿ ನೀರಿನ ಉಳಿತಾಯ ಮಾಡಬಹುದೆಂದು ಕಂಡುಕೊಂಡಿದ್ದಾರೆ

ಶ್ರೀಮಂತರ ಮನೆಗೆ ಕಳ್ಳರು ನುಗ್ಗುವಂತೆ ಸಮೃದ್ಧವಾಗಿ ಬೆಳೆದ ಇವರ ತೋಟಕ್ಕೆ ಹಂದಿ, ಇಲಿ ಮತ್ತು ಅಳಿಲುಗಳ ಕಾಟವಿದೆ. ಹಾವುಗಳ ಭಯ ಇದ್ದರೂ ನವಿಲುಗಳ ದಾಳಿಯಿಂದ ಕಡಿಮೆಯಾಗಿರುವುದನ್ನು ಕಂಡು ಕೊಂಡಿದ್ದಾರೆ. ಇತ್ತೀಚಿಗೆ ಕೆಂಜಿರುವೆ (ಕೆಂಜಿಗ)ಯ ಸಂಖ್ಯೆ ಹೆಚ್ಚಾಗಿ ಇಲಿ–ಅಳಿಲುಗಳ ಹಾವಳಿಯನ್ನು ಕಡಿಮೆ ಮಾಡಿರುವುದಾಗಿ ಹೇಳುತ್ತಾರೆ.

ಸಾವಯವ ಸರ್ಟಿಫಿಕೇಟ್‌ನ ಅಗತ್ಯ ತನಗಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ಹಣ ಸುರಿಯುವ ಬದಲು ನಮ್ಮಲ್ಲೇ–ಸ್ಥಳೀಯವಾಗಿ, ಪರಸ್ಪರ ಪರಿಚಯ ಮತ್ತು ನಂಬಿಕೆಯ ಮೂಲಕ ಸಾವಯವ ಉತ್ಪನ್ನಗಳನ್ನು ಮಾರಲು ಅವಕಾಶಗಳಿವೆ. ಉಪಯೋಗಿಸಿಕೊಳ್ಳಬೇಕು ಅಷ್ಟೆ ಎನ್ನುತ್ತಾರೆ. ಕುಮಾರಸ್ವಾಮಿಯವರು ಸಾವಯವ ಕೃಷಿ ಒಳ್ಳೆಯದು ಎಂದು ಹೇಳುತ್ತಾ ಸುಮ್ಮನೆ ಕೂರದೆ, ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿದ್ದಾರೆ. ಲಾಭ ಕಡಿಮೆಯಾದರೂ ನಷ್ಟ ಮಾಡಿಕೊಳ್ಳದ ಮಾರ್ಗಗಳನ್ನು ಹುಡುಕಿಕೊಂಡರು. ಪ್ರಯೋಗಶೀಲರಾಗಿಯೂ ನಷ್ಟ ಮಾಡಿಕೊಳ್ಳದ ವಿರಳರ ಗುಂಪಿಗೆ ಸೇರಿದ್ದಾರೆ.



**ಶ್ರೀಮತಿ ಸಂಚಿತ ಮಾಲತೇಶ್,**

**ವಿಳಾಸ : ಕೋಂ ಮಾಲತೇಶ್,**
**ಕರ್ಕಿ ಗ್ರಾಮ, ಬಿಲಗದ್ದೆ ಅಂಚೆ,**
**ಹರಿಹರಪುರ ಹೋಬಳಿ,**
**ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.**
**ದೂರವಾಣಿ: 8762935392**

ನಾಲ್ಕು ಎಕರೆ ಮೂವತ್ತು ಗುಂಟೆ ಜಮೀನು ಹೊಂದಿರುವ ಶ್ರೀಮತಿ ಸಂಚಿತ ಮಾಲತೇಶ್‌ರವರು ಅಡಿಕೆ, ಬಾಳೆ, ಎಲಕ್ಕಿ, ಕಾಳು ಮೆಣಸು, ಕೊಕೋ, ತೆಂಗು, ಲವಂಗ, ಜಾಯಿಕಾಯಿ, ಸಪೋಟ, ಭತ್ತ, ಕಬ್ಬು ಮತ್ತು ತರಕಾರಿ ಬೆಳೆಗಳನ್ನು ಬೆಳೆದಿದ್ದಾರೆ. ಸಾವಯವ ಕೃಷಿಯಲ್ಲಿ ಕಬ್ಬು ಮತ್ತು ಅಡಿಕೆಯಲ್ಲಿ ಮಿಶ್ರ ಬೆಳೆಯಾಗಿ ಏಲಕ್ಕಿಯನ್ನು ಬೆಳೆದಿರುತ್ತಾರೆ. ಸಾವಯವ ಜೀವಾಮೃತ ಬಳಕೆಯಿಂದ ಸಪೋಟ ಹಾಗೂ ಸಾಂಬರು ಸೌತೆ ಬೆಳೆಯನ್ನು ಸಮೃದ್ಧಿಯಾಗಿ ಬೆಳೆದಿರುತ್ತಾರೆ.



ಇವರು ಪ್ರಮುಖವಾಗಿ ಸಮಗ್ರ ಕೃಷಿ ಪದ್ಧತಿಯಲ್ಲಿ ತೊಡಗಿದ್ದು ಮಿಶ್ರ ತಳಿಯ ಗೋವುಗಳು ಹಾಗು ಎರೆಹುಳು ಸಾಕಾಣಿಕೆ ಮಾಡುತ್ತಿದ್ದಾರೆ. ಇವರು ತೋಟದಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಇಳಿಜಾರಿಗೆ ಅಡ್ಡವಾಗಿ ಬದುಗಳು ಹಾಗೂ ಕೃಷಿ ಹೊಂಡವನ್ನು ನಿರ್ಮಿಸಿಕೊಂಡಿದ್ದಾರೆ. ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿರುವ ಇವರು ಇತರೆ ಸಣ್ಣ ಹಿಡುವಳಿದಾರರಿಗೆ ಮಾದರಿಯಾಗಿದ್ದಾರೆ. ಮೇಲ್ಕಂಡ ಬೆಳೆಗಳನ್ನು ಬೆಳೆಯಲು ಶ್ರೀಮತಿ ಸಂಚಿತರವರು ತುಂತುರು ನೀರಾವರಿ ಪದ್ಧತಿಯನ್ನು ಆಳವಡಿಸಿಕೊಂಡಿದ್ದು, ನೀರು ನಿರ್ವಹಣೆಯಲ್ಲಿ ದಾಪುಗಾಲು ಇಟ್ಟಿದ್ದಾರೆ. ಸಂಚಿತರವರು ಸಾವಯವ ವಿಧಾನವನ್ನು ಅಳವಡಿಸುವುದರ ಮೂಲಕ ಮಣ್ಣಿನ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ. ಮನೆಯಲ್ಲಿ ಕೈತೋಟನ್ನು ನಿರ್ಮಿಸಿಕೊಂಡಿದ್ದು ಮನೆಗೆ ಬೇಕಾದ ಹಣ್ಣು, ತರಕಾರಿ ಹಾಗು ಹೂವುಗಳನ್ನು ತಾವೇ ಬೆಳೆದುಕೊಳ್ಳುತ್ತಿದ್ದಾರೆ. ಅಭಿವೃದ್ದಿ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಹಾಗು ಕೃಷಿ ವಿಶ್ವ ವಿದ್ಯಾನಿಲಯದ ಅಧಿಕಾರಿಗಳೊಂದಿಗೆ ನಿಯಮಿತ ವಿಸ್ತರಣಾ ಸಂಪರ್ಕವನ್ನು ಹೊಂದಿದ್ದು ತಾವು ಬೆಳೆಯುವ ಬೆಳೆಗಳ ಬಗ್ಗೆ ಮಾಹಿತಿಗಳನ್ನು ಪಡೆಯುತ್ತಾರೆ. ಶ್ರೀಮತಿ ಮಾಲತೇಶ್‌ರವರು ಸಾವಯವ ಕೃಷಿ ಪರಿವಾರ ಸಂಘದಲ್ಲಿ ಸದಸ್ಯರಾಗಿದ್ದು ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಹಿಸುತ್ತಿದ್ದಾರೆ. ಬೆಳೆದ ಬೆಳೆಗಳನ್ನು ಸಹಕಾರ ಸಂಘ ಹಾಗು ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಾರೆ. ಇವರು ತಮ್ಮ ಕೃಷಿಪದ್ಧತಿಗಳ ಜ್ಞಾನಾರ್ಜನೆಗಾಗಿ ಕೃಷಿಗೆ ಸಂಬಂಧಿಸಿದ ಅನೇಕ ಪತ್ರಿಕೆಗಳಿಗೆ ಸದಸ್ಯರಾಗಿರುತ್ತಾರೆ.

**ಶ್ರೀ ಹರೀಶ್, ಪಿ.ಎನ್.**



**ವಿಳಾಸ : ಬಿನ್. ಲೇಟ್ ನಂಜುಂಡಸ್ವಾಮಿ ಬಿ.ಎಸ್,**
**ಫಲ್ಗುಣಿ ಗ್ರಾಮ ಮತ್ತು ಅಂಚೆ,**
**ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು,**
**ಚಿಕ್ಕಮಗಳೂರು ಜಿಲ್ಲೆ.**
**ದೂರವಾಣಿ: 9141366985**



30 ವರ್ಷ ವಯಸ್ಸಿನ ಶ್ರೀಯುತ ಹರೀಶ್, ಪಿ.ಎನ್. ರವರು ಪಿ.ಯು.ಸಿ. ವ್ಯಾಸಂಗ ಮುಗಿಸಿದ್ದು ಸರ್ಕಾರಿ ಕೆಲಸಗಳತ್ತ ಮುಖ ಮಾಡದೆ ತಮ್ಮನ್ನು ತಾವು ಕೃಷಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಶ್ರೀಯುತರಿಗೆ 3.2 ಎಕರೆ ಕೃಷಿ ಭೂಮಿಯಿದ್ದು ಬಾಳೆ, ಅಡಿಕೆ, ಕಾಫಿ ಮತ್ತು ದೊಣ್ಣೆ ಮೆಣಸಿನಕಾಯಿಯನ್ನು ಮುಖ್ಯಬೆಳೆಯಾಗಿ ಬೆಳೆಯುತ್ತಿದ್ದಾರೆ. ಸದರಿ ರೈತರು ಬಾಳೆ ಬೆಳೆಯಲ್ಲಿ ಉತ್ತಮ ಗುಣಮಟ್ಟದ ಹಾಗೂ ಅಧಿಕ ಇಳುವರಿಯ ಬಾಳೆಯನ್ನು ಬೆಳೆದು ಇತರೆ ಯುವಕರಿಗೆ ಮಾದರಿಯಾಗಿದ್ದಾರೆ. ಇವರು ಬಾಳೆ ಬೆಳೆಗೆ ತುಂತುರು ನೀರಾವರಿಯನ್ನು ಅಳವಡಿಸಿದ್ದು ನೀರು ನಿರ್ವಹಣೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದಾರೆ. ಇವರು ಬಾಳೆ ಬೆಳೆಯಲ್ಲಿ ಆಧುನಿಕ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ತರಕಾರಿ ಬೆಳೆಗಳನ್ನು ಅಂತರಬೆಳೆಗಳಾಗಿ ಬೆಳೆದು ಒಟ್ಟಾರೆ ಅಧಿಕ ಇಳುವರಿ ಹಾಗೂ ಆದಾಯವನ್ನು ಪಡೆದಿದ್ದು ಸ್ಥಳೀಯ ಮಾರುಕಟ್ಟೆಯಲ್ಲಿ ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ಇವರು ಆಧುನಿಕ ಕೃಷಿ ಮತ್ತು ತೋಟಗಾರಿಕಾ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ಇವರ ಜಮೀನು ಅತ್ಯಂತ ಫಲವತ್ತಾಗಿದ್ದು ಇದರಲ್ಲಿ ಬೆಳೆದಂತಹ ಪದಾರ್ಥಗಳು ಸತ್ವಭರಿತ ಹಾಗೂ ಹೆಚ್ಚು ಆಕರ್ಷಣೆಯನ್ನು ಹೊಂದಿದ್ದು ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆಯನ್ನು ಹೊಂದಿರುತ್ತವೆ. ಕಳೆದ ಸಾಲಿನಲ್ಲಿ ಬೇರೆ ಸಂಸ್ಥೆಗಳಿಂದ ಉತ್ತಮ ಯುವ ಕೃಷಿಕ ಹಾಗೂ ಆದರ್ಶ ಕೃಷಿಕ ಎಂಬ ಪ್ರಶಸ್ತಿಗಳು ಆಧುನಿಕ ಹಾಗೂ ಸಮಗ್ರ ಕೃಷಿ ಸಾಧನೆಗೆ ದೊರತಿವೆ. ಇವರು ಬಾಳೆ ಬೆಳೆಯಲ್ಲಿ ಅಧಿಕ ಸಾಂದ್ರ ಬೇಸಾಯ, ತರಕಾರಿ ಬೆಳೆ ಹಾಗೂ ಎರೆಹುಳು ಗೊಬ್ಬರದ ತಯಾರಿಕೆ ಬಗ್ಗೆ ಇತರೆ ರೈತರಿಗೆ ಮಾಹಿತಿಯನ್ನು ತಿಳಿಸುತ್ತಿದ್ದಾರೆ. ಇವರು ಜಮೀನಿನ ಸುತ್ತ ಅರಣ್ಯ ಬೆಳೆಗಳನ್ನು ಬೆಳೆಸಿ ಅದರ ತ್ಯಾಜ್ಯವಸ್ತುಗಳನ್ನು ಹಸಿರೆಲೆ ಗೊಬ್ಬರವಾಗಿ ಬಳಸುತ್ತಾರೆ. ತಮ್ಮ ಜಮೀನಿನಲ್ಲಿ ಕೃಷಿ ಹೊಂಡವನ್ನು ನಿರ್ಮಿಸಿದ್ದು ಮಣ್ಣು ಮತ್ತು ನೀರಿನ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಕೃಷಿ, ತೋಟಗಾರಿಕೆ, ಕೃಷಿ ವಿಶ್ವವಿದ್ಯಾನಿಲಯ ಹಾಗೂ ಇತರೆ ಅಭಿವೃದ್ಧಿ ಇಲಾಖೆಗಳೊಂದಿಗೆ ಉತ್ತಮ ವಿಸ್ತರಣಾ ಸಂಪರ್ಕವನ್ನು ಹೊಂದಿರುತ್ತಾರೆ. ಇವರು ನರ್ಸರಿಯನ್ನು ಉಪಕಸುಬಾಗಿ ನಂಬಿದ್ದ ಕಾಫಿ, ಕರಿಮೆಣಸು, ಸಿಲ್ವರ್, ಅಡಿಕೆ ಸಸಿಗಳನ್ನು ಮಾಡಿ ರೈತರಿಗೆ ನೀಡಿ ಲಾಭವನ್ನು ಗಳಿಸುತ್ತಿರುತ್ತಾರೆ.



**ಶ್ರೀ ರಾಕೇಶ್**

**ವಿಳಾಸ: ಬಿನ್ ವೆಂಕಟೇಶ್**
**ಕೊಲ್ಲಿಬೈಲು, ಹೆಸ್ಗಲ್ ಪೋಸ್ಟ್**
**ಮೂಡಿಗೆರೆ**
**ದೂ.8310839665**

ವೈಯಕ್ತಿಕ ಸರಕುಗಳ ಮಾರುಕಟ್ಟೆ ಬೆಲೆಗಳು ಅನಿರೀಕ್ಷಿತವಾಗಿ ಬದಲಾಗುವುದರಿಂದ, ಒಂಟಿಯಾಗಿರುವ ಉದ್ಯಮದ ಮೇಲೆ ಒಲವು ತೋರುವುದು ಜಾಣತನವಲ್ಲ. ಪ್ರಸ್ತುತ ಮಾತುಕತೆ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡ ಪ್ರಗತಿ ಹೊಂದಿದ ರೈತರ ಕುರಿತಾಗಿದೆ. ಅವರು ಶ್ರೀ ರಾಕೇಶ್, ಕೆ.ವಿ. ಇವರ ಎದ್ದುಕಾಣುವ ಕೃಷಿ, ತೋಟಗಾರಿಕಾ, ನರ್ಸರಿ, ಮನೆಯ ಮೌಲ್ಯವರ್ಧನೆ, ಮೀನುಗಾರಿಕೆ ಮತ್ತು ಇತರ ಆದಾಯಗಳಿಸುವ ಚಟುವಟಿಕೆಗಳನ್ನು ಹೊಂದಿರುವ ವಿದ್ಯಾವಂತ ಕೃಷಿಕರಾಗಿದ್ದಾರೆ. ಇದು ಅವರನ್ನು ಲಾಭದಾಯಕ ಯುವ ಕೃಷಿಕರನ್ನಾಗಿ ಮಾಡಿದೆ. ಅವರ ಕುಟುಂಬದ ಒಡೆತನದ 60 ಎಕರೆ ಭೂಮಿಯನ್ನು ವೈಜ್ಞಾನಿಕ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಪದವಿ ಪಡೆದ ನಂತರ (ಬಿಎ (ಆರ್ಟ್ಸ್) ಅವರು ಕಾಫಿ (ಅರೇಬಿಕಾ, ರೋಬಸ್ಟಾ) ಮೆಣಸು, ಬಾಳೆಹಣ್ಣು, ತೆಂಗಿನಕಾಯಿ, ಔಷಧೀಯ ಸಸ್ಯಗಳು (ಅಲೋವೆರಾ, ಮಧುನಾಶಿನಿ, ದೊಡ್ಡಪತ್ರೆ, ಪುದೀನ, ಬಸಲೆ ಇತ್ಯಾದಿ) ನರ್ಸರಿಗಳ ಅಭಿವೃದ್ಧಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ ಮತ್ತು ಅವರು ಅವುಗಳನ್ನು ಸಮಂಜಸವಾದ ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದಾರೆ.

ಸುಮಾರು 50 ಎಕರೆ ಜಮೀನು ಕಾಫಿ, ಮೆಣಸು, ತೆಂಗು ಸಪೋಟಾ, ಕೋಕೋ, ಏಲಕ್ಕಿ ಬಾಳೆಹಣ್ಣು ಮುಂತಾದ ಮಿಶ್ರ ಬೆಳೆಗಳು ಇವೆ. ಇದು ಅವರಿಗೆ ಎಕರೆಗೆ ರೂ. 40,000 ಆದಾಯವನ್ನು ನೀಡುತ್ತದೆ. ಭತ್ತವನ್ನು 2 ಎಕರೆ ಭೂಮಿಯಲ್ಲಿ ಬೆಳೆಯಲಾಗುತಿದ್ದು, ಎಕರೆಗೆ ಸುಮಾರು 25 ಕ್ವಿಂಟಾಲ್ ಇಳುವರಿ ಪಡೆದು ಕ್ವಿಂಟಾಲ್‌ಗೆ 1540 ರೂಪಾಯಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಇತರ ಬೆಳೆಗಳನ್ನು (ಮಿಶ್ರ ಬೆಳೆಗಳು) ಮಿಶ್ರ ಬೆಳೆ ಪದ್ಧತಿಯಲ್ಲಿ ಬೆಳೆಯಲಾಗುತ್ತಿದ್ದು, ಇದರಲ್ಲಿ ಸೀಬೆ (1 ಎಕರೆ), ಮಾವು (2 ಎಕರೆ), ಬಾಳೆಹಣ್ಣು (3 ಎಕರೆ), ಸ್ವೀಟ್‌ಫ್ಲಾಗ್ (0.5 ಎಕರೆ), ಮಧುನಾಶಿನಿ (0.5 ಎಕರೆ), ಕಾಂಗೋಸಿಗ್ನಲ್ (0.10 ಎಕರೆ), ಮಲ್ಬೆರಿ (0.5 ಎಕರೆ), ನಿಂಬೆ (1 ಎಕರೆ), ಕೋಕೋ (2 ಎಕರೆ), ಜಾಕ್ ಫ್ರೂಟ್ (3 ಎಕರೆ), ಅರ್ಝೋಲ್ಲಾ (2 x 1 ಮೀಟರ್ ಟ್ಯಾಂಕ್) ಇತ್ಯಾದಿಗಳು ಇವೆ.

ಈ ಪ್ರಸಿದ್ಧ ಚಟುವಟಿಕೆಗಳ ಜೊತೆಗೆ, ಅವರು ಅಣಬೆ ಕೃಷಿ, ಶುಂಠಿ, ಹಣ್ಣಿನ ಕೆಚಪ್, ಹಣ್ಣಿನ ಸ್ಕ್ವ್ಯಾಷ್/ಜಾಮ್, ಜೇನು ಸಾಕಾಣಿಕೆಯಿಂದ ಜೇನುತುಪ್ಪ ಪಡೆಯುತ್ತಿದ್ದು, ಅವರಿಗೆ ತಿಂಗಳಿಗೆ ರೂ. 2000 ಸಿಗುತ್ತಿದೆ. ಇವರು ಕೃಷಿ ಕ್ಷೇತ್ರಕ್ಕೆ ನೀಡಿದ ಕೊಡುಗೆ ಗಮನಿಸಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಮಹೀಂದ್ರ ಅತ್ಯುತ್ತಮ ರೈತ ಹಾಗೂ ವಿಜಯ ಕರ್ನಾಟಕ ಸೂಪರ್ ಸ್ಟಾರ್ ರೈತ ಪ್ರಶಸ್ತಿಯನ್ನು ನೀಡಿ ಗೌರವಿಸಿವೆ.

**ಶ್ರೀ ಚಂದ್ರಶೇಖರ್ ನಾರಾಯಣಪುರ**
**ವಿಳಾಸ : ಮುಗ್ತಿಹಳ್ಳಿ**
**ಚಿಕ್ಕಮಗಳೂರು**
**ದೂ: 9448484024**



ಮೂಲತ: ಅವರು 7 ವರ್ಷದ ಹಿಂದೆ 14 ಎಕರೆಭೂಮಿಯನ್ನು ಚಿಕ್ಕಮಗಳೂರು ಜಿಲ್ಲೆ ಮೂಗ್ತಿಹಳ್ಳಿಯಲ್ಲಿ ಖರೀದಿಸಿದ್ದಾರೆ. ಸಾವಯವ ಕೃಷಿಗೆ ಒಲವನ್ನು ತೋರಿ ಬಾಳೆಹಣ್ಣು, ಏಲಕ್ಕಿ, ಶುಂಠಿ, ಸಪೋಟ, ಸೀಬೆಹಣ್ಣು, ನಿಂಬೆ ಮತ್ತು ಜಾಯಿಕಾಯಿ ಮತ್ತು ಅಡಿಕೆಯನ್ನು ಬೆಳೆದಿದ್ದಾರೆ. ದೊಡ್ಡ ಪ್ರಮಾಣದ ಉತ್ಪಾದನೆಯಲ್ಲಿ, ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ವಿವಿಧ ಬೆಳೆಗಳ ಸಂಯೋಜನೆಯಲ್ಲಿ ಕೊಟ್ಟಿಗೆ ಗೊಬ್ಬರ ಉತ್ಪಾದನೆ, ಹಸಿರೆಲೆಗೊಬ್ಬರ, ಎರೆಹುಳು ಗೊಬ್ಬರ, ಜೀವಂತ ಬೇಲಿ ಮತ್ತು ಅಝೋಲ್ಲಾ ಉತ್ಪಾದನೆ ಮಾಡುತ್ತಿದ್ದಾರೆ. ಹೈನುಗಾರಿಕೆ ಮತ್ತು ಬಯೋಡೈಜಸ್ಟರ್ ಅಳವಡಿಸಿಕೊಂಡು ಸಮಗ್ರ ಪದ್ಧತಿ ನಡೆಸುತ್ತಿರುವ ಇವರ ತೋಟಕ್ಕೆ ಸುಮಾರು 2000 ರೈತರು ಭೇಟಿ ನೀಡಿರುತ್ತಾರೆ. ಶ್ರೀಯುತರು ವರ್ಷಪೂರ್ತಿ 3 ಕಾರ್ಮಿಕರಿಗೆ ಉದ್ಯೋಗವನ್ನು ಸೃಷ್ಟಿಸಿ ಮತ್ತು ಪ್ರತಿ ವರ್ಷ 200ಕ್ಕೂ ಹೆಚ್ಚು ಮಾನವ ದಿನಗಳ ಕೆಲವನ್ನು ನೀಡಿರುತ್ತಾರೆ. ಕೃಷಿ ಸಂಬಂಧಿತ ಇಲಾಖೆಯಿಂದ ಆಯೋಜಿಸಲಾದ ವಿವಿಧ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸೇವೆ ಸಲ್ಲಿಸುವ ಮೂಲಕ ಅವರ ಶ್ರೀಮಂತ ಅನುಭವವನ್ನು ಇತರೆ ರೈತರಿಗೆ ಹಂಚುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿ ನೀಡಿದ ಕೊಡುಗೆ ಮತ್ತು ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ತೋಟಗಾರಿಕಾ ವಿಶ್ವವಿದ್ಯಾಲಯ, ಬಾಗಲಕೋಟೆ ಮತ್ತು ಇತರೆ ಪ್ರತಿಷ್ಠಿತ ಸಂಸ್ಥೆಗಳು ಜಿಲ್ಲಾ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಯನ್ನು ನೀಡಿರುತ್ತಾರೆ. ಇವರು ಗುಜರಾತ್ ಸರ್ಕಾರದಿಂದ ಅತ್ಯುತ್ತಮ ಕಿಸಾನ್ ಪ್ರಶಸ್ತಿಯನ್ನು ಪಡೆದಿರುತ್ತಾರೆ.

**ಶ್ರೀ ಜೀವನ್**



**ವಿಳಾಸ: ಬಿನ್ ಶ್ರೀ ಬಿಳಿ ಗೌಡ**
**ಬಾಳೆಗದ್ದೆ ಗ್ರಾಮ**
**ಮೂಡಿಗೆರೆ**
**ಚಿಕ್ಕಮಗಳೂರು**
**ದೂ 94821242216**

ಜೀವನ್ ರವರು ಯಶಸ್ವಿ ಹಿತ್ತಲಕೋಳಿ ಸಾಕಾಣಿಕೆ ಯುವಕ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಬಾಳೆಗದ್ದೆ ಗ್ರಾಮದಲ್ಲಿ 20 ವರ್ಷಗಳ ಕೃಷಿ ಏಕ ಬೆಳೆ ಪದ್ಧತಿಯಾಗಿತ್ತು, ಈ ಮೊದಲು ಅವರು ಕಡಿಮೆ ಇಳುವರಿ ಮತ್ತು ಆದಾಯದೊಂದಿಗೆ ಕಾಫಿ ಮತ್ತು ಭತ್ತವನ್ನು ಬೆಳೆಯುತ್ತಿದ್ದರು. ಅನೇಕ ಇತರೆ ವಿದ್ಯಾವಂತ ನಿರುದ್ಯೋಗಿ ಯುವಕರಂತೆ ಇವರು ಸಹ ಉದ್ಯೋಗವನ್ನು ಹುಡುಕುತ್ತಿದ್ದರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳೊಂದಿಗೆ ಇವರ ಪರಿಚಯ ಬಹುಸ್ಥಿರ ಬೆಳೆ ಪದ್ಧತಿ (ಅಡಿಕೆ, ಮೆಣಸು, ಸಿಲ್ವರ್ ಮತ್ತು ಕಾಫಿ) ಅಭಿವೃದ್ಧಿಪಡಿಸುವಲ್ಲಿ ಮತ್ತು ಹಿತ್ತಲಿನ ಕೋಳಿ ಸಾಕಾಣಿಕೆಯಲ್ಲಿ ಸಮಗ್ರ ಕೃಷಿ ವ್ಯವಸ್ಥೆ ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಯಿತು. ಕೋಳಿಯಲ್ಲಿ ಸುಧಾರಿತ ತಳಿಗಳಾದ ಗಿರಿರಾಜ/ಸ್ವರ್ಣಧಾರ ಮತ್ತು ನಾಟಿ ಕೋಳಿ ಮರಿಗಳ ಸುಮಾರು 300 ಪಕ್ಷಿಗಳನ್ನು ಪಾಲನೆಗಾಗಿ ಅವರು ಕಡಿಮೆ ವೆಚ್ಚದ ವಿಶಾಲವಾದ ಹಿತ್ತಲಿನ ಕೋಳಿ ಕೋಣೆಯನ್ನು ನಿರ್ಮಿಸಿ 50 ಮರಿಗಳ ಪಾಲನೆಗಾಗಿ ಒಟ್ಟು ರೂ. 7400 ವೆಚ್ಚ ಮಾಡಿದರು. ಎರಡು ತಿಂಗಳ ಕಾಲ ಕೋಳಿ ಮರಿಗಳನ್ನು ಸಾಕಿ, ಆಹಾರ ಒದಗಿಸುವ ಮೂಲಕ ಪ್ರತಿ ಮರಿ 2.5 ಕೆ.ಜಿ ತೂಕವನ್ನು ಪಡೆದು ಪ್ರತಿ ಕೆ.ಜಿ.ಗೆ 200 ರಂತೆ ಮಾರಾಟ ಮಾಡಿ ಒಟ್ಟು ಆದಾಯ 25,000 ರೂಗಳಳನ್ನು ಪಡೆಯಲಾಯಿತು. ಕಡಿಮೆ ವೆಚ್ಚ ಬೇಸಾಯವನ್ನು ಮಾಡುವ ಮೂಲಕ ಕೃಷಿ ಆಧಾರಿತ ಮತ್ತು ಯಾಂತ್ರೀಕರಣದ ಅಳವಡಿಕೆ ಮೂಲಕ ಅವರು ತಮ್ಮ ಜಮೀನನ್ನು ಸುಧಾರಿಸಿದರು. ಈ ರೀತಿಯಾಗಿ ಅಳವಡಿಕೊಂಡ ತಂತ್ರಜ್ಞಾನಗಳು ಮತ್ತು ಬೆಳೆ ವೈವಿಧ್ಯತೆಯಿಂದ ವಾರ್ಷಿಕ ಒಟ್ಟು ಆದಾಯ ರೂ. 5.0 ಲಕ್ಷ ಪಡೆಯಲಾಗುತ್ತಿದೆ.

**ರೈತರ ಹೆಸರು : ಹೆಚ್.ಆರ್. ಶಶಿಧರ್**



**ವಿಳಾಸ : ಬಿನ್ ಹೆಚ್.ಎಸ್.ರಾಮೇಗೌಡ**
**ಹಂಪಾಪುರ ಗ್ರಾಮ**
**ಕಸಬ ಹೋಬಳಿ**
**ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9731403243**

ಶ್ರೀಯುತರು ಕಳೆದ ಹದಿನೈದು ವರ್ಷಗಳಿಂದ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಇವರು 10ನೇ ತರಗತಿ ಓದಿದ ನಂತರ ತಮ್ಮ ಜಮೀನಿನಲ್ಲಿ ತರಕಾರಿ ಬೆಳೆಗಳಾದ ಟೊಮ್ಯಾಟೊ, ಬೆಂಡೆ, ಜವಳಿಕಾಯಿ, ಆಲೂಗಡ್ಡೆ ಮತ್ತು ಭತ್ತವನ್ನು ನಾಲ್ಕು ಎಕರೆ ಜಮೀನಿನಲ್ಲಿ ಬೆಳೆಯುತ್ತಿರುತ್ತಾರೆ. ಇವರು ಭತ್ತವನ್ನು ಒಣ ಪ್ರದೇಶದಲ್ಲಿ ಮಳೆಯ ಆಧಾರಿತವಾಗಿ ಸಾಲಿನಲ್ಲಿ ಚೆಲ್ಲಿ ಅರ್ಧ ಎಕರೆಯಲ್ಲಿ ಬೆಳೆದಿರುತ್ತಾರೆ ಮತ್ತು ಇನ್ನೂ ಅರ್ಧ ಎಕರೆಯಲ್ಲಿ ನೀರನ್ನು ಉಪಯೋಗಿಸಿ ಭತ್ತವನ್ನು ಬೆಳೆದಿರುತ್ತಾರೆ. ಇವರು 20 ರಿಂದ 25 ಚೀಲ ಇಳುವರಿ ಪಡೆದಿರುತ್ತಾರೆ.

ಇಂದಿನ ಕೃಷಿಕರು ತರಕಾರಿ ಬೆಳೆಗಳನ್ನು ಅಧಿಕ ಪ್ರದೇಶದಲ್ಲಿ ಬೆಳೆದು ನಷ್ಟ ಅನುಭವಿಸುವುದನ್ನು ಮನಗಂಡ ಇವರು ತಮ್ಮ ಜಮೀನಿನಲ್ಲಿ ಅರ್ಧ ಎಕರೆ ಪ್ರದೇಶದಲ್ಲಿ ಟೊಮ್ಯಾಟೋ, ಅರ್ಧ ಎಕರೆ ಪ್ರದೇಶದಲ್ಲಿ ಬೆಂಡಿ, ಹತ್ತು ಗುಂಟೆ ಜಾಗದಲ್ಲಿ ಜವಳಿಕಾಯಿ ಬೆಳೆದು ಅಧಿಕ ಲಾಭವನ್ನು ಗಳಿಸಿ ಸುತ್ತಮುತ್ತಲ ಪ್ರದೇಶದ ರೈತರಿಗೆ ಮಾರ್ಗದರ್ಶಿಯಾಗಿದ್ದಾರೆ. ಇವರು ಒಂದೂವರೆ ಎಕರೆ ಮಳೆಯಾಶ್ರಿತ ಪ್ರದೇಶದಲ್ಲಿ ಆಲೂಗಡ್ಡೆಯನ್ನು ಬೆಳೆದು ಅಂಗಮಾರಿ ರೋಗವನ್ನು ಸಮಗ್ರವಾಗಿ ಹತೋಟಿಗೆ ತಂದು ರೂ. 1 ಲಕ್ಷದವರೆಗೆ ಲಾಭವನ್ನು ಪಡೆದಿರುತ್ತಾರೆ. ಸದರಿ ಶ್ರೀಯುತರ ಮನೆಯಲ್ಲಿ ಎರಡು ಎರೆಹುಳು ತೊಟ್ಟಿಗಳಿದ್ದು ಅವುಗಳು 12 ಅಡಿ ಉದ್ದ, 4 ಅಡಿ ಅಗಲ, 2 ಅಡಿ ಎತ್ತರವಿದೆ, ಇವರ ಹತ್ತಿರ 6 ಸಿಂಧಿ ಹಸುಗಳಿದ್ದು, ಅದರಿಂದ ದೊರೆಯುವ ಸಗಣಿಯನ್ನು ಎರೆಹುಳು ತೊಟ್ಟಿಗೆ ಬಳಸುವುದಲ್ಲದೆ, ನಾಲ್ಕು ಡ್ರಮ್‌ನಷ್ಟು ಜೀವಾಮೃತವನ್ನು ತಯಾರು ಮಾಡಿ ತರಕಾರಿ ಬೆಳೆಗಳಿಗೆ ಉಪಯೋಗಿಸುವುದರಿಂದ ಕೀಟ ಮತ್ತು ರೋಗಗಳನ್ನು ನಿಯಂತ್ರಿಸಿ, ಅದರ ಜೊತೆ ಅಧಿಕ ಲಾಭವನ್ನು ಗಳಿಸಿದ್ದಾರೆ.

ಭತ್ತ ಬೆಳೆಯುವ ಮುಂಚೆ ಹಸಿರೆಲೆ ಗೊಬ್ಬರಗಳಾದ ಡಯಿಂಚಾವನ್ನು ಬೆಳೆದು ಭೂಮಿಗೆ ಸೇರಿಸುವುದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚು ಮಾಡಿರುತ್ತಾರೆ. ಇದರಿಂದ ಅವರು ರಾಸಾಯನಿಕ ಗೊಬ್ಬರವನ್ನು ಕಡಿಮೆ ಉಪಯೋಗಿಸುತ್ತಿದ್ದಾರೆ. ಇವರ ಮನೆಯ ಮುಂದೆ ಅರ್ಝೋಲ್ಲಾ ತೊಟ್ಟಿಯಿದ್ದು ಇದರಿಂದ ದೊರೆಯುವ ಅರ್ಝೋಲ್ಲಾವನ್ನು ಪಶುವಿನ ಆಹಾರವಾಗಿ ಉಪಯೋಗಿಸುತ್ತಿರುತ್ತಾರೆ. ಅವರ ಬಳಿ ಇರುವ ಹಸುಗಳಿಗೆ ನೇಪಿಯರ್ ಹುಲ್ಲು ಮತ್ತು ಹೈಬ್ರಿಡ್ ಜೋಳವನ್ನು ಬೆಳೆದು ಅರ್ಝೋಲ್ಲಾವನ್ನು ಆಹಾರದ ಜೊತೆ ಮಿಶ್ರಮಾಡಿ ಅಧಿಕ ಹಾಲಿನ ಇಳುವರಿಯನ್ನು ಪಡೆದು ಒಳ್ಳೆಯ ಲಾಭಗಳಿಸುತ್ತಿದ್ದಾರೆ. ಶ್ರೀಯುತರು ಮಳೆ ನೀರು ಕೊಯ್ಲು ಪದ್ಧತಿಯನ್ನು ಸಹ ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿರುತ್ತಾರೆ ಹಾಗೂ ಇವರು ಬೀರಲಿಂಗೇಶ್ವರ ಸಾವಯವ ಕೃಷಿಕರ ಸಮಿತಿಯ ನಿರ್ದೇಶಕರು ಸಹ ಆಗಿರುತ್ತಾರೆ.

**ರೈತರ ಹೆಸರು: ಡಿ.ಎಸ್. ವಿಶಾಲಾಕ್ಷಿ**



**ವಿಳಾಸ: ಕೋಂ ಬಿನ್ ಎಸ್.ಕೆ. ರೇಣುಕ**
**ಸಾದರಹಳ್ಳಿ,**
**ಹಿರೇಗೌಜ ಅಂಚೆ**
**ಚಿಕ್ಕಮಗಳೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9480581135**

ತಮ್ಮ ಪತಿ ಶ್ರೀಯುತ ಎಸ್.ಕೆ. ರೇಣುಕರವರ ಜೊತೆಗೂಡಿ ಶ್ರೀಮತಿ ವಿಶಾಲಾಕ್ಷಿಯವರು ಎರಡೂವರೆ ಎಕರೆ ಪ್ರದೇಶದ ಒಣ ಭೂಮಿಯಲ್ಲಿ ಮೊದಲಿಗೆ ಇಂಡಾಫ್–11 ರಾಗಿ ತಳಿಯನ್ನು ಅರ್ಧ ಎಕರೆಯಲ್ಲಿ ಬೆಳೆದು 8 ರಿಂದ 9 ಕ್ವಿಂಟಾಲ್ ಇಳುವರಿಯನ್ನು ಪಡೆದರು. ತದನಂತರ ತಮ್ಮ ಜಮೀನಿನಲ್ಲಿ ಒಂದು ಬೋರ್‌ವೆಲ್ಲಿನ ಸಹಾಯದಿಂದ ಅರ್ಧ ಎಕರೆಯ ಪ್ರದೇಶದಲ್ಲಿ ತಿಂಗಳ ಹುರುಳಿಯನ್ನು ಬೆಳೆದು ಸುಮಾರು ರೂ. 35,000/– ಲಾಭ ಗಳಿಸಿರುತ್ತಾರೆ. ಹಾಗೆಯೇ 232, ಅವಿನಾಶ್, ಅಭಿನವ್ ಎಂಬ ಟೊಮ್ಯಾಟೋ ತಳಿಯನ್ನು ಇನ್ನುಳಿದ ಅರ್ಧ ಎಕರೆ ಪ್ರದೇಶದಲ್ಲಿ ಬೆಳೆದು ಸುಮಾರು 25 ರಿಂದ 30 ಸಾವಿರ ರೂ. ಲಾಭ ಗಳಿಸಿರುತ್ತಾರೆ, ಒಂದು ಎಕರೆ ಪ್ರದೇಶದಲ್ಲಿ ಈರುಳ್ಳಿಯನ್ನು ಬೆಳೆದು ಸುಮಾರು 70 ಸಾವಿರ ರೂ. ಲಾಭ ಗಳಿಸಿರುತ್ತಾರೆ. ಶ್ರೀಯುತರ ಬಳಿ ಎರಡು ಎರೆಹುಳುವಿನ ತೊಟ್ಟಿ ಘಟಕವಿದ್ದು ಅದರಿಂದ ಬರುವ ಎರೆಗೊಬ್ಬರ ಹಾಗೂ ಎರೆಹುಳುವನ್ನು ಮಾರಾಟ ಮಾಡಿ ಅದರಿಂದಲೂ ಲಾಭಗಳಿಸುತ್ತಿದ್ದಾರೆ. ಇವರ ಜಮೀನಿನಲ್ಲಿ ಸುಮಾರು 20 ತೆಂಗಿನ ಮರಗಳಿದ್ದು ಪ್ರತಿ ಗಿಡಕ್ಕೆ 50 ತೆಂಗಿನ ಕಾಯಿ ಇಳುವರಿಯನ್ನು ಪಡೆಯುತ್ತಿದ್ದು, ಯಾವುದೇ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸುತ್ತಿರುವುದಿಲ್ಲ.

ಇವರ ಬಳಿ 5 ಎಮ್ಮೆಗಳಿದ್ದು, ಅದರಿಂದ ದೊರೆಯುವ ಸಗಣಿಯು ಅವರ ಜಮೀನಿಗೆ ಸಾಕಷ್ಟು ಗೊಬ್ಬರವನ್ನು ಒದಗಿಸುತ್ತಿದೆ. ಇವರು ಕೃಷಿಕ ಸಮಾಜದ ಸದಸ್ಯರು ಹಾಗೂ ಸ್ಥಳೀಯ ಸ್ತ್ರೀ ಶಕ್ತಿ ಗುಂಪಿನ ಅಧ್ಯಕ್ಷರು ಸಹ ಆಗಿರುತ್ತಾರೆ. ಇವರ ಬಳಿ ಮುಸುಕಿನ ಜೋಳದ ಒಕ್ಕಣೆ ಯಂತ್ರ ಸಹ ಇದ್ದು, ಇದರಿಂದ ಇವರಿಗೆ ಹೆಚ್ಚುವರಿ ಲಾಭ ದೊರೆಯುತ್ತಿದೆ.

**ರೈತರ ಹೆಸರು: ಶ್ರೀಮತಿ ಗೀತಾ**



**ವಿಳಾಸ: ಕೋಂ ನಾಗಭೂಷನ್**
**ಶ್ಯಾನುಭೋಗನಹಳ್ಳಿ**
**ಅಮೃತಾಪುರ ಹೋಬಳಿ**
**ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9448665888, 9902971111**

ಶ್ರೀಮತಿ ಗೀತಾರವರು ಕೇವಲ 3 ಎಕರೆ 17 ಗುಂಟೆ ಜಮೀನು ಹೊಂದಿದ್ದು, ಇದರಲ್ಲಿ ಅನೇಕ ಕೃಷಿ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆದು 12 ಜೊತೆ ಹಸುಗಳನ್ನು ಹೊಂದಿದ್ದು, ಹೈನುಗಾರಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸುತ್ತಮುತ್ತಲ ರೈತಮಹಿಳೆಯರಲ್ಲಿ ಪ್ರಮುಖರಾಗಿದ್ದಾರೆ. ಇವರು 12 ಜೊತೆ ಹೆಚ್.ಎಫ್ ಹಸುಗಳನ್ನು ಸಾಕಿ ಹಾಲನ್ನು ಡೈರಿಗೆ ಹಾಕಿ ಅಧಿಕ ಹಣ ಗಳಿಸುತ್ತಿದ್ದಾರೆ. ಅದೇ ರೀತಿ ಮಾದರಿ ರೈತ ಮಹಿಳೆಯಾಗಿ ಹೊರ ಹೊಮ್ಮಿದ್ದಾರೆ. ಹಸುಗಳಿಂದ ದೊರೆಯುವ ಸಗಣಿ ಮತ್ತು ಗಂಜಲದಿಂದ ಸಾಕಷ್ಟು ಗೊಬ್ಬರವನ್ನು ತಯಾರು ಮಾಡಿ ತಮ್ಮ ಜಮೀನಿಗೆ ಉಪಯೋಗಿಸುವುದಲ್ಲದೆ ಇತರ ರೈತರಿಗೂ ಸಹ ಮಾರಾಟ ಮಾಡಿ ಸುಖ ಜೀವನ ನಡೆಸುತ್ತಿದ್ದಾರೆ.

ಇವರ ಬಳಿ ಒಂದು ಬೋರ್‌ವೆಲ್ ಇದ್ದು ಸುಮಾರು ಒಂದೂವರೆ ಎಕರೆ ಪ್ರದೇಶದಲ್ಲಿ ಮುಸುಕಿನ ಜೋಳವನ್ನು ಹಾಕಿ ಜೋಳದ ಹುಲ್ಲನ್ನು ಕತ್ತರಿಸಿ ಅದನ್ನು ಹಸುಗಳಿಗೆ ಆಹಾರವಾಗಿ ನೀಡುತ್ತಾ ಬಂದಿದ್ದಾರೆ, ಇದರಿಂದ ವೆಸ್ಟೇಜ್ ಅನ್ನು ಕಡಿಮೆ ಮಾಡುತ್ತಾ ಬಂದಿದ್ದಾರೆ ಒಂದು ಹಸು ಪ್ರತಿದಿನ 10–12 ಲೀಟರ್ ಹಾಲು ನೀಡುತ್ತಿದ್ದು ಅದನ್ನು ಸ್ಥಳಿಯ ಡೈರಿಯಲ್ಲಿ ನೀಡಿ ಅಧಿಕ ಲಾಭ ಪಡೆಯುತ್ತಿದ್ದಾರೆ. ಹಾಗೆಯೇ ಸುಮಾರು ಒಂದು ಎಕರೆ ಪ್ರದೇಶದಲ್ಲಿ ಈರುಳ್ಳಿ ಹಾಗೂ ತರಕಾರಿ ಬೆಳೆಗಳನ್ನು ಬೆಳೆದು ಒಳ್ಳೆ ಲಾಭವನ್ನು ಪಡೆದಿರುತ್ತಾರೆ. ಸುಮಾರು ಒಂದು ಎಕರೆ ಪ್ರದೇಶದಲ್ಲಿ ಮಾವಿನ ಗಿಡಗಳನ್ನು ಬೆಳೆದಿದ್ದು, ಇದರಲ್ಲಿ ರೂ. 50,000 ದಷ್ಟು ಲಾಭ ಪಡೆಯುತ್ತಿರುತ್ತಾರೆ.



**ರೈತರ ಹೆಸರು: ಶ್ರೀಮತಿ ತುಂಗಾಮಣಿ ಹೆಚ್.ಆರ್.**

**ವಿಳಾಸ: ಕೋಂ ಪಂಚಾಕ್ಷರಿ**
**ಸುರಪುರ, ಯಗಟಿ**
**ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9731847309**

ಶ್ರೀಮತಿ ತುಂಗಾಮಣಿಯವರ ಹತ್ತಿರ 4.2 ಗುಂಟೆ ಜಮೀನಿದ್ದು, ಇದರಲ್ಲಿ ಇವರು ಅನೇಕ ತರಕಾರಿ ಹಾಗೂ ಕೃಷಿ ಬೆಳೆಗಳನ್ನು ಬೆಳೆದು ಅಧಿಕ ಲಾಭವನ್ನು ಗಳಿಸುತ್ತಿದ್ದಾರೆ. ಇವರು ಅರ್ಧ ಎಕರೆ ಪ್ರದೇಶದಲ್ಲಿ ಟೊಮ್ಯಾಟೊ ಬೆಳೆಯನ್ನು ಬೆಳೆದು ಸುಮಾರು ರೂ. 40,000 ದಷ್ಟು ಲಾಭ ಪಡೆದಿರುತ್ತಾರೆ. ತರಕಾರಿ ಬೆಳೆಗಳಾದ ಕಪ್ಪು ಬದನೆಕಾಯಿಯನ್ನು ಅರ್ಧ ಎಕರೆಯಲ್ಲಿ ಬೆಳೆದು ಸುಮಾರು ರೂ. 10,000 ದಷ್ಟು ಲಾಭ ಪಡೆದಿರುತ್ತಾರೆ. ಇದರ ಜೊತೆಗೆ ಮೆಣಸಿನ ಕಾಯಿ, ಹಾಗಲಕಾಯಿ, ಪಡುವಲಕಾಯಿಯನ್ನು ಮನೆಯ ಮುಂದೆ ಕೈತೋಟದಲ್ಲಿ ಬೆಳೆದು ತಮ್ಮ ದಿನ ನಿತ್ಯದ ಬಳಕೆಗೆ ಬೇಕಾದ ತರಕಾರಿಗಳ  ಸ್ವತ: ತಾವೇ ಬೆಳೆದು ಉಪಯೋಗಿಸುತ್ತಿದ್ದಾರೆ.

ಹಾಗೆಯೇ ಪ್ರಸ್ತುತ ದಿನಗಳಲ್ಲಿ ಎರಡು ಎಕರೆಯಲ್ಲಿ ರಾಗಿಯನ್ನು ಬೆಳೆದು ಸುಮಾರು 25 ಕ್ವಿಂಟಾಲ್ ಇಳುವರಿ ತೆಗೆದು ಜೊತೆಗೆ ಅಧಿಕ ಹುಲ್ಲಿನ ಇಳುವರಿಯನ್ನು ಪಡೆದಿರುತ್ತಾರೆ. ಅರ್ಧ ಎಕರೆ ಪ್ರದೇಶದಲ್ಲಿ ಇವರು ಮುಸುಕಿನ ಜೋಳವನ್ನು ಹಾಕಿ, ರೂ 6,000 ದಷ್ಟು ಲಾಭ ಪಡೆದಿರುತ್ತಾರೆ. ಇದರ ಜೊತೆಗೆ ಇವರ ಬಳಿಯಲ್ಲಿ ಎರಡು ಸಿಂದಿ ಹಸುಗಳಿದ್ದು ದಿನಕ್ಕೆ 6 ರಿಂದ 7 ಲೀಟರ್ ಹಾಲು ಪಡೆಯುತ್ತಿರುತ್ತಾರೆ. ಪಶು ಸಂಗೋಪನೆಯಿಂದ ದೊರೆಯುವ ತ್ಯಾಜ್ಯ ವಸ್ತುವನ್ನು ಬಳಸಿ ಸುಧಾರಿತ ಕಾಂಪೋಸ್ಟ್ ಉತ್ಪಾದಿಸುತ್ತಿದ್ದು ಇವರು ಬೆಳೆಯುವ ಎಲ್ಲಾ ಬೆಳೆಗಳ ಸಾವಯವ ಗೊಬ್ಬರದ ಅವಶ್ಯಕತೆ ಪೂರೈಸಿಕೊಳ್ಳುತ್ತಿದ್ದಾರೆ, ಇದರಿಂದ ಉತ್ತಮ ಗುಣಮಟ್ಟದ ಬೆಳೆ ಉತ್ಪನ್ನಗಳನ್ನು ಗಳಿಸುತ್ತಿದ್ದಾರೆ. ರಾಗಿ ಮತ್ತು ಜೋಳದ ಒಣ ಹುಲ್ಲನ್ನು ತಮ್ಮ ದನಗಳಿಗೆ ನೀಡುತ್ತ, ಬೇಸಿಗೆ ಕಾಲದಲ್ಲಿ ತಮ್ಮ ದನಕರುಗಳಿಗೆ ಮೇವನ್ನು ಪೂರೈಸುತ್ತಿದ್ದಾರೆ.

**ರೈತರ ಹೆಸರು: ಶ್ರೀಮಂಜುನಾಥ್**



**ವಿಳಾಸ: ಬಿನ್ ಲಕ್ಷ್ಮಯ್ಯ**
**ಸರಸ್ವತಿಪುರ ಗ್ರಾಮ ಮತ್ತು ಅಂಚೆ**
**ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 7411741659**

ಶ್ರೀ ಮಂಜುನಾಥ್ ರವರು ತಮ್ಮ ಶಿಕ್ಷಕರ ತರಬೇತಿಯ ನಂತರ ಸರಕಾರಿ ಕೆಲಸಕ್ಕೆ ಕಾಯದೆ, ತಮ್ಮನ್ನ ತಾವು ಕೃಷಿಯಲ್ಲಿ ತೊಡಗಿಸಿಕೊಂಡು ತಮ್ಮ ಹತ್ತಿರ ಇರುವ ಜಮೀನಿನಲ್ಲಿ ತರಕಾರಿ, ರಾಗಿ, ಅಡಿಕೆ, ತೆಂಗಿನ ಬೆಳೆಗಳನ್ನು ಬೆಳೆದು ಸುತ್ತಮುತ್ತಲಿನ ಗ್ರಾಮದಲ್ಲಿ ಓದಿ ಕೆಲಸವಿಲ್ಲದೆ ಇರುವ ಯುವಕರಲ್ಲಿ ವಿಭಿನ್ನವಾಗಿ ಕಂಡುಬಂದಿದ್ದು ಎಲ್ಲ ವಿದ್ಯಾವಂತ ಯುವಕರಿಗೆ ಮಾದರಿ ಎನಿಸಿದ್ದಾರೆ.

ಶ್ರೀಯುತರು 1.20 ಎಕರೆ ಪ್ರದೇಶದಲ್ಲಿ ಏಕಬೆಳೆಯಾಗಿ ಅಡಿಕೆಯನ್ನು ಬೆಳೆಯುತ್ತಿದ್ದು, ವರ್ಷಕ್ಕೆ ರೂ. 1,25,000/ ಆದಾಯ ಗಳಿಸುತ್ತಿದ್ದಾರೆ. ಇದಲ್ಲದೆ ಮೂರು ಎಕರೆಯಲ್ಲಿ ಅಡಿಕೆ ಬೆಳೆಯನ್ನು ಬೆಳೆದಿದ್ದು ಅದರಲ್ಲಿ ಮಿಶ್ರ ಬೆಳೆಯಾಗಿ ಹೈಬ್ರಿಡ್ ಟೊಮ್ಯಾಟೋ ಮತ್ತು ಆಲುಗಡ್ಡೆಯನ್ನು ಬೆಳೆದು ರೂ. 2,50,000/ ಆದಾಯ ಗಳಿಸಿದ್ದಾರೆ. ಇವರು ಒಂದು ಎಕರೆ ಪ್ರದೇಶದಲ್ಲಿ ಇಂಡಾಫ್-5 ತಳಿ ರಾಗಿ ಬೆಳೆ ಬೆಳೆದು, ಅಧಿಕ ಉಳುವರಿಯನ್ನು 06–08 ಕ್ವಿಂಟಾಲ್ ಗಳಿಸಿದ್ದಾರೆ. ಇವರು 200 ತೆಂಗಿನ ಮರಗಳನ್ನು ಸಹ ಬೆಳೆಯುತ್ತಿದ್ದು ವರ್ಷಕ್ಕೆ ಪ್ರತಿ ಮರದಿಂದ 60–65 ತೆಂಗಿನ ಕಾಯಿ ಇಳುವರಿ ಪಡೆಯುತ್ತಿದ್ದಾರೆ.

ಶ್ರೀಯುತರು ಬೆಳೆ ಪರಿವರ್ತನೆ ಮಾಡಿ ತರಕಾರಿಯ ನಂತರ ಅವರೆ, ಹುರಳಿ ಹಾಗು ಜೋಳದ ಬೆಳೆಯನ್ನು ಬೆಳೆಯುತ್ತಿದ್ದಾರೆ. ಅಡಿಕೆ ಮತ್ತು ತರಕಾರಿ ಬೇಸಾಯಕ್ಕೆ ಹನಿ ನೀರಾವರಿ ಪದ್ಧತಿ ಅಳವಡಿಸಿ ನೀರಿನ ವಿವೇಚನಾತ್ಮಕ ಬಳಕೆ ಮಾಡುತ್ತಿದ್ದಾರೆ.

ಇವರು ಪಶುಸಂಗೋಪನೆ ಮಾಡುತ್ತಿದ್ದು ಮೂರು ನಾಟಿ ಹಸುಗಳು, ಒಂದು ಎಮ್ಮೆ ಮತ್ತು ಎರಡು ಎತ್ತುಗಳನ್ನು ಸಾಕುತ್ತಿದ್ದಾರೆ. ಇದರಿಂದ ದಿನಕ್ಕೆ 8 ರಿಂದ 10 ಲೀಟರ್ ಹಾಲು ಉತ್ಪಾದನೆ ಗಳಿಸುತ್ತಿದ್ದು ಎತ್ತುಗಳನ್ನು ಬೇಸಾಯ ಕ್ರಮಗಳಲ್ಲಿ ಸಕ್ರಿಯವಾಗಿ ಬಳಸಿಕೊಳ್ಳುತ್ತಿದ್ದಾರೆ. ಒಟ್ಟಾರೆ ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸಿ ನಿರಂತರ ಆದಾಯ ಗಳಿಸುತ್ತಾ ಒಬ್ಬ ಉತ್ತಮ ಮಾದರಿ ಯುವ ರೈತರಾಗಿರುತ್ತಾರೆ.

**ರೈತರ ಹೆಸರು: ಶ್ರೀ ನಿಶ್ಚಲ್**



**ವಿಳಾಸ: ಬಿನ್ ಬಿ. ಚಂದ್ರಶೇಖರ್**
**ಮಕ್ಕಿವಳ್ಳಿ, ಧರೆಕೊಪ್ಪ**
**ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9480426375**

ಶ್ರೀಯುತರು ಸಣ್ಣ ರೈತರಾಗಿದ್ದು, ಇರುವ ಕಡಿಮೆ ಭೂಮಿಯಲ್ಲಿಯೇ ಭತ್ತ, ಅಡಿಕೆ, ಕಾಫಿಯನ್ನು ಸಾವಯವ ಕೃಷಿಯಲ್ಲಿ ಬೆಳೆದು ಲಾಭಗಳಿಸಿ ಇತರರಿಗೆ ಮಾದರಿಯಾಗಿದ್ದಾರೆ. ಇವರು ಎರಡು ಎಕರೆ ಪ್ರದೇಶದಲ್ಲಿ ಸಣ್ಣ ಐ.ಇ.ಟಿ ಭತ್ತವನ್ನು ಬೆಳೆದು ಸುಮಾರು 60 ಕ್ವಿಂಟಾಲ್‌ನಷ್ಟು ಇಳುವರಿಯನ್ನು ಪಡೆದು ಇತರರಿಗೆ ಮಾದರಿ ರೈತರಾಗಿದ್ದಾರೆ. ಇವರ ಒಂದು ಎಕರೆ ಪ್ರದೇಶದಲ್ಲಿ ಕಾಫಿ (300 ಗಿಡಗಳು) 300–350 ಕೆ.ಜಿ. ಇಳುವರಿ ಬರುತ್ತಿದ್ದು ಸರಾಸರಿ 15,000 ರಿಂದ 18,000 ದಷ್ಟು ಲಾಭ ಗಳಿಸುತ್ತಿದ್ದಾರೆ ಮತ್ತು 50 ಕಾಳು ಮೆಣಸಿನ ಬಳ್ಳಿಗಳಿದ್ದು, ಅದರಿಂದ 80–100 ಕೆ.ಜಿ. ಯಷ್ಟು ಇಳುವರಿಯನ್ನು ಪಡೆಯುತ್ತಿದ್ದಾರೆ.

ಇವರ ಬಳಿ 7 ನಾಟಿ ಹಸುಗಳು ಹಾಗೂ 1 ಜರ್ಸಿ ಹಸುವಿದ್ದು, ಅದರಲ್ಲಿ ದೊರೆಯುವ ಗೊಬ್ಬರವನ್ನು ಕಾಂಪೋಸ್ಟ್ ಮಾಡುವುದಲ್ಲದೆ ಮನೆ ಬಳಕೆಗೆ ಗೋಬರ್‌ಗ್ಯಾಸ್ ಘಟಕವನ್ನು ನಿರ್ಮಿಸಿದ್ದಾರೆ. ಎರಡು ಎರೆಹುಳು ಘಟಕಗಳಲ್ಲಿ ಎರೆಹುಳು ಉತ್ಪಾದನೆ ಮಾಡಿ ಅದರಲ್ಲಿ ದೊರೆಯುವ ಗೊಬ್ಬರ ಹಾಗೂ ಹುಳುಗಳನ್ನು ಮಾರಾಟ ಮಾಡಿ ಪ್ರಗತಿಪರ ರೈತರು ಎನಿಸಿಕೊಂಡಿದ್ದಾರೆ. ಇವೆಲ್ಲವುಗಳ ಜೊತೆ ಅಡಿಕೆ ನರ್ಸರಿಯನ್ನು ಸಹ ಮಾಡಿಕೊಂಡು ಉತ್ತಮ ಗುಣಮಟ್ಟದ ಅಡಿಕೆ ಸಸಿಗಳನ್ನು ಬೆಳೆದು ಇತರೆ ಬೆಳೆಗಾರರಿಗೆ ಸರಬರಾಜು ಮಾಡುತ್ತಿದ್ದಾರೆ.



**ರೈತರ ಹೆಸರು: ಶ್ರೀಮತಿ ಚಂದ್ರಕಲಾ**

**ವಿಳಾಸ: ಕೋಂ ಪ್ರಕಾಶ್**
**ಕಾನುಗೋಡು, ಕುನ್ನವಳ್ಳಿ ಗ್ರಾಮ**
**ಗಂಡಘಟ್ಟ ಅಂಚೆ**
**ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 08265-251518, 8762785459**

ಶ್ರೀಮತಿ ಚಂದ್ರಕಲಾರವರು ಉತ್ತಮ ರೈತ ಮಹಿಳೆಯಾಗಿದ್ದು, ಭತ್ತ, ಮಿಶ್ರ ಬೆಳೆಯಲ್ಲಿ ಅಡಿಕೆ, ಕಾಫಿ, ಕಾಳು ಮೆಣಸು, ಏಲಕ್ಕಿ, ಲವಂಗ ಮತ್ತು ಬಾಳೆ ಬೆಳೆಯುತ್ತಿದ್ದು, ಕೈತೋಟದಲ್ಲಿ ತರಕಾರಿ ಮತ್ತು ಹೂವಿನ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದರ ಜೊತೆಗೆ ಗುಡಿಕೈಗಾರಿಕೆ, ಹೈನುಗಾರಿಕೆ, ಎರೆಹುಳು ಗೊಬ್ಬರ ತಯಾರಿಕಾ ಘಟಕ, ಗೋಬರ್ ಗ್ಯಾಸ್ ಹಾಗೂ ಬಯೋಡೈಜೆಸ್ಟರ್ ಘಟಕವನ್ನು ಹೊಂದಿದ್ದಾರೆ. ಇವರು ಒಂದೂವರೆ ಎಕರೆ ಪ್ರದೇಶದಲ್ಲಿ ಶ್ರೀ ಪದ್ಧತಿಯಲ್ಲಿ ಭತ್ತವನ್ನು (ಐ.ಇ.ಟಿ-7191) ಬೆಳೆದು ಸುಮಾರು 20-22 ಕ್ವಿಂಟಾಲ್‌ಗಳಷ್ಟು ಪ್ರತಿ ಎಕರೆಗೆ ಇಳುವರಿಯನ್ನು ಪಡೆದು ಲಾಭ ಗಳಿಸಿರುತ್ತಾರೆ. ಇವರು ಮೂರು ಎಕರೆ ಪ್ರದೇಶದಲ್ಲಿ ಅಡಿಕೆಯನ್ನು (2000 ಗಿಡಗಳು) ಬೆಳೆದಿದ್ದಾರೆ. ಇದರಿಂದ ಒಟ್ಟು 22 ಕ್ವಿಂಟಾಲ್ ಬೇಯಿಸಿದ ಅಡಿಕೆಯನ್ನು ಮಾರಾಟ (ಸುಮಾರು ರೂ. 18,000 ಪ್ರತಿ ಕ್ವಿಂಟಾಲ್‌ಗೆ) ಮಾಡುತ್ತಿದ್ದಾರೆ. ಸಾವಯವ ಕೃಷಿಯನ್ನು ಅಳವಡಿಸಿ ಇತರರಿಗೆ ಮಾದರಿಯಾಗಿದ್ದಾರೆ.

ಇವರ ಬಳಿ ಲವಂಗದ 15 ಸಸಿಗಳಿದ್ದು ಸುಮಾರು 4 ಕೆ.ಜಿ. ಇಳುವರಿ ಪಡೆಯುತ್ತಿದ್ದು, ರೂ. 500 ಪ್ರತಿ ಕೆ.ಜಿ.ಗೆ ಮಾರಾಟ ಮಾಡಿ ಲಾಭ ಗಳಿಸುತ್ತಿದ್ದಾರೆ. ಪ್ರಸ್ತುತ ಇವರು 600 ಕಾಫಿ ಗಿಡಗಳಿಂದ ಸುಮಾರು 1 ರಿಂದ 1.50 ಕ್ವಿಂಟಾಲ್ ಇಳುವರಿ ಪಡೆಯುತ್ತಿದ್ದಾರೆ. ಇವರ ಬಳಿ 800 ಕಾಳು ಮೆಣಸಿನ ಬಳ್ಳಿಗಳಿದ್ದು, 1 ಕ್ವಿಂಟಾಲ್ ಇಳುವರಿ ಪಡೆಯುತ್ತಿದ್ದಾರೆ.

ಇವರು ಗುಡಿ ಕೈಗಾರಿಕೆಯಲ್ಲಿ 60 ಕೆ.ಜಿ. ಹಲಸಿನ ಚಿಪ್ಸ್ (180/- ಪ್ರತಿ ಕೆ.ಜಿ.) ಹಾಗೂ ಹಪ್ಪಳವನ್ನು (150/- ಪ್ರತಿ 100 ಹಪ್ಪಳಕ್ಕೆ) ತಯಾರಿಸಿ (ಜೂನ್-ಆಗಸ್ಟ್ ವರೆಗೆ) ಸುಮಾರು ರೂ. 35,000/- ದಷ್ಟು ಲಾಭ ಪಡೆದಿರುತ್ತಾರೆ. ಇವರ ಕೈತೋಟದಲ್ಲಿ ಮನೆ ಬಳಕೆಗೆ ತರಕಾರಿಯನ್ನು ಬೆಳೆಯುವುದರ ಜೊತೆಗೆ ಕನಕಾಂಬರ ಹೂವಿನ ಬೆಳೆಯನ್ನು ಬೆಳೆದು ಸುಮಾರು ರೂ. 2,000 ರಿಂದ 3,000 ಪ್ರತಿ ವರ್ಷಕ್ಕೆ ಹಣ ಗಳಿಸುತ್ತಿದ್ದಾರೆ.

ಇವರ ಬಳಿ 2 ಎಮ್ಮೆ ಹಾಗೂ 1 ಹಸುವಿದ್ದು, ಪ್ರತಿದಿನ 5-10 ಲೀಟರ್ ಹಾಲನ್ನು ಮಾರಾಟ ಮಾಡುತ್ತಿದ್ದಾರೆ ಅದರಲ್ಲಿ ದೊರೆಯುವ ಗೊಬ್ಬರದಿಂದ ಮನೆಬಳಕೆಗೆ ಗೋಬರ್ ಗ್ಯಾಸ್, ಬಯೋಡೈಜೆಸ್ಟರ್ ಘಟಕವನ್ನು ಎತ್ತರ ಪ್ರದೇಶದಲ್ಲಿ ಅಳವಡಿಸಿದ್ದು. ಅದರಿಂದ ಬರುವ ತ್ಯಾಜ್ಯವನ್ನು ಗುರುತ್ವಾಕರ್ಷಣೆಯಿಂದ ನೇರವಾಗಿ ನೀರಿನ ಜೊತೆ ಮಿಶ್ರಮಾಡಿ ತೋಟ ಹಾಗೂ ಗದ್ದೆಗಳಿಗೆ ಬಳಸುತ್ತಿದ್ದಾರೆ. ಎರಡು ತೊಟ್ಟಿಯಲ್ಲಿ ಎರೆಹುಳು ಗೊಬ್ಬರವನ್ನು ತಯಾರಿಸುತ್ತಿದ್ದಾರೆ. ಅದರಿಂದ ದೊರೆಯುವ ಗೊಬ್ಬರ ಹಾಗೂ ಹುಳುಗಳನ್ನು ಮಾರಾಟ ಮಾಡಿ ಸಾವಯವ ರೈತರು ಎನಿಸಿಕೊಂಡಿದ್ದಾರೆ.

ಇವರು ಸ್ತ್ರೀ ಶಕ್ತಿ ಸಂಘದ ಸದಸ್ಯರು, ಕೃಷಿ ಮಹಿಳಾ ಸಂಘ (ರೈತ ಶಕ್ತಿ ಗುಂಪು)ದ ಅಧ್ಯಕ್ಷರಾಗಿದ್ದು, ಕೃಷಿ ಇಲಾಖೆಯ ಎಲ್ಲಾ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದು, ಇತ್ತೀಚೆಗೆ ರೇಡಿಯೋ ಮತ್ತು ದೂರದರ್ಶನ (ಚಂದನ ವಾಹಿನಿ) ದಲ್ಲಿ ಸಂದರ್ಶನ ನೀಡಿರುತ್ತಾರೆ.

**ರೈತರ ಹೆಸರು: ಶ್ರೀ ರವೀಂದ್ರ**



**ವಿಳಾಸ: ಬಿನ್ ಸುಧಾಕರ**
**ಗುಡ್ಡೆಕೊಪ್ಪ, ಸೂರ್ಯದೇವಸ್ಥಾನ ಅಂಚೆ**
**ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9480248132**

ಇತ್ತೀಚಿನ ದಿನಗಳಲ್ಲಿ ರೈತರು ಭತ್ತದಲ್ಲಿ ಲಾಭವಿಲ್ಲ ಎಂದು ಬೇರೆ ತೋಟಗಾರಿಕಾ ಬೆಳೆಗಳ ಬಗ್ಗೆ ಒಲವು ತೋರಿಸುವ ದಿನಗಳಲ್ಲಿ ಶ್ರೀ ರವೀಂದ್ರರವರು ಒಂದು ಎಕರೆ ಪ್ರದೇಶದಲ್ಲಿ ಭತ್ತವನ್ನು ಶ್ರೀ ಪದ್ಧತಿಯಲ್ಲಿ ಬೆಳೆದು ಸುತ್ತಮುತ್ತಲ ರೈತರ ಗಮನ ಸೆಳೆದಿದ್ದಾರೆ. ಇವರು ಬೆಳೆದ ಶ್ರೀ ಭತ್ತದಲ್ಲಿ ಒಂದು ಗಿಡದಲ್ಲಿ ಸುಮಾರು 40–50 ತೆಂಡೆಗಳಿದ್ದು, 4–5 ದಿನಗಳಿಗೊಮ್ಮೆ ನೀರು ಹಾಯಿಸಿ ಕೋನೊವೀಡರ್ ಸಹಾಯದಿಂದ ಕಳೆಯನ್ನು ತೆಗೆದು, 25 ಕ್ವಿಂಟಾಲ್ ಭತ್ತವನ್ನು (I.E.T. ಸಣ್ಣ) ಒಂದು ಎಕರೆಗೆ ಬೆಳೆದು ಸಂತೃಪ್ತರಾಗಿದ್ದಾರೆ. ಶ್ರೀಯುತರ ಬಳಿಯಲ್ಲಿ 620 ಅಡಿಕೆ ಮರಗಳಿದ್ದು ಸುಮಾರು 400 ಮರಗಳು ಇಳುವರಿಯನ್ನು ನೀಡುತ್ತಿದ್ದು, ಪ್ರತಿ ವರ್ಷ 8 ಕ್ವಿಂಟಾಲ್ ನಷ್ಟು ಬೇಯಿಸಿ ಒಣಗಿಸಿದ ಅಡಿಕೆ ಪಡೆಯುತ್ತಿರುತ್ತಾರೆ. ಇವರ ಜಮೀನಿನಲ್ಲಿ 400 ಕಾಫಿ ಗಿಡಗಳಿದ್ದು, ಅವು 4–5 ವರ್ಷದವುಗಳಾಗಿದ್ದು ಈಗ 350 ರಿಂದ 400 ಕೆ.ಜಿ. ಇಳುವರಿಯನ್ನು ಪಡೆಯುತ್ತಿರುತ್ತಾರೆ. ಇವರ ಜಮೀನಿನಲ್ಲಿ ಸುಮಾರು 50 ಏಲಕ್ಕಿ ಗಿಡಗಳಿದ್ದು 5–6 ಕೆ.ಜಿ. ಇಳುವರಿಯಷ್ಟು ಒಣ ಏಲಕ್ಕಿಯನ್ನು ಪಡೆಯುತ್ತಿದ್ದಾರೆ.

ಇದರ ಜೊತೆಗೆ 4 ನಾಟಿ ಹಸುಗಳಿದ್ದು, ಪ್ರತಿದಿನ 3 ಲೀಟರ್‌ನಷ್ಟು ಹಾಲು ಪಡೆಯುತ್ತಿದ್ದು, ಹಾಲನ್ನು ಮಾರಾಟ ಮಾಡಿ ಲಾಭ ಗಳಿಸುವುದರ ಜೊತೆಗೆ ಹಸುಗಳಿಂದ ದೊರೆಯುವ ಸಗಣಿ ಹಾಗೂ ಗಂಜಲದಿಂದ ಕಾಂಪೋಸ್ಟ್, ಎರೆಗೊಬ್ಬರವನ್ನು ತಯಾರಿಸಿ ತಮ್ಮ ಜಮೀನಿಗೆ ಬೇಕಾದ ಗೊಬ್ಬರವನ್ನು ತಾವೇ ತಯಾರು ಮಾಡಿಕೊಳ್ಳುತ್ತಿದ್ದಾರೆ.

**ರೈತರ ಹೆಸರು: ಶ್ರೀಮತಿ ಅನ್ನಪೂರ್ಣ**



**ವಿಳಾಸ: ಕೋಂ ರತ್ನಾಕರ**
**ಬಾಗುವಳ್ಳಿ**
**ಶಾಂತಿಗ್ರಾಮ, (ಕೊಗ್ರೆ) ಅಂಚೆ**
**ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9481025226**

ಶ್ರೀಮತಿ ಅನ್ನಪೂರ್ಣರವರು ಕಾಫಿ (ರೋಬಸ್ಟಾ), ಬಾಳೆ, ಅಡಿಕೆ ಹಾಗೂ ಭತ್ತವನ್ನು ಬೆಳೆಯುವುದರ ಜೊತೆಗೆ ಬೇಸಿಗೆಯಲ್ಲಿ ವಿವಿಧ ತರಕಾರಿಗಳಾದ ಸೌತೆಕಾಯಿ, ಅಲಸಂದೆ, ಬದನೆಕಾಯಿ, ಬಸಳೆಸೊಪ್ಪನ್ನು ಬೆಳೆದು, ತಮ್ಮ ಮನೆಬಳಕೆಗೆ ಬಳಸುವುದಲ್ಲದೆ ಸ್ಥಳೀಯ ಮಾರುಕಟ್ಟೆಗೆ ಪೂರೈಸುತ್ತಾರೆ ಹಾಗೂ ಹೈನುಗಾರಿಕೆ ಉಪ ಕಸುಬನ್ನು ಸಹ ರೂಢಿಸಿಕೊಂಡು ಸುತ್ತಮುತ್ತಲ ಮಹಿಳೆಯರಲ್ಲಿ ಪ್ರಮುಖರು ಎನಿಸಿಕೊಂಡಿದ್ದಾರೆ.

ಇವರು ಮುಕ್ಕಾಲು ಎಕರೆ ಪ್ರದೇಶದಲ್ಲಿ ಐ.ಇ.ಟಿ ಸಣ್ಣ ಭತ್ತವನ್ನು ಬೆಳೆದು ಸುಮಾರು 15 ಕ್ವಿಂಟಾಲ್ ನಷ್ಟು ಇಳುವರಿಯನ್ನು ಪಡೆಯುತ್ತಾರೆ ಅದನ್ನು ತಮ್ಮ ಮನೆ ಬಳಕೆಗೆ ಬಳಸಿ ಜೊತೆಗೆ 5 ರಿಂದ 10 ಸಾವರ ಲಾಭ ಪಡೆದಿರುತ್ತಾರೆ. ಇವರ ಬಳಿ 800 ಕಾಫಿ (ರೋಬಸ್ಟಾ) ಗಿಡಗಳಿದ್ದು, ಇದರಿಂದ 1 ಟನ್ ಇಳುವರಿಯನ್ನು ಸಹ ಪಡೆಯುತ್ತಿರುತ್ತಾರೆ. ಇವರು 1.50 ಎಕರೆ ಪ್ರದೇಶದಲ್ಲಿ ಅಡಿಕೆ ಇದ್ದು (1500 ಸಸಿಗಳು) 4–5 ಕ್ವಿಂಟಾಲ್ ಎಕರೆಗೆ ಇಳುವರಿ ಪಡೆಯುತ್ತಿದ್ದು ರೂ. 12,000 ಪ್ರತಿ ಕ್ವಿಂಟಾಲ್ ಗೆ ಮಾರಾಟ ಮಾಡುತ್ತಿದ್ದಾರೆ ಹಾಗೂ 1.50 ಎಕರೆ ಪ್ರದೇಶದಲ್ಲಿ ಬಾಳೆಯನ್ನು (ನೇಂದ್ರನ್) ಬೆಳೆಯುತ್ತಿದ್ದು ಚಿಪ್ಸ್ ತಯಾರಿಕಾ ಘಟಕಕ್ಕೆ ಮಾರಾಟ ಮಾಡಿ ಲಾಭವನ್ನು ಪಡೆದಿರುತ್ತಾರೆ. ಇವರ ಬಳಿ 1 ಸಿಂದಿ ಹಸು ಇದ್ದು, ಅದರಿಂದ ಸಗಣಿ ಗೊಬ್ಬರವನ್ನು ತಯಾರಿಸಿಕೊಳ್ಳುವುದರ ಜೊತೆಗೆ ಜೀವಾಮೃತವನ್ನು ತಯಾರಿಸಿ ತಮ್ಮ ಜಮೀನಿಗೆ ಉಪಯೋಗಿಸಿಕೊಂಡು ರಾಸಾಯನಿಕಗಳನ್ನು ಬಳಸದೆ ಸಾವಯವ ಕೃಷಿಯಲ್ಲಿಯೇ ಬೆಳೆಯನ್ನು ಬೆಳೆದು ಸಂತೃಪ್ತರಾಗಿದ್ದಾರೆ.

ಇವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ ಪ್ರಭಂದಕರಾಗಿ ಹಾಗೂ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಪ್ರಸ್ತುತ ಇವರು ರೈತ ಮಹಿಳಾ ಸಂಘದ ಸದಸ್ಯರಾಗಿದ್ದಾರೆ, ಮುಂದಿನ ದಿನಗಳಲ್ಲಿ ಜೇನು ಕೃಷಿಯ ಸಾಕಾಣಿಕೆ ಯೋಜನೆ ಬಗ್ಗೆ ಯೋಚಿಸಿದ್ದಾರೆ.



**ರೈತರ ಹೆಸರು: ಶ್ರೀ ಆದರ್ಶ್**

**ವಿಳಾಸ: ಬಿನ್ ಲೇಟ್ ಬಿಸಿಲಯ್ಯಗೌಡ**
**ನೆರಮನೆ, ಗುಬ್ಬಿಗ**
**ಸುಪ್ತ ಅಂಚೆ**
**ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9481652120**

ಶ್ರೀ ಆದರ್ಶ ರವರು ತಮ್ಮ 5.20 ಎಕರೆ ಪ್ರದೇಶದಲ್ಲಿ ಭತ್ತ, ಅಡಿಕೆ, ಕಾಫಿ, ನೇಂದ್ರ ಬಾಳೆ, ಶುಂಠಿ, ಕೆಸ, ಅರಿಶಿಣ ಬೆಳೆಗಳನ್ನು ಬೆಳೆಯುವುದರ ಜೊತೆಗೆ ಮಾದರಿ ಕೈತೋಟವನ್ನು ಸಹ ಮಾಡಿಕೊಂಡು ಅದರಿಂದ ದೊರೆಯುವ ತರಕಾರಿಗಳಿಂದ ತಮ್ಮ ಮನೆಯ ಬಳಕೆಗೂ ಉಪಯೋಗಿಸಿಕೊಂಡು, ಬೇರೆಯವರಿಗೂ ಮಾರಾಟ ಮಾಡಿ, ಕಡಿಮೆ ಪ್ರದೇಶದಲ್ಲಿ ಅನೇಕ ಬೆಳೆಗಳನ್ನು ಬೆಳೆದು ಲಾಭ ಪಡೆಯಬಹುದು ಎನ್ನುವುದನ್ನು ಸುತ್ತಮುತ್ತಲ ರೈತರಿಗೆ ತಿಳಿಸಿಕೊಟ್ಟು ಅತೀ ಕಿರಿಯ ರೈತ ಎನಿಸಿಕೊಂಡಿರುತ್ತಾರೆ. ಇವರು ಎರಡು ಎಕರೆ ಪ್ರದೇಶದಲ್ಲಿ ಐ.ಇ.ಟಿ. ಸಣ್ಣ ಭತ್ತವನ್ನು ಸಾವಯವ ಮತ್ತು ರಾಸಾಯನಿಕ ಗೊಬ್ಬರ ಬಳಕೆಯಿಂದ ಬೆಳೆದು, ಪ್ರತಿ ಎಕರೆಗೆ 20–22 ಕ್ವಿಂಟಾಲ್ ಭತ್ತವನ್ನು ಬೆಳೆದು ಸುಮಾರು ರೂ. 25,000 ದಷ್ಟು ಲಾಭ ಗಳಿಸಿರುತ್ತಾರೆ.

ಇವರ ಜಮೀನಿನಲ್ಲಿ ಸುಮಾರು 330 ಅಡಿಕೆ ಸಸಿಗಳು ಮತ್ತು 200 ಕಾಫಿ ಗಿಡಗಳನ್ನು ಬೆಳೆದಿರುತ್ತಾರೆ. ಸುಮಾರು 200 ನೇಂದ್ರನ್ ಬಾಳೆಯನ್ನು ಬೆಳೆದು ಪ್ರತಿ ಗೊನೆಯು 15–18 ಕೆ.ಜಿ. ತೂಕದಷ್ಟಿದ್ದು ಸುಮಾರು 20,000 ರಿಂದ 25,000 ಲಾಭ ಗಳಿಸಿರುತ್ತಾರೆ. ಹಾಗೆಯೇ, ಸುಮಾರು ಒಂದು ಎಕರೆ ಪ್ರದೇಶದಲ್ಲಿ ಶುಂಠಿಯನ್ನು ಬೆಳೆದು ರೂ. 60000 ದಷ್ಟು ಲಾಭ ಪಡೆದಿರುತ್ತಾರೆ. ಇತ್ತೀಚೆಗೆ ಕೆಸ ಎಂಬ ಎಲೆಯ ರೂಪದ ತರಕಾರಿಯನ್ನು ಆರು ಗುಂಟೆ ಪ್ರದೇಶದಲ್ಲಿ ಬೆಳೆದು ರೂ. 5,000–6,000 ದಷ್ಟು ಲಾಭ ಪಡೆದಿರುತ್ತಾರೆ. ಹಾಗೆಯೇ ಆರು ಗುಂಟೆ ಪ್ರದೇಶದಲ್ಲಿ ಅರಿಶಿಣವನ್ನು ಬೆಳೆದು ರೂ. 18,000 ದಷ್ಟು ಲಾಭ ಗಳಿಸಿರುತ್ತಾರೆ.

ಇವೆಲ್ಲವುಗಳ ಜೊತೆಗೆ ಮನೆಯ ಮುಂದೆ ಖಾಲಿ ಇರುವ ಜಾಗದಲ್ಲಿ ಮೆಣಸಿನಕಾಯಿ ಹಾಗೂ ಟೊಮ್ಯಾಟೊವನ್ನು ಬೆಳೆಯುತ್ತಿರುತ್ತಾರೆ. ಇವರ ಮನೆಯಲ್ಲಿ ಆರು ಹಸುಗಳಿದ್ದು, ಅದರಲ್ಲಿ ಒಂದು ಹೆಚ್.ಎಫ್. ಹಸು ಹಾಲು ನೀಡುತ್ತಿರುತ್ತದೆ. ಇದರಿಂದ ದೊರೆಯುವ ಸಗಣಿಯಿಂದ ಜೀವಾಮೃತವನ್ನು ತಯಾರಿಸುತ್ತಿದ್ದು ಹಾಗೂ ಗೋಬರ್ ಗ್ಯಾಸ್ ಅನ್ನು ಸಹ ಅಳವಡಿಸಿಕೊಂಡಿರುತ್ತಾರೆ. ಹಸುಗಳ ಹುಲ್ಲಿಗೆ ಅಲ್ಲಿಯೇ ದೊರೆಯುವ ಸಾಮಾನ್ಯ ಹುಲ್ಲಿನ ತಳಿಯನ್ನು ಬೆಳೆಯುತ್ತಿರುತ್ತಾರೆ. ಇತ್ತೀಚೆಗೆ 100 ಗುಲಾಬಿ ಗಿಡಗಳನ್ನು ಸಹ ನಾಟಿ ಮಾಡಿರುತ್ತಾರೆ.

ಇವರ ಜಮೀನಿನಲ್ಲಿ ಒಂದು ಕೃಷಿ ಹೊಂಡವಿದ್ದು, ಅದರಲ್ಲಿ ಶೇಖರಣೆಯಾಗುವ ನೀರನ್ನು ಅಡಿಕೆ, ಬಾಳೆ, ಶುಂಠಿ ಹಾಗೂ ಇತರ ಬೆಳೆಗಳಿಗೆ ಬಳಸುತ್ತಿದ್ದಾರೆ.



**ರೈತರ ಹೆಸರು: ಶ್ರೀಮತಿ ಮಲ್ಲಿಕಾ**

**ವಿಳಾಸ: ಕೋಂ ಕೃಷ್ಣಮೂರ್ತಿ**
**ಕೆರೆಮನೆ, ಕಾನೂರು ಅಂಚೆ**
**ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9483814896**

ಶ್ರೀಮತಿ ಮಲ್ಲಿಕಾರವರು ತಮ್ಮ ಬಳಿ ಇರುವ 4.50 ಎಕರೆ ಪ್ರದೇಶದಲ್ಲಿ ಕಾಫಿ, ಅಡಿಕೆ, ಸುವರ್ಣಗೆಡ್ಡೆ, ರಬ್ಬರ್, ಕಾಳುಮೆಣಸು, ಬಾಳೆ, ಶುಂಠಿ, ಅರಿಶಿನ, ಕುಂಬಳಕಾಯಿ ಮತ್ತು ಇದರ ಜೊತೆಗೆ ಹೈನುಗಾರಿಕೆಯನ್ನು ಮಾಡಿಕೊಂಡಿರುತ್ತಾರೆ.

ಇವರ ಜಮೀನಿನಲ್ಲಿ, ಒಂದು ಎಕರೆ ಪ್ರದೇಶದಲ್ಲಿ ಭತ್ತ (ಐ.ಇ.ಟಿ. ಸಣ್ಣ) ವನ್ನು ಬೆಳೆಯುತ್ತಿದ್ದಾರೆ, ಮೂರು ವರ್ಷದ ಸುಮಾರು 1400 ಅಡಿಕೆ ಸಸಿಗಳಿದ್ದು, ಸದರಿ ವರ್ಷದಲ್ಲಿ ಹಿಂಗಾರು ಬರುವ ಸಾಧ್ಯತೆಗಳಿದ್ದು ಒಳ್ಳೆಯ ಇಳುವರಿಯ ಅಪೇಕ್ಷೆಯಲ್ಲಿರುತ್ತಾರೆ. ಅಂತೆಯೇ ಸುಮಾರು 1000 ರೋಬಸ್ಟಾ ಕಾಫಿ ಗಿಡಗಳಿದ್ದು, ಕಳೆದ ವರ್ಷದಿಂದ ಇಳುವರಿ ಬರುತ್ತಿದ್ದು ಸುಮಾರು 20,000 ರೂ. ಲಾಭ ಗಳಿಸಿರುತ್ತಾರೆ. ಪ್ರಸ್ತುತ ಮೂರು ವರ್ಷದ 300 ರಬ್ಬರ್ ಗಿಡಗಳ ಮಧ್ಯೆ 30 ಕ್ವಿಂಟಾಲ್ ಸುವರ್ಣ ಗೆಡ್ಡೆಯನ್ನು ನಾಟಿ ಮಾಡಿ ಅದರಿಂದ 60–65 ಕ್ವಿಂಟಾಲ್ ಇಳುವರಿಯನ್ನು ಪಡೆದಿರುತ್ತಾರೆ. ಇವರ ಜಮೀನಿನಲ್ಲಿ ಮೂರು ವರ್ಷದ 200 ಕಾಳುಮೆಣಸು, 100 ಜೀರಿಗೆ ಮೆಣಸಿನ ಗಿಡಗಳಿದ್ದು ಪ್ರತಿ ಕೆ.ಜಿ.ಗೆ 400 ಅಂತೆ ಮಾರುತ್ತಿದ್ದಾರೆ ಮತ್ತು 400 ಪುಟ್ಟಬಾಳೆ ಮತ್ತು ನಂಜನಗೂಡು ರಸಬಾಳೆ ಗಿಡಗಳಿದ್ದು, ತಿಂಗಳಿಗೆ 3,000–4,000 ಹಣ ಗಳಿಸುತ್ತಿರುತ್ತಾರೆ. ಹಾಗೆಯೇ ಶುಂಠಿಯನ್ನು ಸಹ ಬೆಳೆದು ರೂ. 50,000 ಹಣ ಗಳಿಸಿರುತ್ತಾರೆ. ಇವೆಲ್ಲವುಗಳ ಜೊತೆಗೆ ಮನೆಯ ಬಳಕೆಗೆ ಅರಿಶಿಣವನ್ನು ಸಹ ಬೆಳೆಯುತ್ತಿರುತ್ತಾರೆ. ತಮ್ಮ ಮನೆಯ ಮುಂದಿನ ಕೈತೋಟದಲ್ಲಿ ಕುಂಬಳಕಾಯಿ, ಹಾಗಲಕಾಯಿ, ಟೊಮ್ಯಾಟೊ ಬೆಳೆಯನ್ನು ಬೆಳೆದು ಮಾದರಿ ರೈತರಾಗಿರುತ್ತಾರೆ. ಹಾಗೆಯೇ ಸುಮಾರು ಒಂದು ಎಕರೆ ಪ್ರದೇಶದಲ್ಲಿ ತಮ್ಮ ಮನೆ ಬಳಕೆಗೆ ಭತ್ತವನ್ನು ಸಹ ಬೆಳೆಯುತ್ತಿರುತ್ತಾರೆ. ಇವರ ಮನೆಯಲ್ಲಿ ನಾಲ್ಕು ಹಸುಗಳಿದ್ದು ಅದರಿಂದ ದೊರೆಯುವ ಸಗಣಿಯನ್ನು ಸಾವಯವ ಕೃಷಿಗೆ ಉಪಯೋಗಿಸುತ್ತಿದ್ದಾರೆ. ಹಸುಗಳಿಗೆ ಬೇಕಾದ ಹುಲ್ಲಿಗೆ ತಮ್ಮ ಮನೆಯ ಮುಂದೆಯೆ ಸಿ.ಓ–3 ಹುಲ್ಲನ್ನು ಬೆಳೆಸಿ ಪಶು ಆಹಾರದ ಜೊತೆಗೆ ಅಝೋಲ್ಲಾವನ್ನು ಸಹ ನೀಡಿ ಹಾಲಿನಲ್ಲಿಯೂ ಸಹ ಅಧಿಕ ಇಳುವರಿನ್ನು ಪಡೆಯುತ್ತಿರುತ್ತಾರೆ.

ಇವೆಲ್ಲವುಗಳ ಜೊತೆಗೆ ಮನೆಯಲ್ಲಿಯೆ ಹೊಲಿಗೆ (ಟೈಲರ್) ಹಾಗೂ ಚಿಲ್ಲರೆ ಅಂಗಡಿಯನ್ನು ನಡೆಸುತ್ತಿದ್ದು, ಇದರಿಂದ ಪ್ರತಿ ತಿಂಗಳಿಗೆ ಮನೆ ಖರ್ಚನ್ನು ನಿಭಾಯಿಸುವಷ್ಟು (1500–2000) ಲಾಭ ಪಡೆಯುತ್ತಿದ್ದಾರೆ.

ಇವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘದಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ಸದಸ್ಯರಾಗಿದ್ದಾರೆ. ಕಳೆದೆರಡು ವರ್ಷಗಳಿಂದ ಜೀವ ವಿಮಾ ಯೋಜನೆಯಲ್ಲಿ ಏಜೆಂಟರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಶ್ರೀ ಜಿ. ಎಂ. ಲೋಹಿತ್**

**ವಿಳಾಸ: ಬಿನ್ ಜಿ.ಎಂ. ಮೂರ್ತಿ,**
**ಗಾಣದಾಳು ಗ್ರಾಮ ಲಕ್ಯಾ ಅಂಚೆ,**
**ಲಕ್ಯಾ ಹೋಬಳಿ,**
**ಚಿಕ್ಕಮಗಳೂರು ತಾಲ್ಲೂಕು,**
**ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9901048481**

ಯುವಕರಾದ ಶ್ರೀ ಎಂ. ಲೋಹಿತ್‌ರವರು ದುಡಿಮೆಯಲ್ಲಿ ಒಂದು ಪಟ್ಟು ಕೈ ಹೆಚ್ಚೇ ಅನ್ನಬಹುದು. ಇವರು ತಮಗೆ ಇರುವ 6 ಎಕರೆ ಜಮೀನಿನಲ್ಲಿ ಹತ್ತಿ, ಮೆಣಸಿನಕಾಯಿ, ತಿಂಗಳ ಹುರುಳಿ, ತೆಂಗು, ಅಡಿಕೆ, ಎಲೆಕೋಸು, ಬದನೆ ಹಾಗು ಅಲಸಂದೆಯನ್ನು ಬೆಳೆದಿರುತ್ತಾರೆ. ಇವರು ರಾಗಿ, ಜೋಳ ಹಾಗೂ ತಿಂಗಳ ಹುರುಳಿ ಬೆಳೆಗಳನ್ನು ತೆಂಗಿನಲ್ಲಿ ಮಿಶ್ರ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಕೃಷಿ ಹಾಗೂ ತೋಟಾಗಾರಿಕೆ ಬೆಳೆಗಳನ್ನು ಬೆಳೆಯುವುದಲ್ಲದೇ, ಪಶುಸಂಗೋಪನೆಯನ್ನು ಸಹ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ ಇವರು ಕಡಿಮೆ ಅವಧಿಯಲ್ಲಿ ಬೆಳೆಗಳನ್ನು ಬೆಳೆದು ಹೆಚ್ಚು ಲಾಭವನ್ನು ಗಳಿಸುತ್ತಿದ್ದಾರೆ. ಇವರು ತಮ್ಮ ಮನೆಯಲ್ಲಿ ಸಾಕುವ ಹಸುಗಳ ಸಗಣಿ, ಮರಗಳಿಂದ ಉದುರುವ ಎಲೆ, ಮನೆಯಲ್ಲಿನ ತರಕಾರಿಗಳ ತ್ಯಾಜ್ಯ ವಸ್ತುಗಳನ್ನು ಉಪಯೋಗಿಸಿಕೊಂಡು ಎರೆಹುಳು ಗೊಬ್ಬರವನ್ನು ತಯಾರಿಸಿ ತಮ್ಮ ಹೊಲದಲ್ಲಿ ಬೆಳೆಯುವ ಬೆಳೆಗಳಿಗೆ ಉಪಯೋಗಿಸಿ ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ. ಇವರು ಸ್ವತಃ ಹಾಲು ಸಂಗ್ರಹಣ ಕೇಂದ್ರವನ್ನು ಹೊಂದಿದ್ದು ಸುತ್ತಮತ್ತಲಿನ ಗ್ರಾಮಗಳಿಂದ ಹಾಲನ್ನು ಸಂಗ್ರಹಿಸಿ ಮಾರಕಟ್ಟೆಗೆ ಕಳುಹಿಸುತ್ತಾರೆ. ಬೀಜೋಪಚಾರ, ಲಘು ಪೋಷಕಾಂಶಗಳ ಬಳಕೆ ಹಾಗು ಎರೆಹುಳು ಗೊಬ್ಬರ ತಯಾರಿಕೆ ಬಗ್ಗೆ ತರಬೇತಿಯನ್ನು ಹೊಂದಿದ್ದು ಇತರೆ ರೈತ ಬಾಂಧವರಿಗೆ ಮಾಹಿತಿ ನೀಡುತ್ತಿದ್ದಾರೆ. ಇದಲ್ಲದೇ ಇವರು ಕೃಷಿ ಇಲಾಖೆಯ ಭೂಚೇತನ ಕಾರ್ಯಕ್ರಮದಲ್ಲಿ ಅನುವುಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಶ್ರೀಮತಿ ಪುಷ್ಪ**



**ವಿಳಾಸ: ಕೋಂ ನಂಜುಡಪ್ಪ**
**ಲಕ್ಯಾ ಗ್ರಾಮ ಮತ್ತು ಅಂಚೆ**
**ಲಕ್ಯಾ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು**
**ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9902211691**

ಮೂಲತಃ ಕೃಷಿ ಕುಟುಂಬದಿಂದ ಬಂದಿದ್ದು ತಮ್ಮನ್ನು ಮೊದಲಿನಿಂದಲೂ ಬೇಸಾಯ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಎರಡು ಎಕರೆ ಜಮೀನು ಇರುವ ಇವರು ಸಣ್ಣ ರೈತರಾಗಿದ್ದು ತಮ್ಮ ಜಮೀನಿನಲ್ಲಿ ಹತ್ತಿ, ಧನಿಯ, ಮೆಣಸಿನ ಕಾಯಿ, ಜೋಳ ಹಾಗೂ ತೋಟಗಾರಿಕೆ ಬೆಳೆಗಳಾದ ಸಪೋಟ, ಸೀಬೆಹಣ್ಣು, ದಾಳಿಂಬೆ ಹಾಗೂ ಪಪ್ಪಾಯವನ್ನು ಬೆಳೆದಿರುತ್ತಾರೆ. ಇವರು ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಲ್ಲಿ ಪುಷ್ಪ ಕೃಷಿಯ ಬಗ್ಗೆ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಅಲ್ಲಿ ಪಡೆದ ಮಾಹಿತಿಯನ್ನು ತಮ್ಮ ಜಮೀನಿನಲ್ಲಿ ಅಳವಡಿಸಿದ್ದಾರೆ.

ಪುಷ್ಪ ಕೃಷಿಯಲ್ಲಿ ಇವರು ಕನಕಾಂಬರ, ಕಾಕಡ, ಗುಲಾಬಿ, ಚೆಂಡುಹೂವು ಮುಂತಾದ ಪುಷ್ಪ ಕೃಷಿಯನ್ನು ಮಾಡುತ್ತಿದ್ದು ಸುತ್ತಮುತ್ತಲಿನ ರೈತ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಸಮಗ್ರ ಹಿಡುವಳಿ ಪದ್ಧತಿಯಲ್ಲಿ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳನ್ನು ಹೊರತುಪಡಿಸಿ ಹೈನುಗಾರಿಕೆ ಹಾಗೂ ಎರೆಹುಳು ಸಾಕಾಣಿಕೆ ಮಾಡುತ್ತಿದ್ದಾರೆ. ಇವರು ಸ್ವತಃ ಜೀವಾಮೃತವನ್ನು ತಯಾರಿಸಿ ಪುಷ್ಪ ಕೃಷಿಗೆ ಸಿಂಪಡಿಸುತ್ತ ಬಂದಿದ್ದಾರೆ. ತಮ್ಮ ಸ್ವಸಹಾಯ ಸಂಘ, ದೃಶ್ಯ ಮಾಧ್ಯಮ ಹಾಗೂ ಪತ್ರಿಕೆಗಳ ಮೂಲಕ ತಮ್ಮ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುತಿದ್ದಾರೆ. ತಾಲ್ಲೂಕಿನ ಇತರೆ ರೈತ ಮಹಿಳೆಯರಿಗೆ ಕೃಷಿಯ ಮಾಹಿತಿಯನ್ನು ಪ್ರಸರಿಸುವ ಸಾಲಿನಲ್ಲಿ ಮುಂಚೂಣಿಯಲ್ಲಿದ್ದಾರೆ.

**ಶ್ರೀಮತಿ ಜಿ.ಕೆ. ಭಾರತಿ,**

**ವಿಳಾಸ: ಕೋಂ ಮೂರ್ತಪ್ಪ ಆರ್.**
**ಗೌಡನಕಟ್ಟೆ ಹಳ್ಳಿ,**
**ಬಾಸೂರು ಅಂಚೆ, ಹಿರೇನಲ್ಲೂರು,**
**ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.**
**ದೂರವಾಣಿ: 8762023150**



ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಹಿರೇನಲ್ಲೂರು ಹೋಬಳಿ ಗೌಡನಕಟ್ಟೆ ಗ್ರಾಮದಲ್ಲಿ ವಾಸವಾಗಿರುವ ರೈತ ಮಹಿಳೆಯಾದ ಶ್ರೀಮತಿ ಜಿ.ಕೆ. ಭಾರತಿಯವರು ಹುಟ್ಟು ವ್ಯವಸಾಯಗಾರರು. ನಾಲ್ಕು ಎಕರೆ, ಇಪತ್ತೆರಡು ಗುಂಟೆಯಲ್ಲಿ ಸೂರ್ಯಕಾಂತಿ, ರಾಗಿ, ಕಲ್ಲಂಗಡಿ ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಾರೆ. ರಾಗಿಯ ಜೊತೆ ಮಿಶ್ರ ಬೆಳೆಯಾಗಿ ದ್ವಿದಳ ಧಾನ್ಯಗಳಾದ ತೊಗರಿ, ಅವರೆ, ಹುರುಳಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಇವರು ಹಿಂದಿನ ವರ್ಷದಲ್ಲಿ 13 ಟನ್ ಕಲ್ಲಂಗಡಿ ಬೆಳೆಯನ್ನು ಬೆಳೆದು ಹೆಚ್ಚು ಆದಾಯ ಪಡೆದಿರುತ್ತಾರೆ.

ಕೃಷಿ ಬೆಳೆ ಮತ್ತು ತೋಟಗಾರಿಕೆ ಬೆಳೆಗಳ ಜೊತೆಗೆ ಹೈನುಗಾರಿಕೆ ಮತ್ತು ಕುರಿ ಸಾಗಾಣಿಕೆಯನ್ನು ಇವರು ಸಮಗ್ರ ಹಿಡುವಳಿ ಪದ್ಧತಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಇವರು ನೀರಿನ ಸಂರಕ್ಷಣೆಗಾಗಿ ಕೃಷಿಹೊಂಡ ಹಾಗೂ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಅಭಿವೃದ್ಧಿ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳ ವಿಸ್ತರಣಾ ಸಂಪರ್ಕ ಹೊಂದಿದ್ದು ತಮ್ಮ ಜಮೀನಿಗೆ ಬೇಕಾದ ಮಾಹಿತಿಯನ್ನು ನಿಯಮಿತವಾಗಿ ಪಡೆದುಕೊಳ್ಳುತ್ತಾರೆ. ಇವರು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಹಾಲು ಉತ್ಪಾದಕರ ಸಹಕಾರಿ ಸಂಘ ಹಾಗೂ ಸ್ವಸಹಾಯ ಸಂಘಗಳಲ್ಲಿ ಸದಸ್ಯ ಹಾಗೂ ಪದಾಧಿಕಾರಿಗಳಾಗಿದ್ದು, ಸಮಾಜ ಸೇವೆ ಹಾಗೂ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು ಸುತ್ತಮುತ್ತಲಿನ ಮಹಿಳೆಯರಿಗೆ ಮಾದರಿಯಾಗಿದ್ದಾರೆ.

**ಶ್ರೀ ಶಶಿಧರ್**



**ವಿಳಾಸ: ಬಿನ್. ಹಾಲಪ್ಪ,**
**ಅರೇಹಳ್ಳಿ ಗ್ರಾಮ, ಬಿಸಲೆರೆ ಅಂಚೆ,**
**ಹೀರೇನಲ್ಲೂರು ಹೋಬಳಿ,**
**ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9483389275**

ರಾಗಿ, ಜೋಳ, ಸೂರ್ಯಕಾಂತಿ ಮತ್ತು ಮುಸುಕಿನ ಜೋಳವನ್ನು ಬೆಳೆಯುತ್ತಿರುವ ಶ್ರೀ ಶಶಿಧರ್‌ರವರು ಅಂತರ ಬೆಳೆಯಾಗಿ ಅವರೆ, ತೊಗರಿ ಅಲಸಂದೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಜೊತೆಗೆ ತೋಟಗಾರಿಕೆ ಬೆಳೆಗಳಾದ ತೆಂಗು ಮತ್ತು ಟೊಮ್ಯಾಟೋ ಬೆಳೆಗಳನ್ನು ಬೆಳೆದಿರುತ್ತಾರೆ. ಇವರು ಹೈನುಗಾರಿಕೆಯನ್ನು ಕೈಗೊಂಡಿದ್ದು, ಸುಧಾರಿತ ಹೆಚ್.ಎಫ್. ತಳಿಯ ಹಸುಗಳ ಜೊತೆಗೆ ಕುರಿ ಹಾಗು ಕೋಳಿಗಳನ್ನು ಸಾಕಣೆ ಮಾಡಿರುತ್ತಾರೆ. ಇವರು ಜೋಳ, ಸೂರ್ಯಕಾಂತಿ, ರಾಗಿ, ಶೇಂಗಾ ಹೀಗೆ ಮುಂತಾದ ಬೆಳೆಗಳ ಕಟಾವಿಗೆ ಕಟಾವು ಯಂತ್ರೋಪಕರಣಗಳನ್ನು ಬಳಸುತ್ತಿದ್ದಾರೆ. ರೋಗ ಹಾಗು ಕೀಟ ಸಂರಕ್ಷಣೆಗೆ ಜೈವಿಕ ಪದ್ಧತಿಯನ್ನು ಬಳಸುವುದಲ್ಲದೇ ಆಕರ್ಷಕ ಬೆಳೆ ಮತ್ತು ಬಲೆಗಳನ್ನು ಬಳಸುತ್ತಿದ್ದಾರೆ. ಇವರು ಎರೆಹುಳು ಗೊಬ್ಬರ ತಯಾರಿಸುತ್ತಿದ್ದು ಹೆಚ್ಚಾಗಿ ಎರೆಹುಳುವಿನ ಗೊಬ್ಬರವನ್ನೇ ತಮ್ಮ ತೋಟಕ್ಕೆ ಬಳಸುತ್ತಾರೆ, ಜೊತೆಗೆ ಸೂಕ್ಷ್ಮ ಪೋಷಕಾಂಶಗಳನ್ನು ಸಹ ಬೆಳೆಗಳಿಗೆ ಬಳಕೆ ಮಾಡುತ್ತಾರೆ. ಇದರ ಪರಿಣಾಮವಾಗಿ ಅವರು ತಮ್ಮ ಬೆಳೆಗಳಿಂದ ಅತ್ಯುತ್ತಮ ಫಸಲು ಪಡೆದು ಹೆಚ್ಚು ಲಾಭಗಳಿಸುತ್ತಿದ್ದಾರೆ. ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರಕ್ಕೆ ಮಾಹಿತಿ ಮತ್ತು ಸಲಹೆಗಾಗಿ ಭೇಟಿ ನೀಡುತ್ತಿರುತ್ತಾರೆ. ಕೃಷಿಯಿಂದ ಲಾಭವಾಗುತ್ತಿದೆ ಎನ್ನುವುದು ಇವರ ಅಭಿಪ್ರಾಯ.

**ಶ್ರೀ ಹೆಚ್.ಎಸ್. ರಮೇಶ್**



**ವಿಳಾಸ: ಈಚಲಗುಡ್ಡೆ ಗ್ರಾಮ, ಅದಳಗಂಡಿ ಅಂಚೆ,**
**ಮೇಗುಂದ ಹೋಬಳಿ,**
**ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.**
**ದೂರವಾಣಿ: 948153439**

ಮೂಲತಃ ಕೃಷಿಕರಾದ ಶ್ರೀಯುತ ಹೆಚ್.ಎಸ್.ರಮೇಶ್‌ರವರು ತಮ್ಮ ಕುಟುಂಬಕ್ಕೆ ಸೇರಿದ 1.26 ಎಕರೆ ಜಮೀನಿನಲ್ಲಿ ಆಧುನಿಕ ಬೇಸಾಯ, ಮಿಶ್ರ ಮತ್ತು ವಿವಿಧ ಬೆಳೆ ಪದ್ಧತಿಗಳನ್ನು ಅಳವಡಿಸಿಕೊಂಡು ಏಲಕ್ಕಿ, ಕಾಳುಮೆಣಸು, ಬಾಳೆ ಮುಂತಾದ ಬೆಳೆಗಳನ್ನು ಬೆಳೆದಿರುತ್ತಾರೆ. ಶ್ರೀಯುತರು ಅತ್ಯುತ್ತಮ ಗುಣಮಟ್ಟವುಳ್ಳ ನರ್ಸರಿಯನ್ನು ತಮ್ಮ ಜಮೀನಿನಲ್ಲಿ ನಡೆಸುತ್ತಿದ್ದು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಉತ್ತಮ ಗುಣಮಟ್ಟದ ಸಸಿಗಳನ್ನು ನೀಡುತ್ತಿದ್ದಾರೆ. ಬೆಳೆಯುವ ಬೆಳೆಗಳಿಗೆ ತುಂತುರು ನೀರಾವರಿ ಪದ್ಧತಿಯನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿದ್ದಾರೆ. ಸಮಗ್ರ ಪೋಷಕಾಂಶಗಳ ನಿರ್ವಹಣೆಯಲ್ಲಿ ಸದರಿ ರೈತರು ರಾಸಾಯನಿಕ ಗೊಬ್ಬರಗಳ ಜೊತೆಗೆ ಸಗಣಿ ಗೊಬ್ಬರ, ಹಸಿರೆಲೆ ಗೊಬ್ಬರಗಳನ್ನು ಉಪಯೋಗಿಸುತ್ತಿದ್ದಾರೆ. ಶ್ರೀ ರಮೇಶ್‌ರವರು ಸಾಂಬಾರು ಮಂಡಳಿಯಲ್ಲಿ ಏಲಕ್ಕಿ ನರ್ಸರಿಯ ನಿರ್ವಹಣೆ ಬಗ್ಗೆ ತರಬೇತಿಯನ್ನು ಪಡೆದಿದ್ದು ಏಲಕ್ಕಿ ನರ್ಸರಿ ಮಾಡುವುದರಲ್ಲಿ ನೈಪುಣ್ಯತೆಯನ್ನು ಪಡೆದಿದ್ದಾರೆ. ಶ್ರೀಯತರು ಕೃಷಿ ಸಂಬಂಧಿತ ಪತ್ರಿಕೆಗಳಾದ ಸ್ಪೈಸ್ ಇಂಡಿಯಾ ಹಾಗೂ ಕೃಷಿಕ ಪತ್ರಿಕೆಗೆ ಸದಸ್ಯರಾಗಿದ್ದು ಅದರಲ್ಲಿ ಬರುವ ಲೇಖನಗಳನ್ನು ಓದಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ. ಇವರು ಕೃಷಿ ಹೊಂಡವನ್ನು ನಿರ್ಮಿಸಿಕೊಂಡಿದ್ದು, ಅದರ ಮೂಲಕ ಹಣ್ಣಿನ ಗಿಡಗಳಿಗೆ ನೀರನ್ನು ಪೂರೈಸುತ್ತಿದ್ದಾರೆ. ನೈಸರ್ಗಿಕ ಸಂಪನ್ಮೂಲಗಳನ್ನು ಹಾಳು ಮಾಡದೆ, ತರಗೆಲೆ ಹಾಗು ಕಳೆಗಳನ್ನು ಬಳಸಿ ಗೊಬ್ಬರವನ್ನು ತಯಾರಿಸುತ್ತಾರೆ. ಇವರ ನರ್ಸರಿಯಲ್ಲಿ ಬೆಳೆದ ಗಿಡಗಳನ್ನು ಸ್ಥಳೀಯವಾಗಿಯೇ ಅಂದರೆ, ನರ್ಸರಿ ಇರುವ ಜಾಗದಲ್ಲೇ ಮಾರಾಟ ಮಾಡುತ್ತಾ ಬಂದಿದ್ದು ಸುತ್ತಮುತ್ತಲಿನ ಗ್ರಾಮದವರಿಗೆ ಚಿರಪರಿಚಿತರಾಗಿದ್ದಾರೆ.

**ಶ್ರೀಮತಿ ಸುಧಾ, ಟಿ.ಆರ್.**



**ವಿಳಾಸ: ಕೋಂ. ಕೆ.ಎಲ್. ಹರೀಶ್**
**ಫಲ್ಗುಣಿ ಗ್ರಾಮ ಮತ್ತು ಅಂಚೆ,**
**ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು**
**ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9449552346**

ಶ್ರೀಮತಿ ಸುಧಾರವರು ಕಾಫಿ (ರೋಬಸ್ಟಾ), ಕಾಳು ಮೆಣಸು, ಏಲಕ್ಕಿ ಹಾಗೂ ಭತ್ತವನ್ನು ಬೆಳೆಯುವುದರ ಜೊತೆಗೆ ತಮ್ಮ ತೋಟದಲ್ಲಿ ಮನೆಗೆ ಬೇಕಾಗುವ ವಿವಿಧ ತರಕಾರಿಗಳಾದ ಸೌತೆಕಾಯಿ, ಅಲಸಂದೆ, ಬಸಳೆಸೊಪ್ಪು, ಬದನೆ, ಮೆಣಸಿನ ಕಾಯಿ ಹಾಗೂ ಇತರ ಸೊಪ್ಪುಗಳನ್ನು ಬೆಳೆಯುತ್ತಿದ್ದಾರೆ. ಹಾಗೂ ತಮ್ಮ ಮನೆಯ ಅವಶ್ಯಕತೆಗೆ ಬೇಕಾಗುವಷ್ಟು ಬಾಳೆಹಣ್ಣು, ಕಿತ್ತಳೆ ಹಾಗು ಸಪೋಟವನ್ನು ತಮ್ಮ ತೋಟದಲ್ಲಿ ಬೆಳೆದಿದ್ದಾರೆ. ಇವರು ಹೈನುಗಾರಿಕೆಯನ್ನು ಉಪಕಸುಬನ್ನಾಗಿ ಕೈಗೊಂಡಿದ್ದು ತಮ್ಮ ಮನೆ ಬಳಕೆಗೆ ಬಳಸುವುದಲ್ಲದೆ, ಸ್ಥಳೀಯ ಮಾರುಕಟ್ಟೆಗೆ ಪೂರೈಸುತ್ತಾರೆ. ಎರಡು ಎಕರೆ ಪ್ರದೇಶದಲ್ಲಿ ಭತ್ತವನ್ನು ಬೆಳೆದು ಸುಮಾರು ಎಕರೆಗೆ 25 ಕ್ವಿಂಟಾಲ್‌ನಷ್ಟು ಇಳುವರಿಯನ್ನು ಪಡೆದಿರುತ್ತಾರೆ. ಅದನ್ನು ತಮ್ಮ ಮನೆಗೆ ಬಳಸಿ ಉಳಿದದ್ದನ್ನು ಮಾರಾಟ ಮಾಡಿ 20 ರಿಂದ 25 ಸಾವಿರ ಲಾಭ ಗಳಿಸಿರುತ್ತಾರೆ. ಭತ್ತದ ಗದ್ದೆಗೆ ಅಜೋಲ್ಲ ಅಲ್ಲದೇ, ಸಾವಯವ ಗೊಬ್ಬರಗಳಾದ ಎರೆಹುಳು ಗೊಬ್ಬರ, ಹಸಿರೆಲೆ ಗೊಬ್ಬರ ಬಳಸುತ್ತಾರೆ. ಇವರು ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆಗೆ ಹತ್ತಿರವಿದ್ದು ಕೇಂದ್ರದೊಂದಿಗೆ ಉತ್ತಮ ವಿಸ್ತರಣ ಸಂಪರ್ಕ ಹೊಂದಿದ್ದಾರೆ ಇದಲ್ಲದೆ ಕೃಷಿ ಹಾಗು ತೋಟಗಾರಿಕೆ ಇಲಾಖೆಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುತ್ತಾರೆ. ಸ್ಥಳೀಯ ಸ್ವಸಹಾಯ ಸಂಘದಲ್ಲಿ ಇವರು ಸದಸ್ಯರಾಗಿದ್ದು ನಿಯಮಿತವಾಗಿ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾ ಈ ಮೂಲಕ ಕೃಷಿ ಮಾಹಿತಿಯನ್ನು ಪಡೆದುಕೊಳ್ಳುವ್ಯದಲ್ಲದೇ, ಅಲ್ಲದೆ ಇತರರೊಂದಿಗೆ ಹಂಚಿಕೊಳ್ಳುತ್ತಾ ಬಂದಿದ್ದಾರೆ. ತಾವು ಬೆಳೆದ ಬೆಳೆಯನ್ನು ಸ್ಥಳೀಯ ಹಾಗು ಮೂಡಿಗೆರೆ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಬೆಲೆಯಲ್ಲಿ ಮಾರಾಟ ಮಾಡಿ ಅಧಿಕ ಲಾಭ ಪಡೆದಿರುತ್ತಾರೆ.

**ಶ್ರೀ ದಿವಾಕರ, ಕೆ.ವಿ.**



**ವಿಳಾಸ: ಬಿನ್. ಕೆ.ಎಸ್. ವೆಂಕಟಪ್ಪ ಗೌಡ**
**ಕಿಬ್ಬಿ, ಕೊಳಲೆ ಗ್ರಾಮ,**
**ಮೇಗರಮಕ್ಕಿ, ಬಾಳೆಹೊನ್ನೂರು,**
**ಎನ್.ಆರ್. ಪುರ ತಾಲ್ಲೂಕು,**
**ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 08266–242203,**
**ಮೊ.ಸಂ: 9480959318**

ಶ್ರೀಯುತ ದಿವಾಕರ್‌ರವರು ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸದ ನಂತರ ಕೆಲಸಕ್ಕೆ ಕಾಯದೆ ತಮ್ಮನ್ನು ತಾವು ಪೂರ್ಣ ಪ್ರಮಾಣದ ಕೃಷಿಯಲ್ಲಿ ತೊಡಗಿಸಿಕೊಂಡು ತಮ್ಮ ಜಮೀನಿನಲ್ಲಿ ಭತ್ತ, ಕಾಫಿ, ಅಡಿಕೆ, ಕಾಳು ಮೆಣಸು, ಶುಂಠಿ, ಸುವರ್ಣಗೆಡ್ಡೆ ಮತ್ತು ಗೆಣಸು ಬೆಳೆಗಳನ್ನು ಬೆಳೆದು ಸುತ್ತಮುತ್ತಲಿನ ಗ್ರಾಮದ ನಿರುದ್ಯೋಗಿ ಯುವಕರಿಗೆ ಮಾದರಿಯಾಗಿದ್ದಾರೆ.

ಶ್ರೀಯುತರು ಎರಡು ಎಕರೆ ಪ್ರದೇಶದಲ್ಲಿ ಸಾವಯವ ಭತ್ತವನ್ನು ಬೆಳಯುತ್ತಿದ್ದು ವರ್ಷಕ್ಕೆ 28 ಕ್ವಿಂಟಾಲ್ ಇಳುವರಿಯನ್ನು ಪಡೆದಿದ್ದು, ಸುತ್ತಮುತ್ತಲ ರೈತರ ಗಮನ ಸೆಳೆದಿದ್ದಾರೆ. ಇವರು ಕಾಫಿ, ಅಡಿಕೆ, ಕಾಳು ಮೆಣಸು, ಸುವರ್ಣಗೆಡ್ಡೆ, ಗೆಣಸು, ಬಾಳೆ ಬೆಳೆಗಳನ್ನು ಮಿಶ್ರ ಬೆಳೆಗಳಾಗಿ ಬೆಳೆದು ಅಧಿಕ ಇಳುವರಿ ಹಾಗೂ ಆದಾಯವನ್ನು ಪಡೆದಿರುತ್ತಾರೆ. ಇವಲ್ಲದೆ, 10 ಗುಂಟೆ ಜಮೀನಿನಲ್ಲಿ ಸಾವಯವ ಶುಂಠಿಯನ್ನು ಬೆಳೆದು 40 ಕ್ವಿಂಟಾಲ್ ಇಳುವರಿಯನ್ನು ಪಡೆದಿರುತ್ತಾರೆ. ಸುಧಾರಿತ ಬೇಸಾಯ ಪದ್ಧತಿಗಳಾದ ಜೈವಿಕ ಗೊಬ್ಬರಗಳ ಬಳಕೆ, ಲಘು ಪೋಷಕಾಂಶಗಳ ಬಳಕೆ, ಬೀಜೋಪಚಾರ ಹಾಗೂ ಮಾಗಿ ಉಳುಮೆಗಳನ್ನು ಅಳವಡಿಸಿಕೊಂಡಿರುವುದಲ್ಲದೆ ಸಮಗ್ರ ನೀರು, ಪೋಷಕಾಂಶಗಳ ಹಾಗೂ ಕೀಟರೋಗಗಳ ನಿರ್ವಹಣೆಗಳನ್ನೂ ಮಾಡುತ್ತಿರುತ್ತಾರೆ. ಸಮಗ್ರ ಕೃಷಿ ಪದ್ಧತಿಯಲ್ಲಿ ಇವರು ಹಂದಿ ಸಾಕಣೆ, ಕೋಳಿ ಸಾಕಣೆ, ಹೈನುಗಾರಿಕೆ ಹಾಗೂ ಎರೆಹುಳು ಸಾಕಾಣಿಕೆ ಮಾಡಿ ಅಧಿಕ ಆದಾಯವನ್ನು ಪಡೆದಿರುತ್ತಾರೆ. ಕೃಷಿ ಮತ್ತು ಪಶುಸಂಗೋಪನೆಗಳಿಂದ ದೊರೆಯುವ ತ್ಯಾಜ್ಯವಸ್ತುವನ್ನು ಬಳಸಿ ಸುಧಾರಿತ ಕಾಂಪೋಸ್ಟ್ ಉತ್ಪಾದಿಸಿ ಬೆಳೆಯುವ ಎಲ್ಲಾ ಬೆಳೆಗಳ ಸಾವಯವ ಗೊಬ್ಬರದ ಅವಶ್ಯಕತೆಯನ್ನು ಪೂರೈಸಿಕೊಳ್ಳುತ್ತಿದ್ದಾರೆ. ಅಲ್ಲದೆ, ತಮ್ಮ ದಿನನಿತ್ಯದ ಅವಶ್ಯಕತೆಗಳಿಗೂ ಸಹ ಇವರು ಪರಾವಲಂಬಿಗಳಾಗದಂತೆ ಮೆಣಸಿನ ಕಾಯಿ, ಹಾಗಲಕಾಯಿ, ಪಡುವಲಕಾಯಿ, ಕುಂಬಳಕಾಯಿ, ಕಿತ್ತಳೆ, ಮೊಸಂಬಿ ಇವೇ ಮುಂತಾದ ಹಣ್ಣು ಹಾಗೂ ತರಕಾರಿಗಳನ್ನು ಇವರ ತೋಟದಲ್ಲಿ ಬೆಳೆಯುತ್ತಿದ್ದಾರೆ.

**ಶ್ರೀಮತಿ ಹೆಚ್. ಎಸ್. ಪವಿತ್ರ,**

**ವಿಳಾಸ: ಕೋಂ. ಮಂಜುನಾಥ, ಎ.ಎಸ್.,**
**ಬೈರಾಪುರ ಗ್ರಾಮ,**
**ಅಂಬಳೆ ಬೈಲು ಅಂಚೆ, ಕಸಬಾ ಹೋಬಳಿ**
**ಎನ್.ಆರ್.ಪುರ ತಾಲ್ಲೂಕು,**
**ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 9482762001, 9663184613**



ಶ್ರೀಮತಿ ಪವಿತ್ರಾರವರು ಹತ್ತನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದು, ಇವರು ಒಟ್ಟು 10 ಎಕರೆ ಕೃಷಿ ಭೂಮಿ ಹೊಂದಿದ್ದು ತಾವೇ ಸ್ವತಃ ಬೇಸಾಯ ಮಾಡಿಕೊಂಡು ಬಂದಿದ್ದಾರೆ. ಹಾಗೂ ಕೃಷಿಯು ಕೌಟುಂಬಿಕ ವೃತ್ತಿ ಎಂಬುದನ್ನು ಮನದಟ್ಟು ಮಾಡಿಕೊಂಡು ಕೃಷಿಯಲ್ಲಿಯೇ ಮುಂದಿವರಿಯಬೇಕೆಂಬ ಹಂಬಲದಿಂದ ತಮ್ಮ 10 ಎಕರೆ ಜಮೀನಿನಲ್ಲಿ ಭತ್ತ, ಶುಂಠಿ, ಅಡಿಕೆ, ಸುವರ್ಣಗೆಡ್ಡೆ, ಮುಸುಕಿನ ಜೋಳ, ಗೇರು, ತೆಂಗು ಹಾಗೂ ಅಂಟುವಾಳ ಬೆಳೆಯುತ್ತಿದ್ದಾರೆ. ಇವರು ಒಂದು ಎಕರೆಗೆ 20 ಕ್ವಿಂಟಾಲ್ ಭತ್ತದ (ಉಮಾಜ್ಯೋತಿ) ಫಸಲನ್ನು ಪಡೆದಿದ್ದಾರೆ, ಹಾಗೂ ಅಡಿಕೆ ತೋಟವನ್ನು ಸಾವಯವ ಪದ್ಧತಿಯಲ್ಲಿ ಬೆಳೆಯಲಾಗುತ್ತಿದ್ದು ಜೀವಾಮೃತವನ್ನು ತಯಾರಿಸಿ ತಮ್ಮ ಬೆಳೆಗಳಿಗೆ ಬಳಸುತ್ತಿದ್ದಾರೆ. ಇವರು ಮಿಶ್ರ ಬೆಳೆಯಾಗಿ ಶುಂಠಿ, ಸುವರ್ಣಗೆಡ್ಡೆ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದು, ಪ್ರತಿ ಎಕರೆಗೆ 3 ಕ್ವಿಂಟಾಲ್ ಅಡಿಕೆ ಇಳುವರಿಯನ್ನು ಪಡೆಯುತ್ತಿದ್ದಾರೆ. ತಮ್ಮ ಜಮೀನಿನ ಸುತ್ತಲೂ ಸಾಗುವಾನಿ, ಸಿಲ್ವರ್, ಹಲಸು ಮರಗಳನ್ನು ನೆಟ್ಟು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮಾಡುತ್ತಿದ್ದಾರೆ. ತೋಟಗಾರಿಕೆ ಬೆಳೆಗಳಿಗೆ ಬಸಿಗಾಲುವೆ ಮತ್ತು ಇಂಗು ಗುಂಡಿಗಳನ್ನು ನಿರ್ಮಾಣ ಮಾಡಿರುತ್ತಾರೆ.

ಇವರು ಸ್ವಸಹಾಯ ಸಂಘದಲ್ಲಿ ಸದಸ್ಯರಾಗಿದ್ದು ಹಾಗು ಸಾವಯವ ಕೃಷಿ ಅಭಿವೃದ್ಧಿ ಸಮಿತಿಯಲ್ಲಿ ಸದಸ್ಯರಾಗಿದ್ದು ನಿಯಮಿತವಾಗಿ ಸಂಘದ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಭಾಗವಹಿಸುತ್ತಿದ್ದಾರೆ. ತಮ್ಮ ತೋಟದಲ್ಲಿ ಬಸಿಗಾಲುವೆ ಹಾಗು ಇಂಗು ಗುಂಡಿಗಳನ್ನು ನಿರ್ಮಿಸಿಕೊಂಡಿದ್ದು ನೀರಿನ ಸಂರಕ್ಷಣೆ ಹಾಗೂ ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಗೆ ಹಾಗು ನಿರ್ವಹಣೆಗೆ ಜಮೀನಿನ ಸುತ್ತ ಸಾಗುವಾನಿ, ಸಿಲ್ವರ್ ಮತ್ತು ಹಲಸು ಮರಗಳನ್ನು ನೆಟ್ಟಿದ್ದಾರೆ. ಅಡಿಕೆ ಪತ್ರಿಕೆ, ಸುಜಾತ ಪತ್ರಿಕೆ, ಸಾವಯವ ಕೃಷಿ ಪತ್ರಿಕೆಗಳಿಗೆ ಸದಸ್ಯರಾಗಿದ್ದು ಅದರಲ್ಲಿ ಪ್ರಕಟವಾಗುವ ಮಾಹಿತಿಯನ್ನು ಓದಿ ತಿಳಿಯುತ್ತಾರೆ. ಇವರು ಸಾವಯವ ಕೃಷಿ ಅಭಿವೃದ್ಧಿ ಸಮಿತಿ ಹಾಗು ಕೃಷಿ ಇಲಾಖೆಯ ವತಿಯಿಂದ ನಡೆಸುವ ತರಬೇತಿಗಳಲ್ಲಿ ಭಾಗವಹಿಸಿ ಮಾಹಿತಿಯನ್ನು ಪಡೆದಿರುತ್ತಾರೆ. ಇವರು ಶಿವಮೊಗ್ಗ, ಭದ್ರಾವತಿ, ಎನ್.ಆರ್.ಪುರ ಮುಂತಾದ ಕಡೆಗಳಲ್ಲಿ ತಾವು ಬೆಳೆದ ಫಸಲುಗಳನ್ನು ಮಾರಾಟ ಮಾಡುತ್ತಾ ಬಂದಿರುತ್ತಾರೆ.


**ಶ್ರೀಮತಿ ಜಯಂತಿ**

**ವಿಳಾಸ: ಕೋಂ ಎಂ. ಆರ್. ನಾಗರಾಜ್,**
**ಮಲ್ನಾಡ್ ಗ್ರಾಮ, ನೆಮ್ಮಾರು ಅಂಚೆ,**
**ಕಿಗ್ಗಾ ಹೋಬಳಿ, ಶೃಂಗೇರಿ ತಾಲ್ಲೂಕು,**
**ಚಿಕ್ಕಮಗಳೂರು ಜಿಲ್ಲೆ.**
**ದೂರವಾಣಿ: 9483605274, 9480313074**



ಬಿ.ಎ. ಪದವೀಧರೆಯಾಗಿರುವ ಶ್ರೀಮತಿ ಜಯಂತಿಯವರು ವಿದ್ಯಾಭ್ಯಾಸದ ನಂತರ ಸರ್ಕಾರಿ ಉದ್ಯೋಗವನ್ನರಸದೆ ಕೃಷಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಇತರೆ ಅಭಿವೃದ್ಧಿ ಇಲಾಖೆಗಳೊಂದಿಗೆ ಉತ್ತಮ ವಿಸ್ತರಣಾ ಸಂಪರ್ಕ ಹೊಂದಿದ್ದು ಅಧಿಕಾರಿಗಳಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸುವುದಲ್ಲದೇ, ಸಂಗ್ರಹಿಸಿದ ಮಾಹಿತಿಯನ್ನು ತಾಂತ್ರಿಕವಾಗಿ ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿದ್ದು ಉತ್ತಮ ರೈತ ಮಹಿಳೆಯಾಗಿ ಹೊರಹೊಮ್ಮಿ ಇತರೆ ರೈತ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಯಾಂತ್ರೀಕರಣವನ್ನು ತಮ್ಮ ಜಮೀನಿನಲ್ಲಿ ಉತ್ತಮವಾಗಿ ಅಳವಡಿಸಿಕೊಂಡು ಹೆಚ್ಚುತ್ತಿರುವ ಕೆಲಸಗಾರರ ಸಮಸ್ಯೆಗೆ ಉತ್ತರವನ್ನು ಕಂಡುಹಿಡಿದುಕೊಂಡಿರುತ್ತಾರೆ. ಅಡಿಕೆ ಕಟಾವು ಯಂತ್ರ, ಕಾಳು ಮೆಣಸು ವಿಂಗಡಿಸುವ ಯಂತ್ರ, ಕಳೆ ತೆಗೆಯುವ ಯಂತ್ರ ಹೀಗೆ ಮುಂತಾದ ಯಂತ್ರಗಳನ್ನು ಉಪಯೋಗಿಸಿ ಕಡಿಮೆ ಕಾಲಾವಧಿಯಲ್ಲಿ ಹೆಚ್ಚು ಕೆಲಸ ಮಾಡುವುದಲ್ಲದೇ ಅತಿ ಹೆಚ್ಚು ಇಳುವರಿಯನ್ನು ಪಡೆದಿರುತ್ತಾರೆ. ತಮ್ಮ ಗದ್ದೆಯಲ್ಲಿ ನಾಟಿ ಮಾಡುವ ಮುನ್ನ, ಬದುಗಳ ಗಿಡಗಳು ಮತ್ತು ಮರದ ಎಲೆಗಳನ್ನು ತಮ್ಮ ಗದ್ದೆಯಲ್ಲಿ ಹಸಿರೆಲೆ ಗೊಬ್ಬರವಾಗಿ ಉಪಯೋಗಿಸುತ್ತಾರೆ. ಹಾಗೆಯೇ ಬೇವಿನ ಕಷಾಯವನ್ನು ಸಿದ್ದ ಪಡಿಸಿಕೊಂಡು ಸಮಗ್ರ ಕೀಟ ಹಾಗು ರೋಗ ನಿರ್ವಹಣೆ ಮಾಡುತ್ತಿದ್ದಾರೆ. ಪ್ರತಿ ದಿನ 15 ಲೀಟರ್ ಹಾಲನ್ನು 4 ಹಸು ಮತ್ತು 3 ಎಮ್ಮೆಗಳಿಂದ ಪಡೆಯುತ್ತಿದ್ದು ಸ್ಥಳೀಯವಾಗಿ ಮಾರಾಟ ಮಾಡಿ ಆದಾಯವನ್ನು ಗಳಿಸುವುದರ ಜೊತೆಗೆ ಸಮಗ್ರ ಹಿಡುವಳಿ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಕೃಷಿಗೆ ಸಂಬಂಧಿಸಿದ ಪತ್ರಿಕೆಗಳಿಗೆ ಸದಸ್ಯರಾಗಿರುವ ಇವರು ಪತ್ರಿಕೆಗಳಲ್ಲಿ ಬರುವ ಮಾಹಿತಿಯನ್ನು ಓದಿ ತಿಳಿಯುವುದರ ಜೊತೆಗೆ ಆ ಮಾಹಿತಿಯನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿದ್ದಾರೆ. ಇದಲ್ಲದೇ ತಮ್ಮ ಪತಿಯವರಿಗೆ ಆಧಾರವಾಗಿ ಕಾಫಿ, ಮೆಣಸು ಹಾಗೂ ಅಡಿಕೆ ತೋಟದ ನಿರ್ವಹಣೆಯಲ್ಲಿ ಕೈ ಜೋಡಿಸಿ ನಿರಂತರ ಆದಾಯಗಳಿಸಲು ಸಹಕಾರಿಯಾಗಿರುತ್ತಾರೆ.

**ಶ್ರೀ ಟಿ.ಜಿ. ನಾಗಾನಂದ**



**ವಿಳಾಸ:ಬಿನ್ ತಲಗಾರು ಗೋಪಾಲ ಮೂರ್ತಿ,**
**ಹರೂರು ಗ್ರಾಮ, ನೆಮ್ಮಾರು ಅಂಚೆ,**
**ಕಿಗ್ಗಾ ಹೋಬಳಿ, ಶೃಂಗೇರಿ ತಾಲ್ಲೂಕು,**
**ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 08265 280134,**
**ಮೊ.ಸಂ. 9483227226**

ಕೃಷಿ ಇಲಾಖೆಯ ಕಾರ್ಯಕ್ರಮಗಳಲ್ಲಿ ಮುಖ್ಯ ಕಾರ್ಯಕ್ರಮವಾದ ಭೂಚೇತನ ಕಾರ್ಯಕ್ರಮದ ಅನುವುಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಟಿ.ಜಿ.ನಾಗಾನಂದರವರು ಕೃಷಿಯಲ್ಲಿ ಅಪಾರವಾದ ಆಸಕ್ತಿಯುಳ್ಳವರು. ಇರುವ ನಾಲ್ಕು ಎಕರೆ ಜಮೀನಿನಲ್ಲಿ ಸಮಗ್ರವಾಗಿ ಬೆಳೆಗಳನ್ನು ಬೆಳೆದು ಲಾಭದಾಯಕವಾಗಿ ಕೃಷಿಯನ್ನು ಮುನ್ನಡೆಸುತ್ತಿದ್ದಾರೆ. ಕಳೆದ ಬಾರಿ ಇವರು ಕಾಫಿಯಲ್ಲಿ ರೂ.75,000, ಬಾಳೆಯಲ್ಲಿ ರೂ.85,000 ಹಾಗೂ ಕಾಳುಮೆಣಸಿನಲ್ಲಿ ರೂ.1,60,000 ಆದಾಯವನ್ನು ಪಡೆದಿರುತ್ತಾರೆ ಹಾಗೂ ಒಂದು ಹೆಕ್ಟೇರ್‌ನಲ್ಲಿ ಒಂದು ಕ್ವಿಂಟಾಲ್ ಏಲಕ್ಕಿ, 10 ಕ್ವಿಂಟಾಲ್ ಅಡಿಕೆ, 25 ಕ್ವಿಂಟಾಲ್ ಭತ್ತ ಮತ್ತು 1/2 ಕ್ವಿಂಟಾಲ್ ವೆನಿಲ್ಲಾ ಇಳುವರಿಯನ್ನು ಪಡೆದಿರುತ್ತಾರೆ. ಅಡಿಕೆ ಇವರ ಮುಖ್ಯ ಬೆಳೆಯಾಗಿದ್ದು ಏಲಕ್ಕಿ, ಕಾಳುಮೆಣಸು, ವೆನಿಲ್ಲಾವನ್ನು ಮಿಶ್ರ ಬೆಳೆಯಾಗಿ ಬೆಳೆದಿದ್ದಾರೆ. ಇದರ ಜೊತೆಯಲ್ಲಿ ಶ್ರೀಯುತರು ನಾಲ್ಕು ನಾಟಿ ಹಸುಗಳನ್ನು ಕಟ್ಟಿದ್ದು ಪ್ರತಿ ದಿನಕ್ಕೆ 10 ಲೀಟರ್ ಹಾಲನ್ನು ಮಾರಾಟ ಮಾಡಿ ಇದರಿಂದ ಕೂಡ ಲಾಭಗಳಿಸುತ್ತಿದ್ದಾರೆ. ಕೃಷಿ ಇಲಾಖೆಯ ಅನುವುಗಾರರಾದ ಇವರು ಕೃಷಿ ಇಲಾಖೆ ಮತ್ತು ವಿವಿಧ ಸ್ಥಳೀಯ ಸಂಘ ಸಂಸ್ಥೆಗಳೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದು ಕೃಷಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯುವುದರ ಜೊತೆಗೆ ತಮ್ಮ ಸುತ್ತಮುತ್ತಲಿನ ರೈತರೊಂದಿಗೆ ಮಾಹಿತಿ ವಿನಿಮಯವನ್ನು ಮಾಡುತ್ತಾ ಬಂದಿರುತ್ತಾರೆ. ಅಲ್ಲದೆ ಕೃಷಿ ಇಲಾಖೆ ವತಿಯಿಂದ ಏರ್ಪಡಿಸುವ ರೈತ ಕ್ಷೇತ್ರಪಾಠಶಾಲೆಗಳಲ್ಲಿ ಹಾಗೂ ಅಧ್ಯಯನ ಪ್ರವಾಸಗಳಲ್ಲಿ ಭಾಗಿಯಾಗಿ ಉತ್ತಮ ಮಾಹಿತಿಯನ್ನು ಪಡೆಯುವುದರ ಜೊತೆಗೆ ಅವುಗಳನ್ನು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಂಡು ಈ ಮೂಲಕ ಪ್ರಗತಿಶೀಲ ರೈತರಾಗಿದ್ದು ಸುತ್ತಮುತ್ತಲ ಯುವ ರೈತರನ್ನು ಕೃಷಿಯ ಕಡೆಗೆ ಪ್ರೇರೇಪಿಸುತ್ತಾ ಆದರ್ಶರಾಗಿದ್ದಾರೆ. ಇವರು ಮಾರುಕಟ್ಟೆ ಮಾಹಿತಿಯನ್ನು ಸಕಾಲದಲ್ಲಿ ಪಡೆಯುವುದರಿಂದ ಇವರು ಬೆಳೆದ ಬೆಳೆಗಳನ್ನು ಶಿವಮೊಗ್ಗ ಹಾಗೂ ಮಂಗಳೂರು ಎ.ಪಿ.ಎಂ.ಸಿ. ಮಾರುಕಟ್ಟೆ ಹಾಗೂ ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿ ಅಧಿಕ ಲಾಭವನ್ನು ಗಳಿಸುತ್ತಾ ಬಂದಿದ್ದಾರೆ.

**ಶ್ರೀ ಬಸವರಾಜು, ಆರ್.**

**ವಿಳಾಸ: ಬಿನ್ ರಾಮಪ್ಪ**
**ಬೆಲೇನಹಳ್ಳಿ ಗ್ರಾಮ ಮತ್ತು ಅಂಚೆ,**
**ತರೀಕೆರೆ ಹೋಬಳಿ, ತರೀಕೆರೆ ತಾಲ್ಲೂಕು**
**ಚಿಕ್ಕಮಗಳೂರು ಜಿಲ್ಲೆ.**
**ದೂರವಾಣಿ: 08261259128,**
**ಮೊ.ಸಂ: 9482493052**



ರೈತರು ಭತ್ತದಲ್ಲಿ ಲಾಭವಿಲ್ಲ ಎಂದು ತೋಟಗಾರಿಕಾ ಬೆಳೆಗಳ ಬಗ್ಗೆ ಒಲವು ತೋರುವ ಇತ್ತೀಚಿನ ದಿನಗಳಲ್ಲಿ ಶ್ರೀ ಆರ್. ಬಸವರಾಜುರವರು ಒಂದು ಎಕರೆ ಪ್ರದೇಶದಲ್ಲಿ ಭತ್ತವನ್ನು ಶ್ರೀ ಪದ್ಧತಿಯಲ್ಲಿ ಬೆಳೆದು ಸುತ್ತಮುತ್ತಲಿನ ರೈತರ ಗಮನ ಸೆಳೆದಿದ್ದಾರೆ. ಇವರು ಬೆಳೆದ ಶ್ರೀ ಪದ್ಧತಿಯಲ್ಲಿ ಒಂದು ಎಕರೆಗೆ 25 ಕ್ವಿಂಟಾಲ್ ಭತ್ತದ ಫಸಲನ್ನು ಪಡೆದಿದ್ದಾರೆ. ಶ್ರೀಯುತರು ಭತ್ತವನ್ನಲ್ಲದೆ, ರಾಗಿ, ಅಡಿಕೆ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಎರಡು ನಾಟಿ ಹಸು, ಎರಡು ಹೆಚ್.ಎಫ್., ಒಂದು ಸಿಂಧಿ ಹಸು ಹಾಗೂ ನಾಲ್ಕು ಎಮ್ಮೆಗಳನ್ನು ಹೊಂದಿರುವ ಬಸವರಾಜುರವರು ದಿನಕ್ಕೆ 25 ಲೀಟರ್ ಹಾಲನ್ನು ಸ್ಥಳೀಯವಾಗಿ ಮಾರಾಟ ಮಾಡುತ್ತಿದ್ದಾರೆ. ರಾಸುಗಳ ಸಾಕಾಣಿಕೆಗಾಗಿ ಸಿ.ಓ.–1 ಹಾಗೂ ನೇಪಿಯರ್ ಹುಲ್ಲನ್ನು ಜಮೀನಿನಲ್ಲಿ ಬೆಳೆದಿದ್ದು ಅಜೊಲ್ಲಾ ತೊಟ್ಟಿಯಿದ್ದು, ಬೆಳೆದ ಅಜೊಲ್ಲಾವನ್ನು ದನಗಳಿಗೆ ನೀಡಿ ಹೆಚ್ಚಿನ ಹಾಲು ಉತ್ಪಾದನೆಯ ಕಡೆಗೆ ಗಮನ ಹರಿಸಿದ್ದಾರೆ. ಆಧುನಿಕ ಬೇಸಾಯ ಪದ್ಧತಿಗಳ ಅಳವಡಿಕೆಯಲ್ಲಿ ಇವರು ಮುಂಚೂಣಿಯಲ್ಲಿದ್ದು ಹೊಸ ತಳಿಗಳ ಅಳವಡಿಕೆ ಹಾಗೂ ಸಮಗ್ರ ನೀರು ನಿರ್ವಹಣೆ ಹಾಗೂ ಪೋಷಕಾಂಶಗಳ ನಿರ್ವಹಣೆಯನ್ನು ಮಾಡುತ್ತಿದ್ದಾರೆ.



ಮಣ್ಣಿನ ಸಂರಕ್ಷಣೆ ಹಾಗೂ ಫಲವತ್ತತೆಗಾಗಿ ಬದುಗಳ ಸಾಲಿನಲ್ಲಿ ಹಸಿರೆಲೆ ಗೊಬ್ಬರ ಗಿಡಗಳನ್ನು ಬೆಳೆದಿದ್ದು ಅದನ್ನು ಎರೆಹುಳು ಗೊಬ್ಬರಗಳಿಗೆ ಹಾಗೂ ಜಮೀನಿನಲ್ಲಿ ಗೊಬ್ಬರವಾಗಿ ಬಳಸುತ್ತಿದ್ದಾರೆ. ಶ್ರೀಯುತರು ಉತ್ತಮ ವಿಸ್ತರಣಾ ಸಂಪರ್ಕವನ್ನು ಹೊಂದಿದ್ದು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಕೃಷಿ ವಿಶ್ವವಿದ್ಯಾನಿಲಯದ ಜೊತೆ ನಿಯಮಿತವಾಗಿ ಮಾಹಿತಿಯನ್ನು ಪಡೆಯುತ್ತಿರುತ್ತಾರೆ. ಸದರಿ ರೈತರು ಕೆರೆ ಬಳಕೆದಾರರ ಸಂಘದಲ್ಲಿ ಸದಸ್ಯರಾಗಿದ್ದು ನಿಯಮಿತವಾಗಿ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಇವರು ಕೃಷಿ ಇಲಾಖೆ ತರೀಕೆರೆಯಲ್ಲಿ ನಡೆಸಿದ ಸಾವಯವ ಕೃಷಿಯ ಬಗ್ಗೆ ತರಬೇತಿಯನ್ನು ಹೊಂದಿರುವುದಲ್ಲದೆ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಜಾನುವಾರುಗಳ ಸಾಕಾಣಿಕೆ, ಎರೆಹುಳುಗಳ ಸಾಕಾಣಿಕೆಯ ಬಗ್ಗೆ ತರಬೇತಿಯನ್ನು ಹೊಂದಿದ್ದು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿದ್ದಾರೆ.

**ಶ್ರೀಮತಿ ಕಾಂತಮ್ಮ ಎಂ. ಸಿ.**

**ವಿಳಾಸ:ಕೋಂ ಸುರೇಶ್,**
**ಕಲ್ಲಶೆಟ್ಟಿಹಳ್ಳಿ ಗ್ರಾಮ, ಸಂಕ್ಯ ಅಂಚೆ,**
**ಅಜ್ಜಂಪುರ ಹೋಬಳಿ,**
**ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.**
**ದೂರವಾಣಿ: 7760280693**



ಶ್ರೀಮತಿ ಸುರೇಶ್‌ರವರ ಧರ್ಮಪತ್ನಿಯಾದ ಕಾಂತಮ್ಮನವರು ತರೀಕೆರೆ ತಾಲ್ಲೂಕು, ಕಲ್ಲಶೆಟ್ಟಿಹಳ್ಳಿ ಗ್ರಾಮದಲ್ಲಿ ತಮ್ಮ 7 ಎಕರೆ ಕೃಷಿ ಜಮೀನಿನಲ್ಲಿ ಯಾವುದೇ ಜಾಗವನ್ನು ಪಾಳು ಬಿಡದೆ ಉತ್ತಮ ಬೆಳೆ ಯೋಜನೆ ಅನುಸರಿಸಿ ಕೃಷಿ ಕೈಗೊಂಡಿದ್ದಾರೆ. ರಾಗಿ, ಭತ್ತ, ಮೆಣಸಿನ ಕಾಯಿ, ಅವರೆ, ಜೋಳ, ಕಡಲೆ, ಅಡಿಕೆ, ತೆಂಗು ಹೀಗೆ ಮುಂತಾದ ಕೃಷಿ ಹಾಗು ತೋಟಗರಿಕೆ ಬೆಳೆಗಳನ್ನು ಬೆಳೆದಿರುತ್ತಾರೆ. ಇವರು ಸಮಗ್ರ ಕೃಷಿ ಪದ್ಧತಿಯಲ್ಲಿ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ಜೊತೆಗೆ 4 ಹಸು, 4 ಎಮ್ಮೆ, 2 ಎತ್ತು, ಎರೆಹುಳು ಸಾಕಾಣಿಕೆ, ಕೃಷಿ ಅರಣ್ಯ ಹಾಗೂ ಹಸಿರಲೆ ಗೊಬ್ಬರಕ್ಕೆ ಬೇಕಾದ ಗೊಬ್ಬರ ಗಿಡಗಳನ್ನು ಬೆಳೆದಿರುತ್ತಾರೆ. ಆಧುನಿಕ ಬೇಸಾಯ ಅಳವಡಿಕೆಯಲ್ಲಿ ಸದರಿ ರೈತರು ರಾಗಿಯ ಹೊಸ ತಳಿಗಳಾದ ಜಿ. ಪಿ. ಯು.–28, ಪಿ.ಆರ್.–202, ಹಾಗೂ ಭತ್ತದಲ್ಲಿ ಐ.ಆರ್.–64, ಜೋಳದಲ್ಲಿ ಎಂ–35, ಕಡಲೆಯಲ್ಲಿ ಜೆ.ಜಿ.–11 ಗಳನ್ನು ಬೆಳೆದು, ಅಧಿಕ ಇಳುವರಿಯನ್ನು ಹಾಗೂ ಆದಾಯವನ್ನು ಪಡೆದಿರುತ್ತಾರೆ. ಅಲ್ಲದೇ ಮಿಶ್ರ ಬೆಳೆ ಪದ್ಧತಿಯನ್ನು ಅಡಿಕೆ ಹಾಗೂ ತೆಂಗಿನ ತೋಟಗಳಲ್ಲಿ ಅನುಸರಿಸುತ್ತಿದ್ದಾರೆ. ಮಿಶ್ರ ಬೆಳೆಗಳಾಗಿ ಅವರೆ, ತೆಂಗು, ಜೋಳ ಮತ್ತು ಕಡಲೆಯನ್ನು ಬೆಳೆಯುತ್ತಿದ್ದಾರೆ. ಸಮಗ್ರ ನೀರು ನಿರ್ವಹಣೆಯಲ್ಲಿ ಕಾಂತಮ್ಮನವರು ಇಳಿಜಾರಿಗೆ ಅಡ್ಡವಾಗಿ ಬದುಗಳನ್ನು ನಿರ್ಮಾಣ ಮಾಡಿದ್ದಾರೆ ಹಾಗೂ ತಮ್ಮ ಜಮೀನಿನಲ್ಲಿ ಕೃಷಿ ಹೊಂಡವನ್ನು ನಿರ್ಮಿಸಿಕೊಂಡಿದ್ದು ಹೊಂಡದಲ್ಲಿ ಶೇಖರಿಸಲಾದ ನೀರನ್ನು ಇವರು ಬೆಳೆಯುವ ಬೆಳೆಗೆ ಉಪಯೋಗಿಸಿಕೊಂಡು ಹೆಚ್ಚು ಇಳುವರಿಯನ್ನು ಪಡೆಯುತ್ತಿದ್ದಾರೆ. ಜಿಪ್ಸಂ, ಬೋರಾನ್, ಜಿಂಕ್ ಹೀಗೆ ಮುಂತಾದ ಲಘು ಪೋಷಕಾಂಶಗಳನ್ನು ಮುಖ್ಯ ಪೋಷಕಾಂಶಗಳ ಜೊತೆಗೆ ಜಮೀನಿನಲ್ಲಿ ಬಳಸುತ್ತಿದ್ದು ಯಾವುದೇ ರೀತಿಯ ಪೋಷಕಾಂಶಗಳ ಕೊರತೆ ಇಲ್ಲದಂತೆ ನೋಡಿಕೊಳ್ಳುತ್ತಿದ್ದಾರೆ. ಕೀಟ ಹಾಗು ರೋಗ ನಿರ್ವಹಣೆಗೆ ಸ್ವತಃ ತಯಾರಿಸುವ ಬೇವಿನ ಕಷಾಯವನ್ನು ಉಪಯೋಗಿಸುತ್ತಿದ್ದಾರೆ. ಇವರು ಎಲ್ಲಾ ಅಭಿವೃದ್ಧಿ ಇಲಾಖೆಗಳ ಜೊತೆಗೆ ಉತ್ತಮ ವಿಸ್ತರಣಾ ಸಂಪರ್ಕ ಹೊಂದಿದ್ದು, ತಮ್ಮ ಜಮೀನಿಗೆ ಬೇಕಾದ ತಾಂತ್ರಿಕ ಮಾಹಿತಿಯನ್ನು ಸರಿಯಾದ ಸಮಯಕ್ಕೆ ಪಡೆದುಕೊಂಡು ಜೊತೆಗೆ ಜಮೀನಿನಲ್ಲಿ ಅಳವಡಿಸಿಕೊಂಡು ಉತ್ತಮ ಫಲಿತಾಂಶ ಪಡೆದು ಮಾದರಿ ಕೃಷಿಕರಾಗಿದ್ದಾರೆ. ಆಧುನಿಕ ಮತ್ತು ಸುಸ್ಥಿರ ವಿಧಾನಗಳಿಂದ ಉತ್ತಮ ಫಸಲು ದೊರೆಯುತ್ತಿರುವುದರಿಂದ ಕೃಷಿ ಲಾಭದಾಯಕ ಎಂದು ಇವರ ಅಭಿಮತ.

**ಶ್ರೀಮತಿ ಸವಿತಾ ವಿರೇಂದ್ರಗೌಡ**



**ವಿಳಾಸ: ಕೋಂ ವಿರೇಂದ್ರಗೌಡ**
**ದಾರದಹಳ್ಳಿ ಅಂಚೆ**
**ಮೂಡಿಗೆರೆ ತಾ**
**ಚಿಕ್ಕಮಗಳೂರು ಜಿಲ್ಲೆ**
**ದೂರವಾಣಿ: 08263–260705**
**9481589675**

ಶ್ರೀಮತಿ ಸವಿತಾ ವೀರೇಂದ್ರರವರು ಒಟ್ಟು 5 ಎಕರೆ ಭೂಮಿ ಹೊಂದಿದ್ದು, 3 ಎಕರೆ ರೋಬಸ್ಟಾ ಕಾಫಿ, 1 ಎಕರೆ ಬಾಳೆ, ಮಿಶ್ರ ಬೆಳೆಯಾಗಿ ಅಡಿಕೆ, ಏಲಕ್ಕಿ, ಮತ್ತು ಮೆಣಸು ಬೆಳೆಗಳನ್ನು ಬೆಳೆದಿದ್ದಾರೆ. ತರಕಾರಿ ಬೆಳೆಗಳಾದ ಬೀನ್ಸ್, ಬದನೆ, ಹೀರೆಕಾಯಿಯನ್ನು ಹಾಗೂ ಹೂವಿನ ಕೃಷಿಯಲ್ಲಿ ಚೆಂಡು ಹೂವಿನ ಬೇಸಾಯ ಮಾಡಿ ಆದಾಯವನ್ನು ಗಳಿಸುತ್ತಿದ್ದಾರೆ. ಇವರು ಪ್ರಮುಖವಾಗಿ ಸಮಗ್ರ ಕೃಷಿ ಬೇಸಾಯದಲ್ಲಿ ತೊಡಗಿದ್ದು, 2 ಹೆಚ್.ಎಫ್, 2 ಜರ್ಸಿ, 1 ಗಿರ್, 2 ನಾಟಿ ತಳಿಯ ಹಸುಗಳ ಜೊತೆಗೆ ಗಿರಿರಾಜ, ನಾಟಿ ಮತ್ತು ಟರ್ಕಿ, ಕೋಳಿ ಮತ್ತು ಮೊಲ ಸಾಕಾಣಿಕೆಯನ್ನು ಮಾಡುತ್ತಿದ್ದಾರೆ. ಹಸುಗಳಿಂದ ದೊರೆಯುವ ಸಗಣಿಯನ್ನು ಕಡಿಮೆ ಖರ್ಚಿನ ಗೋಬರ್ ಗ್ಯಾಸ್ ಘಟಕಕ್ಕೆ ಬಳಸಿಕೊಳ್ಳುವುದರ ಜೊತೆಗೆ ಎರೆಗೊಬ್ಬರ ತಯಾರಿಸಿ ತಮ್ಮ ತಾಕಿನಲ್ಲಿ ಉಪಯೋಗಿಸುತ್ತಿದ್ದಾರೆ. ಜೇನು ಸಾಕಾಣಿಕೆ, ಅಜೋಲ್ಲ ತೊಟ್ಟಿ, ಕೃಷಿ ಹೊಂಡದಲ್ಲಿ ಮೀನು ಸಾಕಾಣಿಕೆ ಮಾಡಿ ಯಶಸ್ವಿ ರೈತ ಮಹಿಳೆಯಾಗಿ ಹೊರ ಹೊಮ್ಮಿದ್ದಾರೆ.

ಇವರು ತಮ್ಮ ಜಮೀನಿನಲ್ಲಿ ಮಳೆ ನೀರು ಕೊಯ್ಲು ಪದ್ಧತಿಯಲ್ಲಿ ಕೃಷಿ ಹೊಂಡ, ಇಂಗು ಗುಂಡಿ ಮತ್ತು ಚರಂಡಿ ನಿರ್ಮಾಣ ಮಾಡಿದ್ದು ಇದರ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.

ಶ್ರೀಮತಿ ಸವಿತಾರವರು ಕೃಷಿ ಇಲಾಖೆಯ ಆತ್ಮಯೋಜನೆಯಡಿಯಲ್ಲಿ ಪ್ರಗತಿಪರ ರೈತ ಮಹಿಳೆ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಜೆ.ಸಿ.ಐ ಮೂಡಿಗೆರೆ ಸಂಸ್ಥೆಯ ವತಿಯಿಂದ ಸಾವಯವ ಕೃಷಿ ಮಹಿಳೆ ಎಂದು ಪುರಸ್ಕರಿಸಿದೆ. ಸ್ಥಳೀಯ ಪರಿಕರಗಳನ್ನು ಉಪಯೋಗಿಸಿಕೊಂಡು ಆದಾಯೋತ್ಪನ್ನ ಚಟುವಟಿಕೆಯಾಗಿ ಫಿನಾಯಿಲ್ ತಯಾರಿಕೆ, ಸೋಪಾಯಿಲ್, ಕೀಟ ನಿಯಂತ್ರಣ ಔಷಧಿ, ಅಮೃತಾಂಜನ್, ಮೀನಿನ ಎಣ್ಣೆ, ಕಣ್ಣು ಪೊರೆ ನಿಯಂತ್ರಣ ಔಷಧಿ, ಹಲ್ಲುಜ್ಜುವ ಪುಡಿಯನ್ನು ತಯಾರಿಸುತ್ತಿದ್ದಾರೆ.

ಕೃಷಿ, ಹೈನುಗಾರಿಕೆಗೆ ಸಂಬಂಧಿತ ವಿವಿಧ ತರಬೇತಿಗಳಲ್ಲಿ ಭಾಗವಹಿಸಿ ಅವುಗಳ ಉಪಯೋಗವನ್ನು ಪಡೆದು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿರುತ್ತಾರೆ. ತಮ್ಮ ತೋಟಕ್ಕೆ ಭೇಟಿ ನೀಡುವ ರೈತ/ರೈತ ಮಹಿಳೆಯರಿಗೆ ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿರುವ ತಂತ್ರಜ್ಞಾನಗಳ ಮಾಹಿತಿ ನೀಡುತ್ತಾರೆ.

ಕೃಷಿಕ ಮತ್ತು ನಿರಂತರ ಪತ್ರಿಕೆಗಳ ಸದಸ್ಯತ್ವವನ್ನು ಹೊಂದಿದ್ದು, ಶ್ರೀ ಮೆಣಸಮ್ಮ ಸ್ವಸಹಾಯ ಸಂಘ ಮತ್ತು ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆಯ ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರಾಗಿದ್ದರು.

**ಶ್ರೀಮತಿ ಗೀತಾ ಶ್ರೀನಿವಾಸ್**

**ವಿಳಾಸ: ಕೋಂ ಶ್ರೀನಿವಾಸ್**
**ಕಾಳಗೆರೆ, ನೆಲ್ಲೂರು (ಪೋ)**
**ಶೃಂಗೇರಿ ತಾ॥**
**ಮೊಬೈಲ್ ಸಂ.:9481650932**

ಶ್ರೀಮತಿ ಗೀತಾ ಶ್ರೀನಿವಾಸ್ ರವರು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ನೆಲ್ಲೂರು ಗ್ರಾಮದ ಪ್ರಗತಿಪರ ರೈತ ಮಹಿಳೆಯಾಗಿದ್ದು 7 ಎಕರೆ 14 ಗುಂಟೆಯಲ್ಲಿ ಕಾಪಿ, ಕಾಳು ಮೆಣಸು, ಅಡಿಕೆ ಮತ್ತು ಭತ್ತದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇವರು ಸಾವಯವ ಕೃಷಿಯಲ್ಲಿ ಸ್ಲರಿಯನ್ನು ನೇರವಾಗಿ ತೋಟಗಾರಿಕಾ ಬೆಳೆಗಳಿಗೆ ಹಾಯಿಸಿ ರಾಸಾಯನಿಕ ಗೊಬ್ಬರಗಳ ಬಳಕೆಯ ಪ್ರಮಾಣವನ್ನು ಕಡಿಮೆ ಮಾಡುವುದರ ಜೊತೆಗೆ ಕೊಟ್ಟಿಗೆ ಗೊಬ್ಬರ ಹಾಗೂ ಕೋಳಿಗೊಬ್ಬರದ ಬಳಕೆಯನ್ನು ಮಾಡುತ್ತಿದ್ದಾರೆ. ಇವರು ಕೃಷಿಯ ಜೊತೆಗೆ ಇತರೆ ಉಪಕಸುಬುಗಳಾಗಿ ಕೋಳಿ ಸಾಕಾಣಿಕೆ, ಹಸು ಸಾಕಾಣಿಕೆ ಹಾಗೂ ಜೇನು ಕೃಷಿಯನ್ನು ಮಾಡುತ್ತಿದ್ದು ಹೆಚ್ಚಿನ ಇಳುವರಿ ಹಾಗೂ ಆದಾಯನ್ನು ಪಡೆದಿರುತ್ತಾರೆ. ಶ್ರೀಮತಿ ಗೀತಾರವರು ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ ಹಾಗೂ ಪಶು ಸಂಗೋಪನಾ ಇಲಾಖೆಗಳಲ್ಲಿ ತಜ್ಞರ ಸಲಹೆ ಮಾರ್ಗದರ್ಶನ ಪಡೆದುಕೊಂಡು ತಂತ್ರಜ್ಞಾನವನ್ನು ವೈಜ್ಞಾನಿಕ ರೀತಿಯಲ್ಲಿ ಅಳವಡಿಸಿಕೊಂಡು ಇತರ ರೈತ ಮಹಿಳೆಯರಿಗೂ ತಿಳಿಸಿ ನೆರವು ನೀಡುತ್ತಿದ್ದಾರೆ. ಇವರು ಪ್ರಸ್ತುತ ಶೃಂಗೇರಿ ತಾಲ್ಲೂಕಿನ, ತಾಲ್ಲೂಕು ಪಂಚಾಯತಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು, ಕೃಷಿ ಹಾಗೂ ರೈತ ಮಹಿಳೆಯರ ಮೇಲೆ ಅಪಾರ ಕಾಳಜಿಯನ್ನು ವಹಿಸಿ ರೈತಾಪಿ ವರ್ಗವನ್ನು ಮೇಲೆತ್ತಲು ಶ್ರಮಿಸುತ್ತಾ ಈ ಭಾಗದ ಪ್ರಗತಿಪರ ರೈತ ಮಹಿಳೆಯಾಗಿ ಹೊರಹೊಮ್ಮಿದ್ದಾರೆ.

**ಹೆಚ್ಚಿನ ಮಾಹಿತಿಗಾಗಿ:**

ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ,
ಹ್ಯಾಂಡ್ ಪೋಸ್ಟ್, ಮೂಡಿಗೆರೆ–577132
ಚಿಕ್ಕಮಗಳೂರು ಜಿಲ್ಲೆ
ದೂರವಾಣಿ ಸಂಖ್ಯೆ: 08263–228198
ಮಿಂಚಂಚೆ: kvkmudigere@gmail.com
kvk.Chikkamagaluru@icar.gov.in
http://www.kvkchikkamagaluru.in/